
ಸಂಪುಟ 24 ಸಂಚಿಕೆ 21-22
ಜೂನ್ 2, 2002 ಬೆಲೆ ರೂ. 3.00

ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ

ಸಿಪಿಐ(ಎಂ) ಕೇಂದ್ರ ಸಮಿತಿ ಸಭೆ

ಹಿರಿಯ ಕಮ್ಯೂನಿಸ್ಟ್ ಚೇತನಗಳು ಬೆಂಗಳೂರಿನಲ್ಲಿ



ಜನಪರ ಪರ್ಯಾಯ ಕಟ್ಟೋಣ-ಬನ್ನಿ

ಗುಜರಾತ್ ಹತ್ಯಾಕಾಂಡ

ತಲ್ಲಣದ ಅನುಭವ




ವಿಶ್ವದ ಓದುಗರತ್ತ ಅರಿವಿನ ಜಾಲದಲ್ಲಿ ಐಕ್ಯರಂಗ



ಕೊಡಗು ಯುವತಿಯ ಅಪಹರಣ ಯಾರೀ ಪ್ರಬಲರು?

ಐದನೇ ಬಾರಿಗೆ ಎಡರಂಗ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 96

ಸರಕಾರ ರಚಿಸಲು ವಾಜಪೇಯಿಗೆ ಆಹ್ವಾನ ಬಂದ ದಿನ ಸಂಜೆಯೇ ನಾನು ಕಲ್ಕತ್ತಕ್ಕೆ ಮರಳಿದೆ. ಪಕ್ಷದ ರಾಜ್ಯಸಮಿತಿ ಸಭೆ ನಿಗದಿಯಾಗಿತ್ತು. ಮೇ 20 ರಂದು ಐದನೇ ಬಾರಿಗೆ ಎಡರಂಗ ಅಧಿಕಾರ ಸ್ವೀಕರಿಸಿತು.

ಕೇರಳದ ಫಲಿತಾಂಶವೂ ಹೊರಬಿದ್ದಿತು. ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅನ್ನು ಜನರು ತಿರಸ್ಕರಿಸಿದ್ದರು. ಸಿಪಿಐ(ಎಂ) ನಾಯಕತ್ವದ ಎಲ್‌ಡಿಎಫ್ ಜಯಭೇರಿ ಬಾರಿಸಿತು. ಬಂಗಾಳ, ತ್ರಿಪುರಾದ ನಂತರ ಕೇರಳದಲ್ಲೂ ನಾವು ಸರಕಾರ ರಚಿಸಿದೆವು. ಅಸ್ಸಾಂನಲ್ಲಿ ಕೂಡ ಕಾಂಗ್ರೆಸ್ ಧೂಳೀಪಟವಾಯಿತು. ಪ್ರಫುಲ್ಲ ಕುಮಾರ್ ಮಹಂತ ನೇತೃತ್ವದ ಎಜಿಪಿ ಅಧಿಕಾರಕ್ಕೆ ಬಂದಿತು. ಸಂಯುಕ್ತ ರಂಗ ರಚನೆಯಲ್ಲಿ ಮಹಂತ ಒಂದು ಮುಖ್ಯ ಪಾತ್ರ ನಿರ್ವಹಿಸಿದ್ದರು. ರಂಗದ ಇನ್ನೊಂದು ಪಕ್ಷ ಡಿಎಂಕೆ ತಮಿಳುನಾಡಿನಲ್ಲಿ ಎಐಎಡಿಎಂಕೆಯನ್ನು ಸೋಲಿಸಿತು. ಕರುಣಾನಿಧಿ ಮುಖ್ಯಮಂತ್ರಿಯಾದರು. ಮಾರ್ಚ್ 31 ರಂದು ಪಕ್ಷ ತೊರೆದ ಜಿ.ಕೆ.ಮೂಪನಾರ್ ನೇತೃತ್ವದ ತಮಿಳು ಮಾನಿಲ ಕಾಂಗ್ರೆಸ್(ಟಿಎಂಸಿ) ಜತೆ ಡಿಎಂಕೆ ರಂಗವೊಂದನ್ನು ರಚಿಸಿಕೊಂಡಿತು. ಚಿದಂಬರಂ ಮತ್ತು ಅರುಣಾಚಲಂ ಕೂಡ ರಾಜಿನಾಮೆ ನೀಡಿದ ನಂತರ ಟಿಎಂಸಿ ಸೇರಿದರು.

ಸಂಸದೀಯ ಚುನಾವಣೆಗಳಲ್ಲಿ ಸ್ಪರ್ಧಿಸಿದ ನಂತರ ಅವರಿಬ್ಬರೂ ಸಂಯುಕ್ತ ರಂಗ ಸರ್ಕಾರದ ಸಚಿವರಾದರು. ಚಿದಂಬರಂಗೆ ಮಹತ್ವದ ಹಣಕಾಸು ಖಾತೆ ಸಿಕ್ಕಿತು.

ಸಂಯುಕ್ತ ರಂಗ ಸರಕಾರ ನಾವು ಬಯಸಿದ ರೀತಿಯದ್ದಾಗಿರಲಿಲ್ಲ. ಆದರೆ ಬಿಜೆಪಿಯೇತರ, ಜಾತ್ಯಾತೀತ ಸರಕಾರದ ರಚನೆ ಎಲ್ಲಕ್ಕಿಂತ ಮಹತ್ವದ್ದಾಗಿತ್ತು. ಸಮಸ್ಯೆಗಳು ಸಹಜವಾಗಿದ್ದವು. ನಮ್ಮ ಮುಂದಿರುವ ಹೊಸ ಜವಾಬ್ದಾರಿಗಳಿಗನುಗುಣವಾಗಿ ನಮ್ಮ ಪ್ರಭಾವವನ್ನು ವಿಸ್ತರಿಸಿಕೊಳ್ಳುವುದು ನಮ್ಮ ಯೋಜನೆಯಾಗಿತ್ತು. ಅಂತಿಮ ಗುರಿ ಸಾಧಿಸಲು ಹೋರಾಟವನ್ನು ಮುಂದುವರಿಸಬೇಕು. ಈ ವಿಚಾರದಲ್ಲಿ ಯಾವುದೇ ಅಡ್ಡದಾರಿಯಿರಲು ಸಾಧ್ಯವಿಲ್ಲ.

ನಾನು ಸೆಪ್ಟೆಂಬರ್‌ನಲ್ಲಿ ಲಂಡನ್‌ಗೆ ಹೋದೆ. ಬುದ್ಧದೇವ ಭಟ್ಟಾಚಾರ್ಯ ನನ್ನ ಜತೆಗಿದ್ದರು. ಷೇಕ್ಸ್‌ಪಿಯರ್ ಜನ್ಮಸ್ಥಳದಲ್ಲಿ ಟಾಗೋರ್ ಪ್ರತಿಮೆ ಅನಾವರಣ ಕಾರ್ಯಕ್ರಮವಿತ್ತು. ನಾನು ಲಂಡನ್‌ನಲ್ಲಿದ್ದಾಗ ಲಖುಭಾಯಿ ಪಾಠಕ್ ಹಗರಣ ಬೆಳಕಿಗೆ ಬಂತು. ರಾವ್ ಸರ್ಕಾರ ಮತ್ತೆ ಸಮಸ್ಯೆಗೆ ಸಿಲುಕಿತು. 1996 ಸೆಪ್ಟೆಂಬರ್ 21 ರಂದು ರಾವ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ನೀಡಿದರು. ಆದರೆ ಸಂಸದೀಯ ಪಕ್ಷ ನಾಯಕನ ಸ್ಥಾನವನ್ನು ಬಿಟ್ಟುಕೊಡಲಿಲ್ಲ. ಏನಿದ್ದರೂ, ಮುಂದಿನ ಕೆಲ ತಿಂಗಳಲ್ಲಿ ಎಐಸಿಸಿ ಮುಖ್ಯಸ್ಥ ಸೀತಾರಾಂ ಕೇಸರಿ ಆ ಸ್ಥಾನದಿಂದಲೂ ರಾವ್‌ರನ್ನು ಕಿತ್ತುಹಾಕಿದರು. ಇದು ನೀತಿಯ ಭಾಗವೇನೂ ಆಗಿರಲಿಲ್ಲ. ಪಕ್ಷದ ಆಂತರಿಕ ಕಚ್ಚಾಟದ ಫಲವಾಗಿತ್ತು ಅಷ್ಟೇ. ಕೇಸರಿ ಸಿಪಿಪಿ(ಕಾಂಗ್ರೆಸ್ ಸಂಸದೀಯ ಪಕ್ಷ) ಮುಖ್ಯಸ್ಥರೂ ಆದರು.

ಜಮ್ಮು ಮತ್ತು ಕಾಶ್ಮೀರ ಹಾಗೂ ಉತ್ತರ ಪ್ರದೇಶ ವಿಧಾನಸಭೆಗಳಿಗೆ ಚುನಾವಣೆ ನಡೆಯಿತು. 1987 ರಲ್ಲಿ ಚುನಾವಣೆ ನಡೆದಂದಿನಿಂದ ಕಾಶ್ಮೀರದಲ್ಲಿ ಏನು ನಡೆದಿದೆ ಎನ್ನುವುದು ದೇಶಕ್ಕೆ ಗೊತ್ತು. ಫಾರೂಕ್ ಅಬ್ದುಲ್ಲಾರ ನ್ಯಾಷನಲ್ ಕಾನ್ಫರೆನ್ಸ್ ಅಧಿಕಾರಕ್ಕೆ ಬಂದಿತ್ತು. ಅವರ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಸುರ್ಜಿತ್ ನಮ್ಮ ಪಕ್ಷವನ್ನು ಪ್ರತಿನಿಧಿಸಿದ್ದರು. ನ್ಯಾಷನಲ್ ಕಾನ್ಫರೆನ್ಸ್ ರಂಗದ ಭಾಗವಾಗಿತ್ತು. ಈಗ ಸ್ನೇಹಯುತ ಅಬ್ದುಲ್ಲಾ ಸರಕಾರವಿರುವುದರಿಂದ ಕೇಂದ್ರ ಸರ್ಕಾರ ಕಾಶ್ಮೀರ ಬಿಕ್ಕಟ್ಟು ಪರಿಹಾರಕ್ಕೆ ನೆರವು ನೀಡಬಹುದಿತ್ತು. ಸಂಯುಕ್ತ ರಂಗ ಸರಕಾರ ಅದನ್ನೇ ಮಾಡಿತು.

ಮತ್ತೆ ಬಾಂಗ್ಲಾದೇಶಕ್ಕೆ

ಷೇಕ್ ಹಸೀನಾರ ಹೊಸ ಅವಾಮಿ ಲೀಗ್ ಸರಕಾರ ನನ್ನನ್ನು ಢಾಕಾಕ್ಕೆ ಆಹ್ವಾನಿಸಿತು. ಬಾಂಗ್ಲಾದೇಶದ ವಿದೇಶಾಂಗ ಸಚಿವರೂ ಕಲ್ಕತ್ತಕ್ಕೆ ಆಗಮಿಸಿ ನನ್ನನ್ನು ಆಹ್ವಾನಿಸಿದರು. ಆದರೆ ನನ್ನ ಕಾರ್ಯಬಾಹುಳ್ಯದಿಂದಾಗಿ ಹೆಚ್ಚು ದಿನ ಬಾಂಗ್ಲಾಕ್ಕೆ ಭೇಟಿ ನೀಡಲಾಗಲಿಲ್ಲ. ಬುದ್ಧದೇವ ಭಟ್ಟಾಚಾರ್ಯ ಮತ್ತು ಹಣಕಾಸು ಸಚಿವ ಅಸೀಮ್ ದಾಸ್ ಗುಪ್ತಾರ ಜತೆ ನವೆಂಬರ್ 27 ರಂದು ನಾನು ಢಾಕಾಕ್ಕೆ ಹೊರಟೆ. ಈ ಬಾರಿಯೂ ನಾನು ಬಾರ್ಡಿಗೆ ಹೋದೆ. ಬಾಲ್ಯದಲ್ಲಿದ್ದ ಭಾವನಾತ್ಮಕ ಸನ್ನಿವೇಶ ಈಗಲೂ ಇರುವಂತಿಲ್ಲ ಅಲ್ಲವೇ? **ನನ್ನ ಪೂರ್ವಜರ ಮನೆಯನ್ನು ಬಾಂಗ್ಲಾದೇಶ ಸರಕಾರಕ್ಕೆ ಅರ್ಪಿಸಿದೆ. ಅದನ್ನು ಜನರ ಕಲ್ಯಾಣಕ್ಕೆ ಬಳಸಬೇಕೆಂದು ಕೋರಿದೆ. ಹಾಗೇ ಮಾಡುವುದಾಗಿ ಸರಕಾರ ತಿಳಿಸಿತು.**

ಪ್ರಸ್ತಾವಿತ ಜಲಒಪ್ಪಂದಗಳ ಬಗ್ಗೆ ಜನರು ನನಗೆ ಪ್ರಶ್ನೆಗಳ ಸುರಿಮಳೆಗರೆದರು. ಪತ್ರಕರ್ತರು ನನ್ನ ಪ್ರತಿಕ್ರಿಯೆಗೆ ದುಂಬಾಲು ಬಿದ್ದರು. ಒಪ್ಪಂದಕೇಂದ್ರ ಸರ್ಕಾರದೊಂದಿಗೆ ಮಾಡಿಕೊಳ್ಳಲಿಕ್ಕಿರುವುದು. ಆದರೆ ಒಡಂಬಡಿಕೆಯನ್ನು ರೂಪಿಸುವಾಗ ಎರಡೂ ದೇಶಗಳ ಹಿತವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ ಎಂದು ನಾನು ಹೇಳಿದೆ.

ನೀರು ಹಂಚಿಕೆ ಒಪ್ಪಂದ

ಡಿಸೆಂಬರ್ ಆದಿಯಲ್ಲಿ ನಾನು ದೆಹಲಿಯಲ್ಲಿ ಪ್ರಧಾನಿ ದೇವೇಗೌಡರನ್ನು ಭೇಟಿಯಾದೆ. ಷೇಖ್ ಹಸೀನಾ ಮರುದಿನ ಬಂದರು. ಚರ್ಚೆಯಲ್ಲಿ ತಜ್ಞರು ಕೂಡ ಪಾಲ್ಗೊಂಡರು. ಅಂತಿಮವಾಗಿ ಡಿಸೆಂಬರ್ 12 ರಂದು ಐತಿಹಾಸಿಕ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಆದರೆ ಟೀಕೆ ಮಾಡಲು ಯಾವಾಗಲೂ ಕೆಲವು ಜನರಿರುತ್ತಾರೆ. ಬಂಗಾಳದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಗದ್ದಲ ಆರಂಭಿಸಿದವು. ರಾಜಕೀಯ ಪಕ್ಷಗಳು ತೋರಿಸಬೇಕಾದ ಮೂಲಭೂತ ಜವಾಬ್ದಾರಿಯುತ ಜವಾಬ್ದಾರಿ ಬಗ್ಗೆಯೇ ಅವುಗಳಿಗೆ ಏನೂ ಗೊತ್ತಿಲ್ಲವೆಂಬುದನ್ನು ಅದು ತೋರಿಸಿತು. ಒಡಂಬಡಿಕೆಯಲ್ಲಿ ಬಂಗಾಳದ ಆಸಕ್ತಿಗಳನ್ನು ಚೆನ್ನಾಗಿ ರಕ್ಷಿಸಲಾಗಿತ್ತು. ಕಲ್ಕತ್ತ ಬಂದರಿನ ಹೂಳೆತ್ತುವ ಕಾರ್ಯಕ್ಕೆ ಕೇಂದ್ರ ಸರ್ಕಾರ ಹಣ ನೀಡಲಿದೆ ಎಂದು ಪ್ರಧಾನಿ ನನಗೆ ಆಶ್ವಾಸನೆ ಕೊಟ್ಟರು. ಅದಕ್ಕೆ ವಾರ್ಷಿಕ 220 ಕೋಟಿ ರೂಪಾಯಿ ವೆಚ್ಚವಾಗುತ್ತಿತ್ತು. ಬಂಗಾಳಕ್ಕೆ ಹೆಚ್ಚುವರಿಯಾಗಿ 13,000 ಕ್ಯೂಸೆಕ್ಸ್ ನೀರನ್ನು ಖಾತರಿಪಡಿಸಲು ಸಂಕೋಶ್ ಯೋಜನೆಯನ್ನು ಒಂಬತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವುದಾಗಿಯೂ ಅವರುಹೇಳಿದರು. ನಾಲ್ಕು ಸಾವಿರ ಮೆಗಾವಾಟ್ ಹೆಚ್ಚುವರಿ ವಿದ್ಯುತ್ ರಾಜ್ಯಕ್ಕೆ ಬರಲಿತ್ತು. ಪರಿಸರಕ್ಕೆ ಅಪಾಯವಾಗದ ರೀತಿಯಲ್ಲಿ ಇವೆಲ್ಲವನ್ನು ಮಾಡಲಾಗುತ್ತಿತ್ತು. ಕಲ್ಕತ್ತ ಬಂದರಿಗೆ ಸಂಬಂಧಿಸಿ ಕೇಂದ್ರ ಸರ್ಕಾರವೊಂದು ಇದೇ ಮೊದಲ ಬಾರಿಗೆ ಕೆಲವು ಅನುಕೂಲಕರ ಕ್ರಮಗಳನ್ನು ಕೈಗೊಂಡಿತ್ತು.

ಚೀನದೊಂದಿಗೆ ಸಂಬಂಧ ದೃಢಗೊಳಿಸಲೂ ಪ್ರಯತ್ನಗಳನ್ನು ನಡೆಸಲಾಯಿತು. ನಾನು ಢಾಕಾಕ್ಕೆ ಹೊರಟ ಒಂದು ದಿನದ ನಂತರ, ನವೆಂಬರ್ 28ರಂದು ಅಧ್ಯಕ್ಷ ಜಿಯಾಂಗ್ ಜೆಮಿನ್ ಭಾರತಕ್ಕೆ ಭೇಟಿ ನೀಡಿದರು. ಪರಮಾಣುಶಕ್ತಿ ವಿಚಾರದಲ್ಲಿ ಸರಕಾರದ ದೊಡ್ಡ ಶಕ್ತಿಗಳಿಗೆ ತಲೆ ಬಾಗಲಿಲ್ಲ. ಅಲಿಪ್ತ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸುವುದರಲ್ಲಿ ಮುಂದುವರೆಸಿತು. ಹಿಂದೆ ಕಾಂಗ್ರೆಸ್ ಆಡಳಿತ ಅವಧಿಯಲ್ಲಿ ಯಾವತ್ತೂ ಇಂಥ ವಿದ್ಯಮಾನಗಳು ನಡೆದಿರಲಿಲ್ಲ.

ಆದರೆ ಆರ್ಥಿಕ ನೀತಿ ವಿಚಾರದಲ್ಲಿ ಪ್ರಶ್ನೆ ಹಾಗೆಯೇ ಮುಂದುವರೆಯಿತು. ರಾವ್‌ರ ತಪ್ಪು ನೀತಿಗಳಿಂದ ವಿಮುಖವಾಗಲು ಯಾವುದೇ ಪ್ರಮುಖ ಪ್ರಯತ್ನ ಮಾಡಲಾಗಲಿಲ್ಲ. ಈ ವಿಚಾರದಲ್ಲಿ ಎಡಪಕ್ಷಗಳು ತತ್ವಬದ್ಧ ನಿಲುವಷ್ಟೇ ತಾಳಿದವು. ಕಾಂಗ್ರೆಸ್ಸಿನ ವಿನಾಶಕಾರಿ ನೀತಿಗಳಿಂದ ದೇಶವನ್ನು ದೂರಕ್ಕೊಯ್ಯಲೆಂದೇ ತೃತೀಯ ಪರ್ಯಾಯ ರಚನೆಯಾಗಿದ್ದು ಎಂಬುದನ್ನು ಅರಿಯುವುದು ಅಗತ್ಯವಾಗಿತ್ತು.

ರಾಜಕೀಯದಲ್ಲಿ ನೈತಿಕತೆ ಪಾತಾಳಕ್ಕೆ ಇಳಿದಿತ್ತು. ಉತ್ತರ ಪ್ರದೇಶದಲ್ಲಿ ಅದು ಎದ್ದು ಕಾಣುತ್ತಿತ್ತು. ಅಲ್ಲಿ ಕಾಂಗ್ರೆಸ್ ಪಕ್ಷ ನೆಲಕಚ್ಚಿತ್ತು. ಯಾವುದೇ ಪಕ್ಷ ಬಹುಮತ ಗಳಿಸಲಿಲ್ಲ. ಚುನಾವಣೆಗಳ ನಂತರ ವಿಧಾನಸಭೆ ಅಧಿವೇಶನಕ್ಕೆ ಮುನ್ನ ರಾಷ್ಟ್ರಪತಿ ಆಡಳಿತವನ್ನು ಹೇರಲಾಯಿತು. ಆದರೆ 1997 ಮಾರ್ಚ್‌ನಲ್ಲಿ ಬಿಎಸ್‌ಪಿ ಮತ್ತು ಬಿಜೆಪಿ ಸೇರಿ ಇದ್ದಕ್ಕಿದ್ದಂತೆ ಸರಕಾರವನ್ನು ರಚಿಸಿದವು. ಚುನಾವಣೆಗಳಲ್ಲಿ ಅವು ಪರಸ್ಪರ ಹೊಡೆದಾಡಿದ್ದವು! ಅಧಿಕಾರ ಗದ್ದುಗೆಯೇ ಅವರ ಪರಮೋನ್ನತ ಧ್ಯೇಯವಾಗಿತ್ತು! ಅದರಲ್ಲೂ ಆರಾರು ತಿಂಗಳಿಗೆ ಅಧಿಕಾರ ಹಂಚಿಕೊಳ್ಳುವ ಒಪ್ಪಂದ!! ಆರಂಭದಲ್ಲಿ ಬಿಎಸ್‌ಪಿಯ ಮಾಯಾವತಿ ಮುಖ್ಯಮಂತ್ರಿಯಾದರು.

ದೇವೆಗೌಡ ಪತನ

ಸಂಯುಕ್ತರಂಗ ಸರಕಾರದ ಸುಗಮ ನಿರ್ವಹಣೆಗೆ ಕಾಂಗ್ರೆಸ್ ಬಿಡುವುದಿಲ್ಲ ಎನ್ನುವುದು ಸ್ಪಷ್ಟವಾಗಿತ್ತು. ಆ ಪಕ್ಷ ಸಹಜ ಆಯ್ಕೆಯಾಗಿ ಬೆಂಬಲ ಕೊಟ್ಟಿರಲಿಲ್ಲ. ಸ್ವಂತ ಬಲದ ಮೇಲೆ ತನಗೆ ಸರಕಾರ ರಚಿಸಲು ಆಗದಿರುವುದರಿಂದ ಅದು ಬೆಂಬಲ ನೀಡುವುದು ಅನಿವಾರ್ಯವಾಗಿತ್ತು. ಹಠಾತ್ತನೆ, ಮಾರ್ಚ್ 30ರಂದು ಸೀತಾರಾಂ ಕೇಸರಿ ಸರಕಾರದಿಂದ ಬೆಂಬಲವನ್ನು ವಾಪಸ್ ಪಡೆದರು. ಅವರು ಹಾಸ್ಯಾಸ್ಪದ ಆರೋಪ ಮಾಡಿದರು. ಕೋಮುವಾದದ ವಿರುದ್ಧ ಹೋರಾಡಲು ಸರಕಾರ ಕ್ರಮವನ್ನು ಕೈಗೊಳ್ಳುತ್ತಿಲ್ಲ ಎಂಬುದೇ ಆ ಆಪಾದನೆ. ಅಥವಾ ಅವರಿಗೆ ಆ ರೀತಿ ಕಂಡಿತೋ ಏನೋ!

ಸರಕಾರ ಸಂಸತ್ತಿನಲ್ಲೇ ಪತನಗೊಳ್ಳಬೇಕು ಎಂದು ನಾವು ಹೇಳಿದೆವು. ವಿಶ್ವಾಸದ್ರೋಹಕ್ಕೆ ಜನರೇ ಸಾಕ್ಷಿಯಾಗಬೇಕಿತ್ತು. ಏಪ್ರಿಲ್ 11ರಂದು ವಿಶ್ವಾಸಗೊತ್ತುವಳಿ ಮೇಲೆ ಮತದಾನ ನಡೆಯಿತು. ಕಾಂಗ್ರೆಸ್ ಮತ್ತು ಬಿಜೆಪಿ ಗೊತ್ತುವಳಿ ವಿರುದ್ಧ ಮತ ನೀಡಿದವು. ಸರಕಾರ ಕುಸಿಯಿತು.

ಸರಕಾರ ರಚಿಸುವ ಹಕ್ಕು ಮಂಡಿಸಿ ಕಾಂಗ್ರೆಸ್ ರಾಷ್ಟ್ರಪತಿಗೆ ಪತ್ರ ಬರೆಯಿತು. ಅದಕ್ಕೆ ಕೇವಲ 144 ಸದಸ್ಯರಿದ್ದರು. ಸಂಯುಕ್ತ ರಂಗದ ಯಾವುದೇ ಅಂಗಪಕ್ಷ ಕಾಂಗ್ರೆಸ್ ಒತ್ತಡಕ್ಕಾಗಲೀ ಆಮಿಷಕ್ಕಾಗಲೀ ಬಲಿ ಬೀಳಲಿಲ್ಲ. ಹತಾಶೆಗೊಂಡ ಕಾಂಗ್ರೆಸ್ ಹಿಂದೆ ಸರಿಯಿತು. ಸಂಯುಕ್ತರಂಗ ಸರಕಾರವೇ ಇರಬಹುದು, ಆದರೆ ದೇವೇಗೌಡ ಪ್ರಧಾನಿಯಾಗಿ ಇರಬಾರದು ಎಂಬ ಷರತ್ತು ಹಾರಿತು. ದೇವೆಗೌಡ ಉತ್ತಮ ಕೆಲಸ ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್‌ನ ಮನವೊಲಿಸಲು ನಾವು ಪ್ರಯತ್ನಿಸಿದೆವು. ಆದರೆ ಕೇಸರಿ ಹಠಮಾರಿತನವನ್ನು ಬಿಡಲಿಲ್ಲ. ಕೇಸರಿಗೆ ದೇವೇಗೌಡ ಸೂಕ್ತ ಪ್ರಾಮುಖ್ಯತೆ ನೀಡುತ್ತಿರಲಿಲ್ಲವೆನ್ನುವುದೇನೋ ಹೌದು. ಆದರೆ ಕೇಸರಿ ಹೇಳುತ್ತಿರುವುದರ ಹಿಂದೆ ಯಾವುದೇ ಸಕಾರಣ ಇರಲಿಲ್ಲ.

ಸಂಯುಕ್ತರಂಗದ ಸಂಚಾಲಕ ಸಮಿತಿ ಸಭೆ ಸೇರಿ ಇಂದ್ರಕುಮಾರ್ ಗುಜ್ರಾಲ್‌ರನ್ನು ಸಂಸದೀಯ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಿತು. ಅವರು ದೇವೇಗೌಡರ ಸಂಪುಟದ ವಿದೇಶಾಂಗ ಸಚಿವರಾಗಿದ್ದರು. ವಿ.ಪಿ.ಸಿಂಗ್ ಸರಕಾರದಲ್ಲಿ ಕೂಡ ಅವರು ಇದೇ ಹೊಣೆಗಾರಿಕೆಯನ್ನು ನಿಭಾಯಿಸಿದ್ದರು. ಅವರು ತುರ್ತು ಪರಿಸ್ಥಿತಿಯ ನಂತರ ಕಾಂಗ್ರೆಸ್‌ನ್ನು ಬಿಟ್ಟಿದ್ದರು. 70ರ ದಶಕದಲ್ಲಿ ಇಂದಿರಾಗಾಂಧಿ ಸರಕಾರದಲ್ಲಿ ಮಂತ್ರಿಯಾಗಿದ್ದರು. ಆಡಳಿತದಲ್ಲಿ ಅವರಿಗೆ ಅನುಭವವಿತ್ತು. ಸಂಯುಕ್ತರಂಗ ಸರಕಾರ ಎರಡನೇ ಹಂತದ ಕೆಲಸ ಆರಂಭಿಸಿತು.

ದಕ್ಷಿಣ ಆಫ್ರಿಕ ಪ್ರವಾಸ

ಕೆಲವೇ ತಿಂಗಳ ನಂತರ ನಾನು ಮತ್ತೆ ವಿದೇಶ ಪ್ರವಾಸಕ್ಕೆ ಹೋದೆ. ಮೊದಲು ಲಂಡನ್‌ಗೆ ತೆರಳಿ ಅಲ್ಲಿಂದ ದಕ್ಷಿಣ ಆಫ್ರಿಕಾಕ್ಕೆ ಹೋದೆ. ಜುಲೈ 22ರಿಂದ 30ರವರೆಗೆ ನಾನು ಅಲ್ಲಿದ್ದೆ. ನನ್ನ ಜತೆ ಪತ್ನಿಯೂ ಇದ್ದರು. ಆ ದೇಶಕ್ಕೆ ಭೇಟಿ ನೀಡಬೇಕೆಂಬುದು ನನ್ನ ಬಹುಕಾಲದ ಬಯಕೆಯಾಗಿತ್ತು. ವರ್ಣಭೇದ ನೀತಿಯ ನಂತರದ ದಕ್ಷಿಣ ಆಫ್ರಿಕ ಹೇಗಿದೆಯೆಂದು ಖುದ್ದಾಗಿ ನೋಡಬೇಕಿತ್ತು. ಉಪಾಧ್ಯಕ್ಷ ಟಾಬೋ ಬೇರೆ ಅಧಿಕೃತ ಆಹ್ವಾನ ನೀಡಿದರು.

ಕಮ್ಯುನಿಸ್ಟರು ನೆಲ್ಸನ್ ಮಂಡೇಲಾರ ಆಫ್ರಿಕದ ರಾಷ್ಟ್ರೀಯ ಕಾಂಗ್ರೆಸ್‌ನ (ಎಎನ್‌ಸಿ) ಮಿತ್ರರಾಗಿದ್ದರು. ಭಾರತದಲ್ಲಿನ ನಮ್ಮ ಪಕ್ಷ ಅವರ ಕರಾಳ ದಿನಗಳ ಅವಧಿಯಲ್ಲಿ ಅವರ ಪ್ರತಿ ಹೆಜ್ಜೆಯಲ್ಲೂ ಬೆಂಬಲ ನೀಡಿತ್ತು. ಪ್ರಿಟೋರಿಯಾದಲ್ಲಿ ಆಗ ಭಾರತದ ಹೈಕಮಿಷನರ್ ಆಗಿದ್ದ; ಮಹಾತ್ಮಾಗಾಂಧಿಯ ಮೊಮ್ಮಗ ಗೋಪಾಲಕೃಷ್ಣ ಶಾಸ್ತ್ರಿ ನನ್ನ ಪ್ರವಾಸದ ವಿವರವನ್ನು ಸಿದ್ಧಪಡಿಸಿದ್ದರು. ಮಂಡೇಲಾ ಸಹಿತ ಉನ್ನತ ನಾಯಕರ ಜತೆ ನಾನು ಸುದೀರ್ಘ ಮಾತುಕತೆ ನಡೆಸಿದೆ.

ಕಾಲಬದಲಾಗಿತ್ತು. ಕರಿಯರು ತೊಂದರೆ ಎದುರಿಸುತ್ತಿರಲಿಲ್ಲ. ದಕ್ಷಿಣ ಆಫ್ರಿಕಾದ ಒಂಬತ್ತು ರಾಜ್ಯಗಳ ಪೈಕಿ ಏಳನ್ನು ಕರಿಯರೇ ಹಾಗೂ ಏಷ್ಯಾ ಮೂಲದವರು ಆಳುತ್ತಿದ್ದರು. ಏನಿದ್ದರೂ ದೇಶದ ಆರ್ಥಿಕತೆಯ ನಿಯಂತ್ರಣ ಮಾತ್ರ ಇನ್ನೂ ಗುತ್ತೇದಾರಿ ಕಂಪನಿಗಳ ಕೈಯಲ್ಲಿತ್ತು.

ಮುಂದುವರಿಯುವುದು

ವೆಬ್‌ಸೈಟ್ ಜಾಲ ಪ್ರವೇಶಿಸಿದ ಐಕ್ಯರಂಗ


'ಕರ್ನಾಟಕದ ಕಾರ್ಮಿಕವರ್ಗ ಹಾಗೂ ಇತರ ಶೋಷಿತರ ಧ್ವನಿಯಾಗಿ ಕಾರ್ಯನಿರ್ವಹಿಸುತ್ತಿರುವ 'ಐಕ್ಯರಂಗ' ವಾರಪತ್ರಿಕೆಯು 'ವೆಬ್‌ಸೈಟ್' ಜಾಲವನ್ನು ಪ್ರವೇಶಿಸುತ್ತಿರುವುದು ತುಂಬ ಹೆಮ್ಮೆಯ ವಿಷಯ. ಐಕ್ಯರಂಗ ವ್ಯವಸ್ಥಾಪಕ ಮಂಡಳಿಗೆ ನಾನು ನನ್ನ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇನೆ" ಎಂದು ಮುಕ್ತಕಂಠದಿಂದ ಪ್ರಶಂಸಿಸಿದವರು ಬೇರೆ ಯಾರೂ ಅಲ್ಲ, ತ್ರಿಪುರಾದ ಯುವಮುಖ್ಯಮಂತ್ರಿ ಕಾಮ್ರೇಡ್ ಮಾಣಿಕ್ ಸರ್ಕಾರ್. ಐಕ್ಯರಂಗ ಪತ್ರಿಕೆಯ 'ವೆಬ್‌ಸೈಟ'ನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಶ್ಲಾಘನೀಯ ಸಾಹಸ

ರಾಜ್ಯದ 'ದುಡಿಯುವ ಜನರ ಪ್ರಾಣಮಿತ್ರ' ನಾಗಿ ಕಳೆದ ನಾಲ್ಕು ದಶಕಗಳಿಂದ ಪ್ರಕಟವಾಗುತ್ತಿರುವ 'ಐಕ್ಯರಂಗ' ವಾರಪತ್ರಿಕೆಯು ಮುದ್ರಣ ಮಾಧ್ಯಮ ರಂಗದ ಸವಾಲುಗಳನ್ನು ಎದುರಿಸುತ್ತಾ, ಓದುಗರಿಗೆ ನ್ಯಾಯ ಒದಗಿಸುವಲ್ಲಿ ಶಕ್ತಿಮೀರಿ ಶ್ರಮಿಸುತ್ತಾ ಬಂದಿದೆ. ಇಂದಿನ ವರ್ಣರಂಜಿತ ಮಾಧ್ಯಮಗಳ ಸ್ಪರ್ಧಾತ್ಮಕ ವ್ಯೂಹದೊಳಗೆ ಐಕ್ಯರಂಗದಂತಹ ಪತ್ರಿಕೆಯನ್ನು ನಿರಂತರವಾಗಿ ನಡೆಸುವುದೇ ಒಂದು ದೊಡ್ಡ ಸಾಹಸ. ಹಾಗಿರುವಾಗ ಐಕ್ಯರಂಗ ಪತ್ರಿಕೆ ವೆಬ್‌ಸೈಟ್ ವ್ಯವಸ್ಥೆಯನ್ನು ಹೊಂದುತ್ತಿರುವುದು ಶ್ಲಾಘನೀಯವಾಗಿದೆ ಎಂಬುದು ಕಾಮ್ರೇಡ್ ಸರ್ಕಾರ್ ಅವರ ಅಭಿಪ್ರಾಯವಾಗಿತ್ತು.

ಯುವಜನರಲ್ಲಿ ಬೇಕು ದೇಶಪ್ರೇಮ

ತಮ್ಮ ಮಾತುಗಳನ್ನು ಮುಂದುವರೆಸಿದ ಕಾಮ್ರೇಡ್ ಮಾಣಿಕ್ ಸರ್ಕಾರ್ "ಕೇಂದ್ರ ಸರ್ಕಾರವು ಅನುಸರಿಸುತ್ತಿರುವ ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣದ ನೀತಿಗಳಿಂದ ದೇಶದ ಕೃಷಿ, ಕೈಗಾರಿಕಾ ರಂಗಗಳ ಮೇಲೆ ಮಾತ್ರವಲ್ಲ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳ ಮೇಲೆಯೂ ಆಕ್ರಮಣ ನಡೆಯುತ್ತಿದೆ. ಮಾಧ್ಯಮ ರಂಗವನ್ನು ಪ್ರವೇಶಿಸಿರುವ ವಿದೇಶಿ ಬಂಡವಾಳವು ಜನತೆಯನ್ನು ಮುಖ್ಯವಾಗಿ ಯುವಕರನ್ನು ದಾರಿ ತಪ್ಪಿಸುತ್ತಿದೆ. ನಮ್ಮ ಸಂಸ್ಕೃತಿಯಲ್ಲಿರುವ ಉದಾತ್ತ ಮೌಲ್ಯಗಳನ್ನು ನಾಶ ಮಾಡತ್ತಾ, ಜನರಲ್ಲಿ ಕೊಳ್ಳಬಾಕ ಸಂಸ್ಕೃತಿಯನ್ನು, ಸ್ವಾರ್ಥ ಮನೋಭಾವವನ್ನು ಬೆಳೆಸುತ್ತಿದೆ" ಎಂದು ವಿಷಾದಿಸಿದರು. ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಮಾಧ್ಯಮ ರಂಗಕ್ಕೆ ಮಹತ್ವದ ಪಾತ್ರವಿದೆ ಎಂದು ವಿಮರ್ಶಿಸಿದ ಅವರು ಸ್ವಾತಂತ್ರ್ಯ ಚಳುವಳಿಯ ದಿನಗಳಲ್ಲಿ ನಮ್ಮ ಮುದ್ರಣ ಮಾಧ್ಯಮ ಜನತೆಯಲ್ಲಿ ದೇಶಪ್ರೇಮ, ರಾಷ್ಟ್ರೀಯ ಏಕತೆ ಹಾಗೂ ಜಾತ್ಯಾತೀತ ಮನೋಭಾವವನ್ನು ಬೆಳೆಸಿತು



ವೆಬ್‌ಸೈಟ್ ಉದ್ಘಾಟಿಸಿದ ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್

ಎಂದು ನೆನಪಿಸಿಕೊಂಡರು. ಮಾಧ್ಯಮ ರಂಗದಲ್ಲಿ ಕೆಲಸ ಮಾಡುತ್ತಿರುವವರು ಸಾಮಾಜಿಕ ಜವಾಬ್ದಾರಿಯನ್ನು ಅರಿತು ಕೆಲಸ ಮಾಡಿದರೆ ತುಂಬ ಪ್ರಯೋಜನವಾಗಲಿದೆ ಎಂದುಹೇಳಿದ ಅವರು ನಾಡಿನ ಯುವಕರಲ್ಲಿ ದೇಶಪ್ರೇಮ ಹಾಗೂ ಸಹೋದರತ್ವವನ್ನು ಬೆಳೆಸುವತ್ತ ಗಮನ ನೀಡಬೇಕು ಎಂದು ಮನವಿ ಮಾಡಿದರು.

ಭಯೋತ್ಪಾದನೆ ಸವಾಲು

ದೇಶದಲ್ಲಿ ಹೆಚ್ಚುತ್ತಿರುವ ಭಯೋತ್ಪಾದನೆ ಮತ್ತು ವಿಚ್ಛಿದ್ರಕಾರಿ ಶಕ್ತಿಗಳ ಹಾವಳಿಯನ್ನು ಪ್ರಸ್ತಾಪಿಸಿದ ಮುಖ್ಯಮಂತ್ರಿಗಳು 'ಇಂದು ಎಲ್ಲರೂ ಭಯೋತ್ಪಾದನೆಯ ವಿರುದ್ಧ ಮಾತನಾಡುತ್ತಾರೆ. ಪಾರ್ಲಿಮೆಂಟಿನ ಮೇಲೆ ನಡೆದ ದಾಳಿಯನ್ನು ಖಂಡಿಸುತ್ತಾರೆ, ಕಾಶ್ಮೀರದಲ್ಲಿ ನಡೆಯುತ್ತಿರುವ ಭಯೋತ್ಪಾದನೆಯನ್ನು ಖಂಡಿಸುತ್ತಾರೆ. ಗಡಿಯಾಚೆಯಿಂದ ನಡೆಯುತ್ತಿರುವ ಭಯೋತ್ಪಾದನೆಯನ್ನು ಖಂಡಿಸುತ್ತಾರೆ. ಆದರೆ ನಾವು ಕಳೆದ ಕೆಲವು ದಶಕಗಳಿಂದ ಎದುರಿಸುತ್ತಾ ಒದಿರುವ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಮಾತನಾಡುವವರು ವಿರಳ. ಬಿಜೆಪಿ ಮಾತನಾಡುವುದಿಲ್ಲ. ದೊಡ್ಡ ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ಸಹ ಮಾತನಾಡುವುದಿಲ್ಲ. ಪಂಜಾಬ, ಕಾಶ್ಮೀರ ಮೊದಲಾದ ಕಡೆ ವಿಚ್ಛಿದ್ರಕಾರಿ ಶಕ್ತಿಗಳು ನಡೆಸುತ್ತಿರುವ ಹಿಂಸಾಚಾರವನ್ನು ಖಂಡಿಸುವ ಕಾಂಗ್ರೆಸ್ ಪಕ್ಷವು ತ್ರಿಪುರಾ ರಾಜ್ಯದಲ್ಲಿ ದ್ವಂದ್ವ ನೀತಿಯನ್ನು ಅನುಸರಿಸುತ್ತದೆ. ಪರಸ್ಪರ ಕೈಜೋಡಿ ಕೊಂಡಿರುವ ಐಎಸ್ಐ ಮತ್ತು ಸಿಐಎ ನೇತೃತ್ವ ಬುಡಮೇಲು ಕೃತ್ಯಗಳು ಈಶಾನ್ಯ ಭಾರತದ ನಾಗಾಲ್ಯಾಂಡ್, ಅಸ್ಸಾಂ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಹೆಚ್ಚುತ್ತಿವೆ. ಬಾಂಗ್ಲಾದೇಶದ ಗಡಿಯಲ್ಲಿ ವಿಚ್ಛಿದ್ರಕಾರಿಗಳು ಕ್ಯಾಂಪುಗಳನ್ನು ರಚಿಸಿಕೊಂಡು ಗಡಿಯೊಳಗೆ ನುಗ್ಗಿ ಕೊಲೆ, ಸುಲಿಗೆಗಳನ್ನು ನಡೆಸುತ್ತಿವೆ. ಕಾಂಗ್ರೆಸ್ ಪಕ್ಷವು ಇದನ್ನು ವಿರೋಧಿಸುವ ಬದಲು ಅದನ್ನು ಎಡರಂಗ ಸರ್ಕಾರದ ವಿರುದ್ಧ ಬಳಸಿಕೊಳ್ಳುವ ಕೀಳು ರಾಜಕೀಯ ಮಾಡುತ್ತಿದೆ. ಕಳೆದ ಎರಡು ದಶಕಗಳಲ್ಲಿ ತ್ರಿಪುರಾದಲ್ಲಿ ವಿಚ್ಛಿದ್ರಕಾರಿ ಶಕ್ತಿಗಳ ದಾಳಿಯಲ್ಲಿ 400 ಕ್ಕೂ ಹೆಚ್ಚು ಪಕ್ಷದ ಕಾರ್ಯಕರ್ತರು ಪ್ರಾಣ ತೆತ್ತಿದ್ದಾರೆ. ಕಾಂಗ್ರೆಸ್ ಪಕ್ಷವು ಈ ಕೊಲೆಗಳನ್ನು ವಿರೋಧಿಸುವ ಬದಲು ವಿಚ್ಛಿದ್ರಕಾರಿ ಸಂಘಟನೆಗಳೊಂದಿಗೆ ಸೇರಿಕೊಂಡು ಎಡರಂಗ ಸರ್ಕಾರದ ವಿರುದ್ಧ ಹೋರಾಡುತ್ತದೆ.

> ವರ್ಣರಂಜಿತ ಮಾಧ್ಯಮದ ಸ್ಪರ್ಧಾತ್ಮಕ ವ್ಯೂಹದಲ್ಲಿ ಇದು ಒಂದು ಸಾಹಸ
>
> **- ಮಾಣಿಕ್ ಸರ್ಕಾರ್**

ವಿಚ್ಛಿದ್ರಕಾರಿ ಶಕ್ತಿಗಳ ವಿರದ್ಧ ಹೋರಾಡುತ್ತಾ ಜನತೆಗೆ ರಕ್ಷಣೆ ನೀಡಲು ಶ್ರಮಿಸುತ್ತಿರುವ ಸರ್ಕಾರವನ್ನೇ 356ನೇ ಕಲಂ ಬಳಸಿ ವಜಾ ಮಾಡಬೇಕೆಂದು ಕಾಂಗ್ರೆಸ್ ಒತ್ತಾಯಿಸುತ್ತದೆ. ಗಡಿಯಾಚೆಯಿಂದ ದಾಳಿ ಮಾಡುತ್ತಿರುವ ಸುಮಾರು 300 ವಿಚ್ಛಿದ್ರಕಾರಿಗಳ ಹೆಸರುಗಳನ್ನು ನಾವು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು ಅವರನ್ನು ಭಾರತಕ್ಕೆ ಒಪ್ಪಿಸುವಂತೆ ಬಾಂಗ್ಲಾ ಸರ್ಕಾರವನ್ನು ಕೇಳಬೇಕೆಂದು ಕೇಂದ್ರ ಸರ್ಕಾರವನ್ನು ನಾವು ಒತ್ತಾಯಿಸುತ್ತಾ ಇದ್ದರೂ ಏನೂ ಪ್ರಯೋಜನವಾಗಿಲ್ಲ. ಜನತೆಯ ರಕ್ಷಣೆ ನೀಡಲು ಶ್ರಮಿಸುತ್ತಿರುವ ಸರ್ಕಾರವನ್ನೇ 356ನೇ ಕಲಂ ಬಳಸಿ ವಜಾ ಮಾಡಬೇಕೆಂದು ಕಾಂಗ್ರೆಸ್ ಒತ್ತಾಯಿಸುತ್ತದೆ. ಗಡಿಯಾಚೆಯಿಂದ ದಾಳಿ ಮಾಡುತ್ತಿರುವ ಸುಮಾರು 300 ವಿಚ್ಛಿದ್ರಕಾರಿಗಳ ಹೆಸರುಗಳನ್ನು ನಾವು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು ಅವರನ್ನು ಭಾರತಕ್ಕೆ ಒಪ್ಪಿಸುವಂತೆ ಬಾಂಗ್ಲಾ ಸರ್ಕಾರವನ್ನು ಕೇಳಬೇಕೆಂದು ಕೇಂದ್ರ ಸರ್ಕಾರವನ್ನು ನಾವು ಒತ್ತಾಯಿಸುತ್ತಾ ಇದ್ದರೂ ಏನೂ ಪ್ರಯೋಜನವಾಗಿಲ್ಲ. ಜನತೆಯ ಪ್ರಾಣ, ಆಸ್ತಿಯ ರಕ್ಷಣೆಗಾಗಿ ಸೈನ್ಯವನ್ನು ಕಳುಹಿಸಿಕೊಡಬೇಕೆಂಬ ಕೋರಿಕೆಯನ್ನೂ ಕೇಂದ್ರ ಸರ್ಕಾರ ಪರಿಗಣಿಸುತ್ತಿಲ್ಲ. ನಾವು ಕಾಂಗ್ರೆಸ್ ಪಕ್ಷದ ಬೆಂಬಲ ಕೋರಲು ಸಂಕೋಚಪಡಲಿಲ್ಲ. ಆದರೆ ಕಾಂಗ್ರೆಸ್ ಪಕ್ಷ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರುವ ಬದಲು ಮುಂಬರುವ ವಿಧಾನಸಭಾ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ರಾಜಕೀಯ ಮಾಡುತ್ತಿದೆ. ಆದ್ದರಿಂದ ಕಾಂಗ್ರೆಸ್ ಪಕ್ಷವನ್ನು ನಂಬಲಾಗದು. ಬಿಜೆಪಿಗೆ ಕಾಂಗ್ರೆಸ್ ಪರ್ಯಾಯ ಆಗದು. ಆದ್ದರಿಂದ ಸಾಮಾನ್ಯ ಜನರ ಪರವಾಗಿರುವ, ರಾಷ್ಟ್ರೀಯ ಏಕತೆ, ಪ್ರಜಾಪ್ರಭುತ್ವ, ಸಾರ್ವಭೌಮತೆಗೆ ಬದ್ಧವಾದ 'ತೃತೀಯ ಪರ್ಯಾಯ' ಇಂದಿನ ತುರ್ತು ಅಗತ್ಯವಾಗಿದೆ. ಸಿಪಿಐ(ಎಂ) ಎಡ, ಪ್ರಜಾಸತ್ತಾತ್ಮಕ, ಜಾತ್ಯಾತೀತ ಪಕ್ಷಗಳ ಸಹಕಾರದೊಂದಿಗೆ 'ಪೀಪಲ್ಸ್ ಫ್ರಂಟ್' ರಚಿಸಿಕೊಂಡು ಅದನ್ನು ಬಲಪಡಿಸಲು ಶ್ರಮಿಸುತ್ತದೆ. ಕರ್ನಾಟಕದಲ್ಲಿಯೂ ಈ ಕೆಲಸ ನಡೆಯಬೇಕಾಗಿದ್ದು ಐಕ್ಯರಂಗ ಈ ವಿಚಾರಗಳನ್ನು ರಾಜ್ಯದ ಜನತೆಯ ನಡುವೆ ಕೊಂಡೊಯ್ಯುವ ಕೆಲಸ ಮಾಡಬೇಕು ಎಂದರು.

ಇದು ಸಾಧ್ಯವಾದದ್ದು...

ಐಕ್ಯರಂಗ ಕಾರ್ಯಾಲಯದ ಎದುರುಗಡೆ ಏರ್ಪಡಿಸಲಾಗಿದ್ದ ಸರಳ ಸಮಾರಂಭದ ಅಧ್ಯಕ್ಷತೆಯನ್ನು ಪತ್ರಿಕೆಯ ಪ್ರಕಾಶಕರೂ ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿಗಳೂ ಆಗಿರುವ ಕಾಮ್ರೇಡ್ ಎಸ್.ಸೂರ್ಯನಾರಾಯಣ ರಾವ್ ವಹಿಸಿದ್ದರು. ಆರಂಭದಲ್ಲಿ ಪತ್ರಿಕೆಯ ಸಂಪಾದಕರಾದ ಎಸ್.ವೈ.ಗುರುಶಾಂತ ಅವರು ಮಾತನಾಡಿ ಪತ್ರಿಕೆಯ ಬಹುದಿನಗಳ ಕನಸು ಇಂದು ನನಸಾಗಿದೆ ಎಂದರಲ್ಲದೆ ಪತ್ರಿಕೆಯ ನುರಿತ ಹಾಗೂ ದಕ್ಷ ಸಂಗಾತಿಗಳಿಂದ ಪತ್ರಿಕೆ 'ವೆಬ್‌ಸೈಟ್' ನಂತಹ ತಂತ್ರಜ್ಞಾನದ ಪ್ರಯೋಜನ ಪಡೆಯಲು ಸಾಧ್ಯವಾಗಿದೆ ಎಂದು ಹೇಳಿದರು. ಆರಂಭದಲ್ಲಿ ವಿಶ್ವಕುಂದಾಪುರ ಸ್ವಾಗತಿಸಿದರು. ಕೊನೆಯಲ್ಲಿ ಜಯರಾಂ ವಂದಿಸಿದರು. ಪತ್ರಿಕೆಯ ನವವಿನ್ಯಾಸಕ್ಕಾಗಿ ಹಾಗೂ ಸತ್ವಗೊಳಿಸಲು ವಿಶೇಷವಾಗಿ ಶ್ರಮಿಸಿದ ಪತ್ರಿಕೆಯ ಹಿಂದಿನ ಸಂಪಾದಕರಾದ ಜಿ.ಎನ್.ನಾಗರಾಜ್, ಸಂಪಾದಕ ಮಂಡಳಿ ಸದಸ್ಯರಾದ ನಿತ್ಯಾನಂದ ಸ್ವಾಮಿ, ಜಿ.ಸಿ.ಬಯ್ಯಾರೆಡ್ಡಿ, ರಾಜ್ಯ ಸಮಿತಿ ಸದಸ್ಯರೂ, ದಲಿತ ಸಂಘಟನೆ ಮುಂತಾದವರು ಪಾಲ್ಗೊಂಡಿದ್ದರು. ಬರಗೂರು ರಾಮಚಂದ್ರಪ್ಪ ಶುಭಾಶಯ ಕಳಿಸಿದ್ದರು.



ದಲಿತ ಯುವತಿಯ ಅಪಹರಣ - ವೇಶ್ಯಾವಾಟಿಕೆ ಭಾರಿ ಜಾಲ

ಈ ಅಪಹರಣದ ಹಿಂದೆ ಭಾರೀ ಕುಳಗಳಿದ್ದಾರೆಂದು ಹೇಳಲಾಗುತ್ತಿದೆ. ಯಾರೀ ಪ್ರಬಲರು? ಅದೆಂತಹ ಜಾಲ?

ಕೊಡಗು

ಕಾಫಿ, ಟೀ, ಏಲಕ್ಕಿ, ಮೆಣಸುವಿನಂತಹ ಹಣ ತರುವ ಬೆಳೆಗಳು, ಅತ್ಯಂತ ಪ್ರಾಕೃತಿಕ ಸಂಪತ್ತಿನಿಂದಲೂ ಬಿಮ್ಮನೇ ಬೀಗುವ ಚೆಲುವಿನ ಕೊಡಗಿನಲ್ಲಿ ದಟ್ಟದಾರಿದ್ರ್ಯವು ಹರುಕು ಕೌದಿ ಹೊದ್ದು ರೋಧಿಸುತ್ತಿದೆ. ಸಕಲ ಸಂಪತ್ತನ್ನು ಸೃಷ್ಟಿಸುವ ಶ್ರಮಜೀವಿಗಳು, ತುತ್ತಿನ ಚೀಲ ತುಂಬಿಸಿಕೊಳ್ಳಲು ಪರದಾಡಬೇಕಿದೆ. ಇಂತಹ ಕೊಡಗಿನ 18 ಮೂಲ ನಿವಾಸಿಗಳಲ್ಲಿ ಒಬ್ಬರಾದ ಕೆಂಬಟ್ಟಿ ಹೊಲೆಯರು ಇಂದಿಗೂ ಭೂಹೀನರು ಆರ್ಥಿಕವಾಗಿ ಸಾಮಾಜಿಕವಾಗಿ ದುರ್ಬಲರಾಗಿ ದಿಕ್ಕೇಡಿಗಳಂತಿರುವ ಈ ಜನರನ್ನು ಮನಬಂದಂತೆ ಶೋಷಿಸುವ ಭೂ ಒಡೆಯರಾದ ಪ್ರಬಲ ಪ್ಲಾಂಟರ್‌ಗಳು, ಅವರ ಚೇಲಾಗಳು, ಅಧಿಕಾರ ನಡೆಸುವವರು, ಹೊಲವನ್ನೇ ಮೇಯ್ದ ಬೇಲಿಗೆ ಸಾಕ್ಷಿಗಳಂತೆ ಅಧಿಕಾರ ಶಾಹಿ ಆಡಳಿತದ ಓತಿಕ್ಯಾತಗಳು ಹುಟ್ಟಿನಿಂದಲೇ ಈ ಅಧಿಕಾರ ಪಡೆದವರಂತೆ ವರ್ತಿಸುವ ಈ ಸ್ಥಾಪಿತ ಹಿತಾಸಕ್ತಿಗಳು ಇಂತಹ ಪರಿಸರದಲ್ಲಿ ನಡೆಯುತ್ತಿರುವ ದೌರ್ಜನ್ಯ ದಬ್ಬಾಳಿಕೆಗಳು ನೂರಾರು. ಅಂತಹ ಒಂದು ಘಟನೆಯನ್ನು ಇತ್ತೀಚಿಗೆ ದಬ್ಬಾಳಿಕೆಗಳು ಅಂತಹ ಒಂದು ಘಟನೆಯನ್ನು ಇತ್ತೀಚೆಗೆ (ನಾಗರಹೊಳೆಯ ಬುಡಕಟ್ಟು ಯುವತಿಯರ ಮೇಲಿನ ಅತ್ಯಾಚಾರ) ಐಕ್ಯರಂಗ ಪ್ರಕಟಿಸಿದೆ. ಕಾಡುಗಳ್ಳತನ, ಕಾಫಿ, ಮೆಣಸು, ಸಾರಾಯಿ ಸಾಗಾಟದ ಅಕ್ರಮಗಳ ಜೊತೆಗೆ ಯುವತಿಯರನ್ನು ಅಪಹರಿಸಿ ವೈಶ್ಯಾವಾಟಿಕೆಯ ದಂಧೆಗೆ ನೂಕುವ ಭಾರಿ ಜಾಲವಿರುವ ಪ್ರಕರಣವೀಗ ಬೆಳಕಿಗೆ ಬಂದಿದೆ. ಅದರ ವಿವರಗಳು ಇಲ್ಲಿ.

ಕೊಡಗು ಮತ್ತೆ ತಲ್ಲಣದಲ್ಲಿದೆ. ದಲಿತ ಯುವತಿಯೊಬ್ಬಳ ಅಪಹರಣ, ವೇಶ್ಯಾವಾಟಿಕೆಗೆ ಮಾರಾಟ, ಇದರ ಹಿಂದಿರುವ ಪ್ರಬಲ ಕುಳಗಳ ಹಣ ಮತ್ತು ವ್ಯವಹಾರಗಳ ಭಾರೀ ಜಾಲ ಹೊರಬಂದಿವೆ. ಇದರ ಸಮಗ್ರ ವಿಚಾರಣೆ ನಡೆಸಿ, ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಅಧಿಕಾರಿಗಳು ನಿರಾಕರಿಸುತ್ತಿದ್ದಾರೆ ಅಥವಾ ಎಲ್ಲಾ ತಿಳಿದಿರುವಾಗ ಮತ್ತೇಕೆ ವಿಚಾರಣೆ ಎಂದು ಇಂಗಿತ ವ್ಯಕ್ತಪಡಿಸುತ್ತಿದ್ದಾರೆ. ಅಥವಾ


ಪೋಲೀಸ್ ಠಾಣೆ ಎದುರು ಪ್ರತಿಭಟನೆ

ಶಾಮೀಲಾಗುತ್ತಿದ್ದಾರೆ.

ವಿರಾಜಪೇಟೆ ತಾಲೂಕಿನ ಒಂದು ಗ್ರಾಮ ಅರಮೇರಿ. ಅಲ್ಲಿ 'ಕೆಂಬಟ್ಟಿ' ಹೊಲೆಯರೇ ಅಧಿಕ. ಆರ್ಥಿಕವಾಗಿ ಸಾಮಾಜಿಕವಾಗಿ ಅತ್ಯಂತ ತುಳಿತಕ್ಕೊಳಗಾದವರು. ಕಾಫಿ, ಟೀ. ತೋಟ ಗದ್ದೆಗಳಲ್ಲಿ ಕೂಲಿ ಮಾಡಿ ಜೀವಿಸುವ ಶ್ರಮಜೀವಿಗಳು. ಅಂತಹ ಒಂದು ಕುಟುಂಬ ಮಣಿಕುಮಾರ್‌ನದು ಅವರ ಮಗಳು ಸುಮಾನಾ.

ಸುಮಾ 19ರ ಯುವತಿ ಹತ್ತನೇ ತರಗತಿ ಕಲಿತವಳು. ಅಣ್ಣ ಲೀನಾ (25) ಟೈಗರ್‌ಹಿಲ್ ಹೋಟೆಲ್‌ನಲ್ಲಿ ಕೆಲಸ ಮಾಡುವಾತ. ತಂದೆ-ತಾಯಿ ಕೂಲಿಕಾರರು. ವಿದ್ಯಾಭ್ಯಾಸ ಮುಂದುವರಿಸಲಾಗದ ಸುಮಾ ಕೂಲಿ ಕೆಲಸಕ್ಕೆಂದು ಕಾಕೋಟು ಪರಂಬುಗೆ ಹೋಗಿ ಬರುತ್ತಿದ್ದಳು. ಅಲ್ಲಿ ಹೋಟೆಲ್ ನಡೆಸುತ್ತಿದ್ದ ಮಂಡೇಟಿರ ರಾಜಪ್ಪ, ಆತನ ಸಹೋದರ ಸಂಜು, ಸಹೋದರಿ ಕುಸುಮಾ ಎಂಬುವರು ಪರಿಚಿತವಾದರು.

ಫೆಬ್ರವರಿಯ ಒಂದು ದಿನ. "ಎಷ್ಟೊಂದು ಒಳ್ಳೆ ಹುಡುಗಿ, ನೀನ್ಯಾಕೆ ಇಲ್ಲಿ ತೋಟಗಳಲ್ಲಿ ಕೂಲಿಯಾಗಿ ದುಡಿದು ಜೀವನ ಹಾಳುಮಾಡಿಕೊಳ್ಳುತ್ತೀಯಾ. ನೀನು ಒಪ್ಪಿದರೆ ವಿರಾಜಪೇಟೆಯ ದೊಡ್ಡ ಅಂಗಡಿಯೊಂದರಲ್ಲಿ ಕೆಲಸ ಕೊಡಿಸುತ್ತೇವೆ" ಎಂದು ಅವರು ಪುಸಲಾಯಿಸುತ್ತಾರೆ. ಸುಮನಾಳಿಗೂ ಹೌದಲ್ಲ ಎನಿಸುತ್ತದೆ. ಅಪ್ಪ-ಅಮ್ಮಂದಿರೂ ಒಪ್ಪುತ್ತಾರೆ. ಫೆಬ್ರವರಿ 23 ರಂದು ವಿರಾಜಪೇಟೆಯ ಬೋರೇಗೌಡ ಕಾಂಪ್ಲೆಕ್ಸ್‌ನಲ್ಲಿರುವ 'ಮಾರ್ಜಿನ್ ಫ್ರೀ' ಶಾಪ್‌ಗೆ ಹೋಗೋಣವೆಂದು ತನ್ನಲ್ಲಿರುವ ಮೆಂಬರ್ ಶಿಪ್ ಕಾರ್ಡನ್ನು ತೋರಿಸಿ, ಇದೇ ನೇಮಕಾತಿಯ ಪತ್ರವೆಂದು ನಂಬಿಸಿ ರಾಜಪ್ಪ ಸಮನ್‌ಳನ್ನು ಕರೆದುಕೊಂಡು ಹೊರಡುತ್ತಾರೆ. ಆದರೆ ವಿರಾಜಪೇಟೆಗೆ ಬಂದಾಗ ಕೆಲಸ ಬೆಂಗಳೂರಿನಲ್ಲಿದೆಯೆಂದು ಕರೆದುಕೊಂಡು ಹೊರಟಿದ್ದಾರೆ. ಸುಮಾಳ ಜೊತೆ ಬಂದ ಹುಡುಗಿಯನ್ನು ವಾಪಾಸುಕಳಿಸಿದ್ದಾರೆ. ಸುಮನ್‌ಳ ತಂದೆಗೆ ಬೆಂಗಳೂರಿನಲ್ಲಿ ಕೆಲಸ ಸಿಕ್ಕಿದೆಯೆಂದೂ ಹೇಳಿದ್ದಾರೆ. ಆಗಾಗ ಮಗಳ ಯೋಗಕ್ಷೇಮ ವಿಚಾರಿಸಿದಾಗ ರಾಜಪ್ಪನಿಗೆ ಮಗಳು ಕಳಿಹಿಸಿದ ಹಣವೆಂದು 1000 ರೂ. ಕೊಡಲಾಗಿದೆ.

ಅಪಹರಣದ ದೂರು ದಾಖಲಿಸಲು ಹೋರಾಟ

ಹೀಗೆ ಒಂದು ತಿಂಗಳು ಕಳೆದಿದೆ. ಎರಡು ತಿಂಗಳಾದರೂ ಮಗಳನ್ನು ನೋಡದ ಮಣಿ ಕುಟುಂಬಕ್ಕೆ ತಳಮಳ ಆಗಿದೆ. ತಮ್ಮ ಮಗಳನ್ನು ಕರೆದುಕೊಂಡು ಬರಬೇಕು, ಅವಳನ್ನು ನೋಡಬೇಕೆಂದು ಅವರು ಮಾರ್ಚ್ 23 ರಂದು ತಾಕೀತು ಮಾಡಿದ್ದಾರೆ. ಕೊಟ್ಟ ಸಬೂಬು ಒಪ್ಪದೇ ಮತ್ತೇ ಮತ್ತೇ ಕೇಳಿದಾಗ ಗದರಿಸಿ ಕಳಿಸಿದ್ದಾರೆ. ಇದರಿಂದ ಆತಂಕಗೊಂಡು ಮಣಿಕುಮಾರ್ ಕುಟುಂಬ ಆಪ್ತರ ಮುಂದೆ ಹೇಳಿಕೊಂಡಾಗ ಪೋಲೀಸರಿಗೆ ದೂರು ನೀಡಲು ನಿರ್ಧರಿಸಿದ್ದಾರೆ. ಅರಮೇರಿಯ ಕೆ.ಎಂ. ಪೂವಯ್ಯನವರ ಸಹಾಯದಿಂದ 25 ಮಾರ್ಚ್ 2002ರಂದು ವಿರಾಜಪೇಟೆ ಪೊಲೀಸ್ ಠಾಣೆಯಲ್ಲಿ ತಮ್ಮ ಮಗಳನ್ನು ಅಪಹರಿಸಲಾಗಿದೆ ಎಂದು ದೂರು ದಾಖಲಿಸಿದ್ದಾರೆ.

ದೂರು ಸ್ವೀಕರಿಸಿದ ಪೋಲೀಸಿರು ಇದನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಕೊಟ್ಟ ದೂರು ನಿದ್ದೆ ಮಾಡತೊಡಗಿದೆ. ಮತ್ತೆ ಮತ್ತೆ ಒತ್ತಾಯಿಸಿದಾಗ ಸಬ್‌ಇನ್‌ಸ್ಪೆಕ್ಟರ್ ರಂಗರಾಜು ರಜೆಮೇಲೆ, ಎಎಸ್‌ಐ ಉರುಸ್‌ಗೆ ಹೋಗಿದ್ದಾರೆ ಎಂದೆಲ್ಲಾ ಕಾರಣ ನೀಡಿದ್ದಾರೆ. ಈ ಪ್ರಕರಣದ ಬಗ್ಗೆ ವೀರನಾಡು, ಕಾಫಿಲ್ಯಾಂಡ್ ಪ್ರಮುಖ ವರದಿ ಪ್ರಕಟಿಸಿವೆ. ಕೊನೆಗೆ ತೀವ್ರತರವಾದ ಒತ್ತಡ ಹಾಕಿದಾಗ ದೂರುಪಟ್ಟಿಯಲ್ಲಿರುವ ಸಂಜು, ಕುಸುಮಾ, ರಾಜಪ್ಪನನ್ನು ಠಾಣೆಯಲ್ಲಿ ವಿವರಿಸಲಾಗಿ, ಹುಡುಗಿ ಬೇಗಳೂರಿನಲ್ಲಿದ್ದು ಏಪ್ರಿಲ್ 5 ರೊಳಗಾಗಿ ಕರೆದು ತಂದೊಪ್ಪಿಸುವುದಾಗಿ ಇನ್ಸ್‌ಪೆಕ್ಟರ್ ದೇವಯ್ಯನವರಿಗೆ ಲಿಖಿತವಾಗಿ ಹೇಳಿಕೆ ನೀಡಿದ್ದಾನೆ. ಅಪಹೃತ ಸುಮನ್ ಬೆಂಗಳೂರಿನಲ್ಲಿರದೇ ಆಕೆಯನ್ನು ಕೊಯಮತ್ತೂರಿಗೆ ಸಾಗಿಸಲಾಗಿದೆ. ಆಕೆಯನ್ನು 12 ದಿನಗಳು ಬೆಂಗಳೂರಿನಲ್ಲಿ ಅತ್ಯಾಚಾರ ನಡೆಸಿ, ನಂತರ ಮೋಹನ್, ಪ್ರೇಮಾ ಎಂಬುವರು ವೇಶ್ಯಾವಾಟಿಕೆ ದಂಧೆಯಲ್ಲಿರುವ ಸುನೀಲ್ ದಂಪತಿಗಳಿಗೆ ಮಾರಿದ್ದಾರೆ. ನಂತರ ಅವರು ಕೊಯಮತ್ತೂರಿಗೆ ಮಾರಿದ್ದಾರೆ. ಸುಮನ್‌ಳನ್ನು ಖರೀದಿಸಿದ್ದು ಕೊಯಮತ್ತೂರಿನ ಎಂ.ಎಲ್.ಎ ಯವರ ಅಣ್ಣನ ಮಗ ಮೂರ್ತಿ! ಈ ಮೂರ್ತಿ ಎಂಬುವವನು ಒಬ್ಬ ಕ್ರಿಮಿನಲ್. ಹಲವಾರು ಕೊಲೆ ಮೊಕದ್ದಮೆಗಳಲ್ಲಿ ಸಿಕ್ಕಿಬಿದ್ದಿರುವವನು. ಈತ 20 ಸಾವಿರಕ್ಕೆ ಖರೀದಿಸಿದ್ದಾನೆಂದು ತಿಳಿದಿದೆ. ಇವನು ಸಹ ಸುಮನ್‌ಳ ಮೇಲೆ ಅತ್ಯಾಚಾರ ನಡೆಸಿದ್ದಾನೆ. ನಂತರದಲ್ಲಿ ಬೇರೆಡೆಗೆ ಕಾರೊಂದರಲ್ಲಿ ಸಾಗಿಸುವಾಗ ಮಾರ್ಗದಲ್ಲಿ ಕಾರು ನಿಲ್ಲಿಸಿ, ಮದ್ಯಪಾನ ಸೇವಿಸುತ್ತಿರುವಾಗ ಕಾರಿನಲ್ಲಿದ್ದ ಸುಮಾ ಅಳುತ್ತಿರುವುದನ್ನು ಕಂಡ ಪೊಲೀಸರಿಗೆ ಅನುಮಾನ ಬಂದು ತನಿಖೆ ನಡೆಸಿದ ನಂತರ ಹಣವನ್ನು ಜಪ್ತಿ ಮಾಡಿ, ಎಲ್ಲರನ್ನೂ ತುಡಲೂರು ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ಹೂಡಿ ಸೆಂಟ್ರಲ್ ಜೈಲಿಗೆ ತಳ್ಳಲಾಗಿದೆ.

ಇತ್ತ ಏಪ್ರಿಲ್ 11 ಆದರೂ ಸುಮನ್‌ಳನ್ನು ಸಂಜು, ರಾಜಪ್ಪ ಕರೆದು ತಂದಿಲ್ಲ. ಕೊನೆಗೆ ಡಿವೈಎಫ್, ಸಿಪಿಐ(ಎಂ), ಜನವಾದಿ ಮಹಿಳಾ ಸಂಘಟನೆ, ದಲಿತ ಸಂಘಟನೆಗಳು ಪೋಲೀಸ್ ಠಾಣೆ ಮುಂದೆ ಪ್ರತಿಭಟನೆ ನಡೆಸಿವೆ. ಮಹಿಳಾ ಸಂಘಟನೆ ನಾಯಕಿ ಕಾವೇರಿ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಪೀಟರ್‌ರವರಿಗೆ ಪೋಲೀಸ್ ಅಧಿಕಾರಿಗಳಿಗೂ ವಾಗ್ವಾದ ಆಗಿದೆ. ಪ್ರತಿಭಟನೆ ತೀವ್ರವಾದಾಗ ಪೋಲೀಸರು ರಾಜಪ್ಪನೊಂದಿಗೆ ಸುಮನ್‌ಳ ತಂದೆ, ಹಾಗೂ ಬಂಧುಗನ್ನು ಕೊಯಮತ್ತೂರಿಗೆ ಕಳಿಸಿದ್ದಾರೆ. ಅತ್ತ ಕಡೆಯಿಂದ ವಿವರ ಪಡೆದ ಪೋಲೀಸರು ಕೊಯಮತ್ತೂರಿನಿಂದ ವಿರಾಜಪೇಟೆಗೆ ಸುಮನಳನ್ನು ಕರೆದು ತಂದಿದ್ದಾರೆ. ಸೆಂಟ್ರಲ್ ಜೈಲ್ ರಿಮಾಂಡ್ ಹೊಂ ಗೆ ತರುವಲ್ಲಿ ರೇಣುಕಾ ಎಂಬ ವಕೀಲರು ಸಹಾಯ ಮಾಡಿದ್ದಾರೆ. 12 ರಂದು ಲಿಖಿತ ದೂರನ್ನು ಸುಮನ್‌ಳು ವಿರಾಜಪೇಟೆಯಲ್ಲಿ ನೀಡಿದ್ದು ವಿವರವಾದ ಮಹಿತಿಗಳನ್ನು ಹೊರಗೆಡಹಿದ್ದಾಳೆ.

ಇದು ಒಟ್ಟು ಪ್ರಕರಣದ ಸಂಕ್ಷಿಪ್ತವಿವರ. ಈ ಸುಮನ್‌ಳ ಅಪಹರಣದ ಪ್ರಕರಣವು ಇಂತಹ ಅನೈತಿಕ ದಂಧೆ ಹಾಗೂ ಅದರ ಹಿಂದಿರುವ ಭಾರೀ ಜಾಲವನ್ನು ಹೊರಗೆಡುತ್ತಿದೆ.

ಕೊಡಗಿನಲ್ಲಿ ಇಂತಹ ಪ್ರಕರಣಗಳು ವರದಿಯಾಗುತ್ತಿರುವುದು ಇದೇ ಮೊದಲಲ್ಲ. ಕೆಲವೇ ತಿಂಗಳುಗಳ ಹಿಂದೆ ಅದೇ ಕಾಕೋಟುಪರಂಬುವಿನ ನಾಲ್ಕು ಹುಡುಗಿಯರು ನಾಪತ್ತೆಯಾದದ್ದು ಬೆಳಕಿಗೆ ಬಂದಿತ್ತು. ಆದರೆ ಅವರು ಯಾರ ಹಿಂದೆ ಓಡಿಹೋಗಿದ್ದಾರೆ ಎಂದು ಸುದ್ದಿ ಹಬ್ಬಿಸಲಾಗಿತ್ತು. ಇಂತಹ ಇನ್ನೂ ಹಲವಾರು ಪ್ರಕರಣಗಳು ಜನರ ಮನದಲ್ಲಿವೆ. ಆದರೂ ರಾಜಪ್ಪ, ಸಂಜು, ಕುಸುಮಾರವರು ರಾಜಾರೋಷವಾಗಿ ದಂಧೆ ಮುಂದುವರಿಸಿಯೇ ಇದ್ದಾರೆ.

ಇಂತಹ ಘಟನೆಗಳ ಬಗ್ಗೆ ಪೋಲೀಸರಿಗೆ ದೂರು ನೀಡಿದಾಗ ಅವು ಮುಂದಕ್ಕೆ


ಅಪಹರಣವಾದ ಯುವತಿ ಸುಮನ್

ತನಿಖೆಗೊಳಪಡುವುದಿಲ್ಲ. ಕ್ರಮವನ್ನು ಕೈಗೊಳ್ಳಲಾಗುವುದಿಲ್ಲ. ತನಿಖೆಯಾಗಿ, ನ್ಯಾಯ ಸಿಗಬೇಕೆಂದು ಒತ್ತಾಯಿಸುವ ಶಕ್ತಿ-ಧ್ವನಿ ದೂರು ನೀಡಿದ ಕುಟುಂಬಗಳಿಗಿರುವುದಿಲ್ಲ. ಯಾಕೆಂದರೆ ಇವರು ಬಹುತೇಕ ದಲಿತರು-ಕೂಲಿಕಾರರು ಆರ್ಥಿಕವಾಗಿ- ಸಾಮಾಜಿಕವಾಗಿ ದುರ್ಬಲರು. ಇವರಲ್ಲಿ ಕೆಲವರು ನ್ಯಾಯಕ್ಕಾಗಿ ಒತ್ತಾಯಿಸಿ ಅಲ್ಪ ಧೈರ್ಯವಿದ್ದರೂ ಸಾಮಾಜಿಕವಾಗಿ ತಮ್ಮ ಸ್ಥಿತಿ ಏನಾದೀತೆಂದು ಹೆದರುತ್ತಾರೆ. ಪೋಲೀಸರು ಎಲ್ಲವನ್ನೂ 'ನಿಭಾಯಿಸಿ' ಫೈಲುಕ್ಲೋಸ್ ಮಾಡುತ್ತಾರೆ.

ಸುಮನಳ ಪ್ರಕರಣವನ್ನೇ ತೆಗೆದುಕೊಳ್ಳಿ, ಆರೋಪಿಗಳು ಯಾರೆಂದು ಸ್ಪಷ್ಟಗೊಂಡಾಗಲೂ ಅವರ ಮೇಲೆ ನಿಷ್ಠುರ ಕ್ರಮ ಜರುಗಿಸಲು ಪೋಲೀಸರು ಸಿದ್ಧರಿರಲಿಲ್ಲ. ಕೊನೆಗೆ ಡಿವೈಎಫ್‌ಐ, ಜನವಾದಿ ಮಹಿಳಾ ಸಂಘ ಹಾಗೂ ದಲಿತ ಸಂಘಟನೆಗಳು ಪೋಲೀಸ್‌ಠಾಣೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದ್ದಾರೆ. ಕ್ರಮ ಜರುಗಿಸದೇ ಇದ್ದರೆ ಜಿಲ್ಲೆಯಾದ್ಯಂತ ಹೋರಾಟ ನಡೆಸುವುದಾಗಿ ಜನವಾದಿ ಮಹಿಳಾ ಸಂಘಟನೆಯ ಕಾವೇರಿ ಟೀಚರ್ ಮತ್ತು ಸಿಪಿಐ(ಎಂ) ಕಾರ್ಯದರ್ಶಿ ಪೀಟರ್ ಲೋಬೋ ಎಚ್ಚರಿಕೆ ನೀಡಿದ್ದಾರೆ. ಆಗ ಮಾತ್ರ ಒಂದು ಇಂಚು ಕೇಸ್ ಫೈಲು ನಡೆದಿದೆ ಬಳಿಕ ಮತ್ತೆ ಯಥಾಸ್ಥಿತಿ!

ಪೋಲಿಸ ಅಧಿಕಾರಿಗಳಿಂದ ದ್ವಂದ್ವ ನಿಲುವು

ಪೋಲೀಸರು ತಾವು ಕಠಿಣ ಕ್ರಮ ವಹಿಸುತ್ತಿರುವುದಾಗಿ ಹೇಳುತ್ತಿದ್ದಾರೆ. ಗಮನಿಸಬೇಕಾದ ಸಂಗತಿಯೆಂದರೆ ತಮಿಳುನಾಡಿನ ಆರೋಪಿಗಳ ಮೇಲೆ ಕ್ರಮ ಜರುಗಿಸುತ್ತಾ, ಕರ್ನಾಟಕದಲ್ಲಿ ಇಂತಹ ಅಂತರಾಜ್ಯ ವೇಶ್ಯಾವಾಟಿಕೆ ದಂಧೆಯ ಕ್ರಿಮಿನಲ್‌ಗಳ ಮೇಲೆ ಕ್ರಮ ಜರುಗಿಸದೇ ರಕ್ಷಿಸುತ್ತಿರುವುದು! ಅದೂ ಬಂಧನದಲ್ಲಿರುವ ಆರೋಪಿ ಪ್ರೇಮಾಗೆ ರಾಜಮರ್ಯಾದೆ ನೀಡುತ್ತಿರುವುದು.

→

ಜಮ್ಮು ಮತ್ತು ಕಾಶ್ಮೀರ

ಭಾರತ - ಪಾಕ್ : ಯುದ್ಧ ಪರಿಹಾರವಲ್ಲ

ಜಮ್ಮು ಮತ್ತು ಕಾಶ್ಮೀರದಲ್ಲಿ ಕಾರ್ಯಾಚರಿಸುತ್ತಿರುವ ಭಯೋತ್ಪಾದಕ ಸಂಘಟನೆಗಳು ಜಮ್ಮುವಿನಲ್ಲಿ ನಡೆಸಿರುವ ದಾರುಣ ಧಾಳಿಯು, ರಾಜ್ಯದಲ್ಲಿನ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಲು ನಡೆಸಿರುವ ಉದ್ದೇಶಪೂರ್ವಕ ಪ್ರಚೋಧನೆಯಾಗಿದೆ ಹಾಗೂ ಶಾಂತಿ ಮತ್ತು ಸುವ್ಯವಸ್ಥೆಯನ್ನು ಪುನರ್ ಸ್ಥಾಪಿಸಲು ಇರುವ ರಾಜಕೀಯ ಪ್ರಕ್ರಿಯೆಯನ್ನು ಮುಂದುವರಿಸಲು ಅವಕಾಶಗಳನ್ನು ಮುಚ್ಚುವಂತದಾಗಿದೆ. ಸಾಯಲು ಸಿದ್ದವಿರುವ 2 ಅಥವಾ 3 ಜನರ ಶಸ್ತ್ರಸಜ್ಜಿತ ತಂಡಕ್ಕೆ ಅರಾಜಕತೆಯನ್ನು ಸೃಷ್ಟಿಸಲು ಹಾಗೂ ಅಮಾಯಕರನ್ನು ಹತ್ಯೆಗೈಯ್ಯುವುದು ಕಷ್ಟವಲ್ಲ ಎಂಬುದನ್ನು ಇತ್ತೀಚಿನ ಅನುಭವಗಳು ತೋರುತ್ತವೆ. ಪಾಕಿಸ್ತಾನದಲ್ಲಿ ನೆಲೆಯುಳ್ಳ ಲಕ್ಷರೀ-ತೋಯಬ ಮತ್ತು ಜೈಷ್-ಇ-ಮಹಮ್ಮದ್ ನಂತಹ ಗುಂಪುಗಳ ಮೇಲೆ ಸಹಜವಾಗಿ ಅನುಮಾನ ಬರುತ್ತದೆ. ಪಾಕಿಸ್ತಾನದಲ್ಲಿ ಅಂತಹ ಸಂಘಟನೆಗಳ ಮೇಲೆ ನಿಷೇಧ ಹೇರಿರುವುದು, ಆ ಸಂಘಟನೆಗಳು ಬೇರೆ ಬೇರೆ ಹೆಸರಿನಲ್ಲಿ ಕಾರ್ಯಚರಿಸುವಂತೆ ಮಾಡಿದೆ.

ಅಮಾಯಕ ನಾಗರೀಕರು, ಸೈನ್ಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಸೈನಿಕರ ಮನೆಗಳ ಸದಸ್ಯರ ಹೆಚ್ಚು ಮಹಿಳೆಯರು ಮತ್ತು ಮಕ್ಕಳ ಬರ್ಬರ ಕೊಲೆ ರಾಷ್ಟ್ರದಲ್ಲಿ ತೀವ್ರ ಆಕ್ರೋಶಕ್ಕೆ ಎಡೆಮಾಡಿದೆ. ತಮ್ಮ ಇರುವಿಕೆ ಹಾಗೂ ಉದ್ದೇಶ ಕುರಿತು ಅಂತರ ರಾಷ್ಟ್ರೀಯ ಗಮನ ಸೆಳೆಯುವ, ಉದ್ದೇಶದೊಂದಿಗೆ ಅಮೇರಿಕಾದ ಸಹಾಯಕ ಕಾರ್ಯದರ್ಶಿ ಕ್ರಿಸ್ಟಿನಾ ರೋಖಾ ದೆಹಲಿಗೆ ಆಗಮಿಸುವ ಸಮಯವನ್ನು ಈ ದಾಳಿ ನಡೆಸಲು ತಂತ್ರಗಾರಿಕೆಯಿಂದ ಬಳಸಿಕೊಂಡಿದ್ದಾರೆ. ಇಂತಹ ಬರ್ಬರ ಹತ್ಯೆಗಳು ತಕ್ಷಣದ ಕಾರ್ಯಾಚರಣೆ ಮತ್ತು ಪ್ರತಿಕಾರಕ್ಕೆ ಎಡೆಮಾಡಿಕೊಡುತ್ತದೆ. ಇಂತಹ ಭಯೋತ್ಪಾದನೆ ವಿರುದ್ಧ ದೂರಗಾಮಿ ಯುದ್ಧ ನಡೆಸುವ ಮುನ್ನ ಅಂತಹ ಆಯ್ಕೆಯ ಎಲ್ಲಾ ಸಾಧ್ಯತೆ-ಬಾದ್ಯತೆಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ.

ಸಂಸತ್ತಿನ ಮೇಲೆ ಡಿಸೆಂಬರ್ 13'ರ ಭಯೋತ್ಪಾದಕರ ದಾಳಿಯ ನಂತರ ವಾಜಪೇಯಿ ಸರ್ಕಾರ ನಿಯಂತ್ರಣ ರೇಖೆಯ ಉದ್ದಕ್ಕೂ ಗಡಿಯಲ್ಲಿ ಪೂರ್ಣ ಪ್ರಮಾಣದಲ್ಲಿ ಸೈನ್ಯೆಯನ್ನು ಜಮಾಯಿಸಿತು. ಪಾಕಿಸ್ತಾನವು ತನ್ನ ಸೈನ್ಯಯನ್ನು ಜಮಾಯಿಸಿತು. ಕಳೆದ 4 ತಿಂಗಳಿಂದ ಎರಡು ಕಡೆಯ ಸೈನ್ಯ ಯಾವಾಗಲಾದರು ಮಿಲಿಟರಿ ಕಾರ್ಯಾಚರಣೆ ಪ್ರಾರಂಭವಾಗಬಹುದೆಂದು ನಿರೀಕ್ಷೆಯಲ್ಲಿ ಜಮಾವಣೆಗೊಂಡಿವೆ. ಇಂತಹ ಸ್ಥಿತಿಯಲ್ಲಿ ಪಕ್ಷದ 17ನೇ ಮಹಾಧಿವೇಶನವು ಅನುಮೋದಿಸಿರುವ ನಿಲುವಾದ ಸೈನ್ಯೆಯ ಜಮಾವಣೆಯನ್ನು ಎರಡೂ ಕಡೆಯವರು ಹಿಂದೆ ಪಡೆದು ಆತಂಕ ನಿವಾರಣೆಗೆ ಕ್ರಮವಹಿಸಬೇಕು.

ಡಿಸೆಂಬರ್ 13'ರ ದಾಳಿಯ ನಂತರದ ಪರಿಸ್ಥಿತಿಯಂತೆ, ಇತ್ತೀಚಿನ ಭಯೋತ್ಪಾದಕ ದಾಳಿಯ ಕುರಿತು ವ್ಯಾಪಕ ಅಂತರಾಷ್ಟ್ರೀಯ ಖಂಡನೆಯು ಮೂಡಿಬಂದಿದೆ ಪಾಕಿಸ್ತಾನದ ಆಡಳಿತ ಹಾಗೂ ಮುಷರಫ್‌ರವರು, ಪಾಕಿಸ್ತಾನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೂಲಭೂತವಾಗಿ ಹಾಗೂ ಭಯೋತ್ಪಾದಕ ಗುಂಪುಗಳ ಮೇಲೆ ಅವರ ಜನವರಿ 12'ರ ಭಾಷಣಕ್ಕೆ ಅನುಗುಣವಾಗಿ ಉಗ್ರಕ್ರಮ ವಹಿಸುವಂತೆ ಭಾರತವು ಒತ್ತಡ ಹೇರಬೇಕಿದೆ. "ಭಯೋತ್ಪಾದನೆ ವಿರುದ್ಧ ಯುದ್ಧ" ದಲ್ಲಿ ಪಾಕಿಸ್ಥಾನವನ್ನು ತನ್ನ ಪಟ್ಟಿಯಲ್ಲಿ ಇರಿಸಿಕೊಂಡಿರುವ ಅಮೇರಿಕಾಗೆ ಈ ವಿಷಯ ಕುರಿತು ವಿಶೇಷ ಜವಾಬ್ದಾರಿಯಿದೆ. ಗಡಿಯಾಚೆಗಿನ ಯಾವುದೇ ಸೈನಿಕ ಕಾರ್ಯಾಚರಣೆ ಈ ಉದ್ದೇಶವನ್ನು ಸಾಕಾರಗೊಳಿಸದು. ಈ ಕುರಿತಂತೆ ಪ್ರಖ್ಯಾತ ರಕ್ಷಣಾ ತಜ್ಞರಾದ ಲೆಫ್ಟಿನೆಂಟ್ ಜನರಲ್ ವಿ.ಆರ್.ರಾಘವನ್ ಎಚ್ಚರಿಸಿರುವಂತೆ, ಪಾಕಿಸ್ತಾನ ಅಥವಾ ಪಾಕ್ ಆಕ್ರಮಿತ ಕಾಶ್ಮೀರದ ಮೇಲಿನ ಎಂತಹದೇ ಸೀಮಿತ ಮಿಲಿಟರಿ ದಾಳಿಯೂ ಸಹಾ ಪ್ರತಿ ದಾಳಿಗೆ ಎಡೆಮಾಡಲಿದೆ. ಈ ಬಿಕ್ಕಟ್ಟು ಪೂರ್ಣ ಪ್ರಮಾಣದ ಯುದ್ಧವಾದಲ್ಲಿ ಅಣ್ವಸ್ತ್ರಗಳ ಬಳಕೆಯ ಅಪಾಯ ತಪ್ಪಿದ್ದಲ್ಲ.

ವಾಜಪೇಯಿ ಸರ್ಕಾರಕ್ಕೆ ಸಂಬಂಧಿಸಿದಂತೆ, ಗಡಿಯಲ್ಲಿ ಪೂರ್ಣ ಪ್ರಮಾಣದ ಪಡೆಗಳ ಜಮಾವಣೆ ಮತ್ತೆ ಅವುಗಳನ್ನು ಅಲ್ಲಿ ದುಬಾರಿ ವೆಚ್ಚದಲ್ಲಿ ಇರುಸುವಿಕೆ ಅನುತ್ಪಾಧಕವಾಗಿ ಪರಿಣಮಿಸಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಕೆಲವು ಆಂತರಿಕ ಭದ್ರತೆಯ ಜವಾಬ್ದಾರಿ ನಿರ್ವಹಿಸಬೇಕಾಗಿದ್ದ ಸಶಸ್ತ್ರ ಪಡೆಗಳನ್ನು ಗಡಿಗೆ ನಿಯೋಜಿಸಲಾಯಿತು. ದೋಡಾ-ಪೂಂಚ್ ಪ್ರದೇಶಗಳಲ್ಲಿ ಭಯೋತ್ಪಾದಕರ ಉಪಟಳ ಮತ್ತು ಜಮ್ಮು ಪ್ರದೇಶದಲ್ಲಿ ಭಯೋತ್ಪಾದಕರ ಹೆಚ್ಚಿಚ್ಚು ಕೇಂದ್ರೀಕರಣದ ಅಪಾಯ ಎದುರಿಸಲು ಸಶಸ್ತ್ರ ಪಡೆಗಳ ವಿಶೇಷ ಗಮನದ ಅಗತ್ಯವಿದೆ. ಭಯೋತ್ಪಾದಕ ಗುಂಪುಗಳು ಅಪಾಯವನ್ನು ಎದುರಿಸಲು ಜಮ್ಮು ಮತ್ತು ಕಾಶ್ಮೀರದಲ್ಲಿ ಸಮರ್ಪಕ ಕ್ರಮವಹಿಸದೆ, ಪಾಕಿಸ್ತಾನದ ಮೇಲೆ ಸೈನಿಕ ಒತ್ತಡವನ್ನು ಮುಂದುವರಿಸುವ ಪೋಸನ್ನು ನೀಡುವುದು ಫಲಕಾರಿಯಾಗದು. ಹಿಮನ ಕರಗುವುದರಿಂದಾಗಿ, ರಾಜ್ಯದೊಳಕ್ಕೆ ನುಸುಳುವಿಕೆ ಹೆಚ್ಚಲಿದೆ, ಸೈನ್ಯ ಇತರೆ ರಕ್ಷಣಾ ಪಡೆಗಳೊಂದಿಗೆ ಪರಿಸ್ಥಿತಿ ಎದುರಿಸಲು ಕ್ರಮವಹಿಸಬೇಕು.

ಈ ಕ್ರಮಗಳು ಅಗತ್ಯವಿರುವಾಗಲೇ ಕಾಶ್ಮೀರದ ಮೂಲಭೂತ ಸಮಸ್ಯೆ ಎದುರಿಸಲು ಬಿಜೆಪಿ ನೇತೃತ್ವದ ಸರ್ಕಾರದ ಬಳಿ ಯಾವುದೇ ರಾಜಕೀಯ ಪರಿಹಾರವಿಲ್ಲದಾಗಿರುವುದು ವಾಸ್ತವಾಂಶ. ಇನ್ನೇನು ಕೆಲವು ತಿಂಗಳಲ್ಲಿ ಕಾಶ್ಮೀರದಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿದ್ದು ಪ್ರಸ್ತುತ ಚೌಕಟ್ಟಿನೊಳಗಿರುವ ಗುಂಪುಗಳನ್ನು ಹೊರತುಪಡಿಸಿ ಇತರರನ್ನು ಒಳಗೊಳ್ಳಲು ಮನ ಒಲಿಸಲು ವಾಜಪೇಯಿ ಸರ್ಕಾರಕ್ಕೆ ಸಾಧ್ಯವಾಗಿಲ್ಲ, ತನ್ನ ದುರಾಡಳಿತ ಹಾಗೂ ಬಿಜೆಪಿಯೊಂದಿಗೆ ಕೈಜೋಡಿಸುವ ತನ್ನ ಸಮಯಸಾಧಕತನದಿಂದಾಗಿ ಫರೂಖ್ ಅಬ್ದುಲ್ಲಾ ಸರ್ಕಾರ ಜನತೆಯ ಅವಕೃಪೆಗೆ ಒಳಗಾಗಿದೆ. ಉತ್ತಮ ಹೆಜ್ಜೆಯಾಗಿ ನೀಡಬಹುದಾಗಿದ್ದ ಸ್ವಾಯತ್ತತೆಯನ್ನು ಕಾಶ್ಮೀರದ ಜನತೆಗೆ ನಿರಾಕರಿಸಿರುವ ವಾಜಪೇಯಿ ಸರ್ಕಾರಕ್ಕೆ ಪ್ರಸ್ತುತ ಕಾಶ್ಮೀರದ ಜನತೆಗೆ ನೀಡಲು ಯಾವುದೇ ರಾಜಕೀಯ ಪ್ರಸ್ತಾವಗಳು ಇಲ್ಲದಾಗಿವೆ.

ಭಯೋತ್ಪಾದಕರ ಮೇಲೆ ಸಮರ್ಪಕ ಕ್ರಮಗಳನ್ನು ಜರುಗಿಸುವಂತೆ ಪಾಕಿಸ್ತಾನಿ ಸರ್ಕಾರದ ಮೇಲೆ ರಾಜತಾಂತ್ರಿಕ ಹಾಗೂ ರಾಜಕೀಯ ಒತ್ತಡವನ್ನು ಹೆಚ್ಚಿಸುವುದು, ಜಮ್ಮು ಮತ್ತು ಕಾಶ್ಮೀರದಲ್ಲಿ ರಾಜಕೀಯ ಪ್ರಕ್ರಿಯೆಯನ್ನು ಬಲಗೊಳಿಸಲು ಸಮರ್ಪಕ ಕ್ರಮಗಳನ್ನು ವಹಿಸುವುದು ಮತ್ತು ಮಾತುಕತೆಗೆ ಆಧಾರವಾಗಿ ಸ್ವಾಯತ್ತತೆಯನ್ನು ಪ್ರಸ್ತಾಪಿಸುವುದು ಹಾಗೂ ಭಯೋತ್ಪಾದಕರನ್ನು ನಿಗ್ರಹಿಸಲು ಭದ್ರತಾ ಕ್ರಮಗಳು ಮತ್ತು ಬೇಹುಗಾರಿಕೆಯನ್ನು ಹೆಚ್ಚಿಸುವಂತಾ ಈ ಮೂರು ದೃಷ್ಟಿಕೋನದ ತಿಳುವಳಿಕೆಯೊಂದಿಗೆ ಕ್ರಮವಹಿಸುವುದು ಮಾತ್ರ ಪರಿಸ್ಥಿತಿಯನ್ನು ಸಮರ್ಪಕವಾಗಿ ಎದುರಿಸಲು ಸಹಕಾರಿಯಾಗಲಿದೆ.

ವಾಜಪೇಯಿ ಸರ್ಕಾರದ ಯೋದ್ಧೋನ್ಮಾದ ತೀವ್ರಗೊಳಿಸುವ ಹೇಳಿಕೆಗಳು ಮತ್ತು ಕಾಶ್ಮೀರ ಸಮಸ್ಯೆಯ ರಾಜಕೀಯ ಪರಿಹಾರಕ್ಕೆ ಗಂಭೀರ ಗಮನ ನೀಡುವುದರ ಕೊರತೆ ಹಾಗೂ ಜಮ್ಮು ಮತ್ತು ಕಾಶ್ಮೀರ ಕುರಿತ ಸರ್ಕಾರ ನೀತಿ ಒಟ್ಟಾರೆಯಾಗಿ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುವ ಅಪಾಯವನ್ನು ಹೊಂದಿವೆ.

ದಲಿತ ಯುವತಿಯ ಅಪಹರಣ ....

ಪ್ರಕರಣ ಇಷ್ಟೊಂದು ಬಯಲವಾಗಿರುವಾಗ ಜಾಲ ಭೇದಿಸಲು ಇನ್ನೂ ಯಾಕೆ ಮೀನಾಮೇಷ ಯಾಕೆ ಎಂದು ಪೋಲೀಸ್‌ರನ್ನು ಕೇಳಿದರೆ ಅಧಿಕಾರಿಯೊಬ್ಬರು ಹತಾಶೆಯಿಂದ ಹೇಳುವುದು -

"ಇದರಲ್ಲಿ ದೊಡ್ಡ ಕುಳಗಳಿದ್ದಾರೆ. ಅವರು ಎಲ್ಲವನ್ನೂ ನಿಭಾಯಿಸುತ್ತಿದ್ದಾರೆ" ಎನ್ನುತ್ತಿದ್ದಾರೆ. ಹೀಗಾಗಿ ಪೋಲೀಸರು ಅವರ ಮುಂದೆ ಕೈಕಟ್ಟಿಕೊಂಡು ನಿಲ್ಲಿಸಬೇಕಾದ ಸ್ಥಿತಿ ಇಂತಹ ಭಾವನೆ ಬಹುತೇಕ ಎಲ್ಲರಲ್ಲಿಯೂ ಬರತೊಡಗಿದೆ. 'ಭಾರೀ ಜನ' ಯಾರು? ಇವರು ಎಲ್ಲವನ್ನೂ ಮೀರಿದರೆ? ಪೋಲೀಸ್,ಸರ್ಕಾರದ ಮತ್ತು ಜನಪ್ರತಿನಿಧಿಗೂ ಭೇದಿಸಲಾಗದಷ್ಟು ಭೂಗತರೆ? ಈ ಎಲ್ಲಾ ಅಂಶಗಳನ್ನು ನೋಡಿದಾಗ ಇಂತಹ ಹೇಯ, ದಂಧೆಗೆ ಹಣವಂತರು, ರಾಜಕಾರಣಿಗಳು, ಕ್ರಿಮಿನಲ್‌ಗಳು ಆಡಳಿತ ಯಂತ್ರ ಶಾಮೀಲಾಗಿರುವುದು ಸ್ಪಷ್ಟ. ಹೀಗಿರುವ ವ್ಯವಸ್ಥೆಯ ಈ ಜಾಲವನ್ನು ಅಂತಹ ಸಂದರ್ಭದಲ್ಲಿ ಭೇದಿಸುವುದು ಕಷ್ಟ. ಇದಕ್ಕೆ ಜನತೆಯ ಅಪಾರ ಒತ್ತಡ. ಜಾಗೃತಿ, ಅಗತ್ಯವಿದೆ. ದಕ್ಷ ಹೈಟೆಕ್ ಆಡಳಿತದ ಕೃಷ್ಣ, ಖರ್ಗೆ, ಅದ್ವಾನಿಯವರು ಇದರ ಬಗ್ಗೆ ಏನೆನ್ನುತ್ತಾರೆ? ಇವರೂ ಸಹ ಪ್ರಬಲರಲ್ಲವೆ? ಒಟ್ಟು ಜಾಲವೇ ಸಿಕ್ಕುಸಿಕ್ಕಾಗಿ, ಹೊರ ನೋಟದಲ್ಲಿ ಮುಸುಕಾಗಿ ಕಾಣಿಸುವಂತೆ, ಇಣುಕಲು ಅಸಾಧ್ಯವೆನ್ನುವಂತೆ ತಡೆಗೋಡೆ ಕಟ್ಟುವ 'ಭಾರೀ ವೃತ್ತಿ ಚಾಲಾಕಿನ' ಕೈಗಳು ಓಡಾಡುತ್ತವೆ. ನೆಲ, ಮರ, ಗಿಡ ಪ್ರಾಕೃತಿಕ ಸಂಪತ್ತನ್ನು ಲೂಟಿ ಹೊಡೆಯುವುವವರು ಈಗ ದುರ್ಬಲರ ಶೀಲ-ಮಾನಗಳನ್ನು ಅಪಹರಿಸಿ ದುಡ್ಡು ಮಾಡುವ ದಂಧೆಗಾಗಿ ನೀಚಮಟ್ಟಕ್ಕೂ ಹೋಗಿದ್ದಾರೆ. ಇದೊಂದು ಭಯಂಕರ ಮಾಫಿಯಾ. ಅದೂ ಕೇರಳ-ಮಂಗಳೂರು ಗಡಿಗೆ ಹೊಂದಿರುವ ಕೊಡಗು ಇಂತಹ ಹಲವಾರು ವಿಷಜಂತುಗಳ ಭಾರೀ ತಿಮಿಂಗಿಲಗಳ ಅಡ್ಡೆ ಆಗುತ್ತಿದೆ. ಭೂಮಿ ಶ್ರಮವನ್ನು ನುಂಗುವ ಕೆಲವು ಭಾರೀ ಪ್ಲಾಂಟರ್‌ಗಳ ಅವ್ಯವಹಾರಕ್ಕೆ, ಕಳ್ಳ ಸಾಗಾಟಗಾರರ ಸ್ವರ್ಗವಾಗುತ್ತಿದೆಯೇ ಈ ಕರ್ನಾಟಕದ ಕಾಶ್ಮೀರ.

ಯುವತಿಯ ಇಂತಹ ಮಾರಾಟದ ದಂಧೆ ಬೆಳಕಿಗೆ ಬಂದನಂತರ ಹಲವಾರು ಸತ್ಯಗಳು ಸ್ಫೋಟಿಸಿದ ಬಳಿಕ ಈ ಸಂಗತಿ ಪೋಲೀಸ್ ಮಹಾನಿರ್ದೇಶಕರ ಕಿವಿಗೆ ಮುಟ್ಟಿಲ್ಲವೆ? ಗಂಟೆಗೊಂದಾವರ್ತಿ ರಾಜ್ಯದ ಎಲ್ಲಾ ಹೊಸ ಬೆಳವಣಿಗೆಯನ್ನು ಗುಡ್ಡೆಹಾಕಿ ಒಪ್ಪಿಸಿಕೊಳ್ಳುವ ಗೃಹಸಚಿವ ಖರ್ಗೆ. ಮುಖ್ಯಮಂತ್ರಿ ಕೃಷ್ಣರವರ ಮನ ಹೋಗಲಿಲ್ಲವೇ? ಗಡಿರಾಜ್ಯದ ಬಳಿ - ಹೊರ ವಿದ್ಯಮಾನಗಳು ಕೇಂದ್ರ ಸರ್ಕಾರದ ಗೃಹಖಾತೆಗೆ ತಿಳಿಯುವುದೇ ಇಲ್ಲವೆ ಹೈಟೆಕ್ ಆಡಳಿತಗಾರ ---- ಮುಖ್ಯಮಂತ್ರಿ ಕೃಷ್ಣ, ದಲಿತ ಗೃಹಸಚಿವ ಖರ್ಗೆ, ಭಯೋತ್ಪಾದನಾ ನಿಗ್ರಹನಂತಹ ಕಾನೂನು, ನ್ಯೂಕ್ಲಿಯರ್ ಬಾಂಬ್ ಇರಿಸಿಕೊಂಡು ಸದಾ ಗುಡುಗುವ ಕೇಂದ್ರ ಗೃಹಸಚಿವ ಅದ್ವಾನಿಗಳು ಏನೆನ್ನುತ್ತಾರೆ? ಇವರೂ ಪ್ರಬಲರಲ್ಲವೆ?

ಹೋಗಲಿ ಮೂರು ವಿಧಾನ ಸಭಾ ಕ್ಷೇತ್ರಗಳಿರುವ ಕೊಡಗು ಜಿಲ್ಲೆಗೆ ಮೂರು ಮಂತ್ರಿಗಳಾಗಿ ಮೆರೆಯುತ್ತಿರುವ ಟಿ.ಜಾನ್., ಎಂ.ಎಂ. ನಾಣಯ್ಯ, ಸುಮಾ ವಸಂತ್‌ರವರು ಕನಿಷ್ಟ ಇದರತ್ತ ಒಂದು ಶಬ್ದವನ್ನು ಉಸರುತ್ತಿಲ್ಲ ಯಾಕೆ? ಇವರೂ ಪ್ರಬಲರಲ್ಲವೆ? ಇಲ್ಲದ ಹರಿಶ್ಚಂದ್ರನಿಗೆ ದೇವಸ್ಥಾನಕಟ್ಟಿ ಕೊಡಗಿಗೇ ಕೊಳ್ಳಿ ಇಟ್ಟು, ಕಿರುಜಿತ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಲಕ್ಷಾಂತರ ಹುಂಡಿ ಎತ್ತುತ್ತಿರುವ ಕರಸೇವಕ ನಾಯಕ ಮಣಿಗಳಿಗೆ ಜಗತ್ತೇ ಕೇಳುವಂತೆ ಕೂಗುತ್ತಿರುವ ಅವರ ಚೀರಾಟದಲ್ಲಿನ ಧ್ವನಿಯು ಒಂದು ಶೇಕಡವನ್ನಾದರೂ ಕೊಡಲು ಏನಡ್ಡಿ ಇದೆ? ಈ ದಲಿತರು ಹಿಂದುತ್ವ ವ್ಯಾಖ್ಯಾನದಲ್ಲಿ ಬರುವುದಿಲ್ಲವೇ? ಅಥವಾ ಅವರಿಗೆ ಈಗಿನ ಸ್ಥಿತಿ ಗ್ಯಾರಂಟಿಯೇ? ಅವರಲ್ಲಿ ಈ ದಲಿತರು - ಕೂಲಿಕಾರರಿಗೂ ಒಂದು ಬದುಕಿದೆಯೇ? ಅವರೇನಿದ್ದರೂ ಯಜಮಾನರ ಕೃಪಾಕಟಾಕ್ಷದಲ್ಲಿರಬೇಕು. ಮನುಸ್ಮೃತಿಯ ಕಾನೂನನ್ನು ಅಲುಗಾಡಿಸುವಿರಾದರೆ ನೀವು ಸನಾತನ ಧರ್ಮಕ್ಕೆ ದ್ರೋಹ ಬಗೆಯುವರು ಆಗಿಬಿಡುತ್ತೀರಿ. ಇದು ಇಂತಹ ಎಲ್ಲಾ 'ಪ್ರಬಲ'ರ ಫರ್ಮಾನು? ಹೇಗಿದೆ ಯಥಾಸ್ಥಿತಿ ಕಾಯುವ ಪರಿ?

ಹೌದು, ಈ ಪ್ರಬಲರೂ, ಭಾರಿ ಕುಳಗಳು ನಮ್ಮ - ನಿಮ್ಮ ಕಣ್ಣಿಗೆ ಫಕ್ಕನೆ ಕಂಡುಬಿಡುತ್ತಾರೆ. ಆದರೆ ಕಾನೂನು ವ್ಯವಸ್ಥೆಯ ಹಿಡಿತವಿರಿಸಿಕೊಂಡ ವರಿಗೆ ಕಾಣಬೇಕಲ್ಲ! ಅವರಿಗೆ ಕಾಣದಿದ್ದರೆ ಅಥವಾ ಕಣ್ಣಿನ ಪಟಲದಲ್ಲಿ ಹಿಡಿಸದಿದ್ದರೆ ಅದು ಸತ್ಯವಾಗುವುಲ್ಲ. ಹಣ, ಅಧಿಕಾರ-ತೋಳ್ಬಲವಿಲ್ಲದಿದ್ದರೆ ಅದಕ್ಕೆ ಬೆಲೆ ಬರುವುದಾದರೂ ಹೇಗೆ? ಎಷ್ಟು ಸರಳ ಸತ್ಯ? ಹೌದು! ಈ ಸತ್ಯ ಸರಳ ಕಠೋರ. ಆದರೆ ಕೈಚೆಲ್ಲಿ ಕುಳಿತು ಬಿಡುವ ನಿರಾಶದಾಯಕ ಸ್ಥಿತಿಯೇನೂ ಅಲ್ಲಿಲ್ಲ. ಕರಾಳ ಕತ್ತಲೆಯೊಡನೆ ಹೋರಾಡುವ ಶಕ್ತಿಗಳು ಈಗಲೂ ಎದ್ದು ನಿಂತಿವೆ. ಕೊಡಗಿನಲ್ಲಿ ಕೆಲವು ಪತ್ರಿಕೆಗಳು, ಪತ್ರಕರ್ತರು ಜಾತಿಭೂತ ಬಡಿದು, ಕಷಾಯ ಕುಡಿದು ಮತ್ತೇರಿಸಿಕೊಂಡು ತೂಕಡಿಸುವ ಜಾಣರಿರುವಾಗಲೇ ಇಂತಹ ಅನ್ಯಾಯಗಳನ್ನು ಬಯಲಿಗೆಳೆಯಲು ಅಡ್ಡಂಡ ಕಾರ್ಯಪ್ಪನವರ ವೀರನಾಡು ಕಾಫಿಲ್ಯಾಂಡ್‌ನಂತಹ ಪತ್ರಿಕೆಗಳೂ ಪ್ರಕರಣವನ್ನು ಹೊರಜಗತ್ತಿಗೆ ಸವಿವರವಾಗಿ ಪ್ರಸಾರಿಸಿವೆ. ಇನ್ನೇನು ಎಲ್ಲವನ್ನೂ ಮ್ಯಾನೇಜ್ ಮಾಡಬಹುದು ಎಂದು 'ಪ್ರಬಲ'ರು ಲೆಕ್ಕಹಾಕಿ ಕಲ್ಲು ಚಪ್ಪಡಿ ಎಳೆಯತೊಡಗಿದಾಗ ಸಿಡಿದೆದ್ದು ಸಂಘಟನೆಗಳು ಪ್ರತಿಭಟಿಸಿವೆ ಮತ್ತು ಹೋರಾಟ ವಿಸ್ತರಿಸಲು ಕಟಿಬದ್ಧವಾಗಿವೆ.

ಬುಡಕಟ್ಟು ಯುವತಿಯ ಮೇಲೆ ಅತ್ಯಾಚಾರ - ದೌರ್ಜನ್ಯ ನಡೆಸಿದ ಪ್ಲಾಂಟರ್‌ಗಳ ಕೃತ್ಯಗಳ ವಿರುದ್ಧ ನಡೆದ ಹೋರಾಟದ ಕಾವು ಚಿಗುರುತ್ತಾ ಬಲಗೊಳ್ಳುತ್ತಿದೆ. ಆದ್ದರಿಂದ ಪ್ರತಿ ದಬ್ಬಾಳಿಕೆ, ಅನ್ಯಾಯ ಆಕ್ರಮಗಳ ಸಂದರ್ಭದಲ್ಲಿ ಮತ್ತೆ ಮತ್ತೆ ಕೇಳಿಬರುವ ಪ್ರಶ್ನೆ, 'ಹೇಳಿಬಿಡಿ ನೀವು ಪ್ರಬಲರ ದೌರ್ಜನ್ಯಗಳ ಕಡೆಗೋ - ಅಥವಾ ದುರ್ಬಲರ ಸಬಲತೆಯತ್ತಲೋ...' ಈಗಲೂ ನಡೆದ ಈ ಸಂಘರ್ಷ ನಿಲ್ಲದೇ ನಡೆಯಬೇಕಿದೆ. ಈಗಲಾದರೂ ಸರ್ಕಾರ ಈ ಅಂತರಾಜ್ಯಗಳ 'ಮಾಫಿಯಾ' ಜಾಲ ಭೇದಿಸಿ, ಅವರಿಗೆ ಶಿಕ್ಷಿಸಿ, ದೌರ್ಜನ್ಯಕ್ಕೀಡಾದ ಯುವತಿಗೆ, ಕುಟುಂಬಕ್ಕೆ ಇಡೀ ಸಮಾಜಕ್ಕೆ ಉತ್ತರ ಹೇಳಬೇಕಿದೆ. ಹೇಳದಿದ್ದರೆ ಬಿಡುವುದಿಲ್ಲ ಎಂದ ಸಮರಹೂಡಬೇಕು.

ವರದಿ - ಎಸ್.ವೈ.ಗುರುಶಾಂತ್

ಕಮ್ಯುನಿಸ್ಟ್ ಚೇತನಗಳಿಗೆ ಸಂಭ್ರ
ಟ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 17ನೇ ಮಹಾಧಿವೇಶನ ಕಳೆದ ಮಾರ್ಚ್ ತಿಂಗಳಲ್ಲಿ ಹೈದರಾಬಾದ್ ನಗರದಲ್ಲಿ ಯಶಸ್ವಿಯಾಗಿ ಜರುಗಿತ್ತು. ಅಧಿವೇಶನದಲ್ಲಿ ಆಯ್ಕೆಯಾದ ಪಕ್ಷದ ಕೇಂದ್ರ ಸಮಿತಿಯ ಮೊದಲ ಸಭೆ ಮೇ 24ರಿಂದ 26ರವರೆಗೆ ಬೆಂಗಳೂರು ನಗರದಲ್ಲಿ ನಡೆಯುತ್ತಿರುವುದು ರಾಜ್ಯದ ದುಡಿಯುವ ವರ್ಗದ ಜನಗಳಿಗೆ ಹೆಮ್ಮೆಯ ವಿಷಯ.

ಪ್ರಜಾಸತ್ತಾತ್ಮಕ ಚಳುವಳಿಯ ದೃಷ್ಟಿಯಿಂದ ಕರ್ನಾಟಕವು ಒಂದು ಬಲಹೀನ ರಾಜ್ಯ. ಇಂತಹ ಬಲಹೀನ ರಾಜ್ಯಗಳಿಗೆ ಆದ್ಯತೆಯ ಗಮನ ನೀಡಲು ಹೈದ್ರಾಬಾದ್ ಅಧಿವೇಶನದಲ್ಲಿ ನಿರ್ಧರಿಸಿರುವ ಬೆನ್ನ ಹಿಂದೆಯೇ ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಪಕ್ಷದ ಕೇಂದ್ರ ಸಮಿತಿಯ ಸಭೆ ನಡೆಯುತ್ತಿರುವುದಕ್ಕೆ ವಿಶೇಷ ಮಹತ್ವವಿದೆ. ಪಕ್ಷದ ಕೇಂದ್ರ ಸಮಿತಿಯ 3 ದಿನಗಳ ಸಭೆ, ಅದರ ಪೂರ್ವಭಾವಿಯಾಗಿ ಮೇ 23ರಂದು ನಡೆಯುವ ಪಕ್ಷದ ಪೊಲಿಟ್‌ಬ್ಯೂರೊ ಸಭೆ ಹಾಗೂ ಮೇ 26ರಂದು ನಡೆಯಲಿರುವ ಬೃಹತ್ ರ್‍ಯಾಲಿ ಹಾಗೂ ಬಹಿರಂಗ ಸಭೆಯನ್ನು ಯಶಸ್ವಿಗೊಳಿಸಲು ರಾಜ್ಯಾದ್ಯಂತ ಪಕ್ಷದ ಸದಸ್ಯರು ಹಾಗೂ ಹಿತೈಷಿಗಳು ಕಾರ್ಯೋನ್ಮುಖರಾಗಿದ್ದಾರೆ.

ಬೆಂಗಳೂರಿನಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಸಭೆ


ದೇಶದ ಕಮ್ಯುನಿಸ್ಟ್ ಆಂದೋಲನದ ಹಿರಿಯ ಚೇತನಗಳಾದ ಕಾಮ್ರೆಡ್ ಹರಿಕಿಶನ್‌ಸಿಂಗ್ ಸುರ್ಜಿತ್, ಕಾಮ್ರೆಡ್ ಜ್ಯೋತಿಬಸು ಮೊದಲಾದವರು ಬೆಂಗಳೂರಿಗೆ ಬರುತ್ತಿರುವುದು ಪಕ್ಷದ ಕಾರ್ಯಕರ್ತರಲ್ಲಿ ಮಾತ್ರವಲ್ಲ ರಾಜ್ಯದ ಪ್ರಗತಿಪರ ಶಕ್ತಿಗಳಲ್ಲಿಯೂ ಅತ್ಯುತ್ಸಾಹವನ್ನು ತುಂಬಿದೆ. ದೇಶದ ಆರ್ಥಿಕ ಸ್ವಾವಲಂಭನೆ ಹಾಗೂ ಸಾರ್ವಭೌಮತ್ವಕ್ಕೆ ಗಂಡಾಂತರಕಾರಿಯಾಗಿರುವ ಸಾಮ್ರಾಜ್ಯಶಾಹಿ ಪ್ರೇರಿತ ಉದಾರೀಕರಣ, ಜಾಗತೀಕರಣ ನೀತಿಗಳ ವಿರುದ್ಧ ನಿರಂತರ ಹೋರಾಟ ನಡೆಸುತ್ತಾ ಬಂದಿರುವ, ದೇಶದ ಐಕ್ಯತೆ, ಸಮಗ್ರತೆಯನ್ನು ನಾಶಮಾಡಲು ಹೊರಟಿರುವ ಕೋಮುವಾದಿ ಫ್ಯಾಸಿಸ್ಟ್ ಮನೋಭಾವದ ಸಂಘ ಪರಿವಾರದ ಕುತಂತ್ರಗಳ ವಿರುದ್ಧ ದೃಢವಾದ ನಿಲುವೆಯೊಂದಿಗೆ ಜನತೆಯನ್ನು ಸಂಘಟಿಸುತ್ತಾ ಬಂದಿರುವ ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿಯ ಸಭೆ ಬೆಂಗಳೂರಿನಲ್ಲಿ ನಡೆಯುತ್ತಿರುವುದು ರಾಜ್ಯದ ಪ್ರಜಾಸತ್ತಾತ್ಮಕ ಆಂದೋಲನವನ್ನು ಬಲಪಡಿಸುವಲ್ಲಿ ತುಂಬಾ ಸಹಕಾರಿಯಾಗಲಿದೆ ಮಾತ್ರವಲ್ಲ ರಾಜ್ಯದಲ್ಲಿ ಸಿಪಿಐ(ಎಂ) ಪಕ್ಷದ ಘಟಕಗಳಿಗೂ ನವಚೈತನ್ಯ ನೀಡಲಿದೆ.

ಸಂಘ ಪರಿವಾರದ ಕನಸು

ರಾಜ್ಯದಲ್ಲಿ ಎಡ-ಪ್ರಜಾಸತ್ತಾತ್ಮಕ ಚಳುವಳಿ ದುರ್ಬಲವಾಗಿರುವುದರಿಂದಲೇ ಕರ್ನಾಟಕವನ್ನು ಸುಲಭವಾಗಿ ಬುಟ್ಟಿಯೊಳಗೆ ಹಾಕಿಕೊಳ್ಳಬಹುದೆಂದು ಸಂಘಪರಿವಾರದ ಶಕ್ತಿಗಳು ಕನಸು ಕಾಣುತ್ತಿವೆ. ರಾಜ್ಯದಲ್ಲಿ ಎಡ-ಪ್ರಜಾಸತ್ತಾತ್ಮಕ ಶಕ್ತಿಗಳು ದುರ್ಬಲವಾಗಿ ರುವುದರಿಂದಲೇ ಆರ್.ಎಸ್.ಎಸ್ ಆಗಾಗ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಮತ್ತು ಇತರ ಕಡೆಗಳಲ್ಲಿ ಆಕ್ರಮಣಕಾರಿ ಪಥಚಲನ ನಡೆಸಿ ಅಲ್ಪಸಂಖ್ಯಾತರ ವಿರುದ್ಧ ದ್ವೇಷವನ್ನು ಕಾರುತ್ತಿರುತ್ತದೆ. ಪ್ರಗತಿಪರ ಶಕ್ತಿಗಳ ಬಲಹೀನತೆಯನ್ನು ಬಳಸಿಕೊಂಡು ಭಜರಂಗದಳ ಅಲ್ಪಸಂಖ್ಯಾತರ ವಿರುದ್ಧ ಪ್ರಚೋದನಕಾರಿ ಮಾತುಗಳನ್ನು ಹೇಳುತ್ತಾ ಕೋಮುಗಲಭೆಗಳನ್ನು ಹುಟ್ಟುಹಾಕಲು ಯತ್ನಿಸುತ್ತಿವೆ. ದೇಶದ ಜನತೆಯ ನೆಮ್ಮದಿಗೆ ಭಂಗವನ್ನುಂಟುಮಾಡಲು ಹೆಣಗುತ್ತಿರುವ ಕೋಮುವಾದಿ, ಮೂಲಭೂತವಾದಿ ಶಕ್ತಿಗಳ ವಿರುದ್ಧ ಒಂದು ಪ್ರಬಲವಾದ ಜನಾಭಿಪ್ರಾಯ ರೂಪಿಸಲು ಪಕ್ಷದ ಕೇಂದ್ರ ಸಮಿತಿಯ ಬೆಂಗಳೂರು ಸಭೆ ತುಂಬಾ ಸಹಕಾರಿಯಾಗಲಿದೆ.

ದುಡಿವ ವರ್ಗದ ಕಣ್ಮಣಿಗಳು

ಹೈದ್ರಾಬಾದ್ ಅಧಿವೇಶನದಲ್ಲಿ ಆಯ್ಕೆಯಾದ ನೂತನ ಪೊಲಿಟ್‌ಬ್ಯೂರೋ ಸದಸ್ಯರಲ್ಲಿ ಒಬ್ಬೊಬ್ಬರೂ ಪಕ್ಷದ ಅಪೂರ್ವ ಆಸ್ತಿ. ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನೇ ಪಣಕ್ಕೆ ಹಚ್ಚಿದವರು. ದೇಶದ ದುಡಿಯುವ ವರ್ಗದ ವಿಮೋಚನೆಗಾಗಿ ತಮ್ಮ ಬದುಕನ್ನೇ ಅರ್ಪಣೆ ಮಾಡಿದವರು. ಸಾಮ್ರಾಜ್ಯಶಾಹಿ ಬ್ರಿಟೀಷರ ಕೆಂಗಣ್ಣಿಗೆ ಬಿದ್ದು ವರ್ಷಗಟ್ಟಲೆ ಜೈಲುವಾಸ ಅನುಭವಿಸಿದವರು, ಭೂಗತ ಜೀವನ ನಡೆಸಿದವರು, ದೇಶದ ಬಂಡವಾಳಶಾಹಿ - ಭೂಮಾಲಿಕ ಪ್ರಭುತ್ವದ ದಮನಕ್ಕೆ ಒಳಗಾದರು. ದೇಶದ ಕಾರ್ಮಿಕರನ್ನು, ರೈತ ಕೂಲಿಕಾರರನ್ನು ಹಾಗೂ ಇನ್ನಿತರ ಜನವಿಭಾಗಗಳನ್ನು ಸಂಘಟಿಸಿ ಸಮರಶೀಲ ಹೋರಾಟಗಳನ್ನು ನಡೆಸಿದವರು. ಪಶ್ಚಿಮ ಬಂಗಾಳ, ತ್ರಿಪುರ ಮತ್ತು ಕೇರಳ ರಾಜ್ಯಗಳಲ್ಲಿ ಆಡಳಿತವನ್ನು ವಹಿಸಿಕೊಂಡು ಸಂವಿಧಾನದ ಸೀಮಿತ ಚೌಕಟ್ಟಿನೊಳಗೆ ಜನತೆಗೆ ಸಾಧ್ಯವಾದಷ್ಟು ಪರಿಹಾರವನ್ನು ಒದಗಿಸಿ ಜನಮೆಚ್ಚುಗೆ ಗಳಿಸಿದವರು, ಮಾರ್ಕ್ಸ್‌ವಾದ ಲೆನಿನ್ ವಾದದದ ಕ್ರಾಂತಿಕಾರಿ ಸಿದ್ಧಾಂತವನ್ನು ಆಳವಾಗಿ ಅಧ್ಯಯನ ಮಾಡಿ ಅದನ್ನು ದೇಶದ ನಿರ್ದಿಷ್ಟ ಪರಿಸ್ಥಿತಿಗೆ ಅಳವಡಿ ಸಲು ಹಗಲು ರಾತ್ರಿ ಶ್ರಮಿಸುತ್ತಿರುವವರು ಹರಿಕಿಶನ್‌ಸಿಂಗ್ ಸುರ್ಜಿತ್, ಜ್ಯೋತಿ ಬಸು, ಇ.ಕೆ.ನಾಯನಾರ್, ಇ.ಬಾಲಾನಂದನ್, ಆರ್.ಉಮಾನಾಥ, ಅನಿಲ್ ಬಿಸ್ವಾಸ್, ಭೀಮನ್ ಬಸು, ಎಂ.ಕೆ.ಪಾಂಧೆ,



ಪಿನರಾಯ್ ವಿಜಯನ್, ವಿ.ಎಸ್. ಅಚ್ಯುತಾನಂದನ್, ಎಸ್.ರಾಮಚಂದ್ರನ್ ಪಿಳ್ಳೆ, ಬುದ್ಧದೇವ ಬಟ್ಟಾಚಾರ್ಯ, ಮಾಣಿಕ್ ಸರ್ಕಾರ್, ಪ್ರಕಾಶ್ ಕಾರಟ್, ಸೀತಾರಾಂ ಯೆಚೂರಿ, ಪಿ.ರಾಮಚಂದ್ರನ್ ಮತ್ತು ಕೋರ್‍ಬಾಲಾ ಸತ್ಯನಾರಾಯಣ ಇವರುಗಳು ಭಾರತದ ಶ್ರಮಜೀವಿ ವರ್ಗದ ಕಣ್ಮಣಿಗಳು.

ಗುಜರಾತ್‌ನಲ್ಲಿ ರಾಷ್ಟ್ರಪತಿ ಆಡಳಿತಕ್ಕೆ ಸಿಪಿಐ

ಕರ್ನಾಟಕ ಪ್ರಜಾಸತ್ತಾತ್ಮಕ ಕ್ರಾಂತಿಕಾರಿ ಚಳುವಳಿಯಲ್ಲಿ ಮೇ 23-26 ಅತ್ಯಂತ ಮಹತ್ವದ ದಿನಗಳು. ಇಡೀ ದೇಶದ ಕ್ರಾಂತಿಕಾರಿ ಆಂದೋಲನಕ್ಕೆ ಮಾರ್ಗದರ್ಶನ ನೀಡುತ್ತಿರುವ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಪೂರ್ಣ ನಾಮಕರಣ ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಈ ಅವಧಿಯಲ್ಲಿ ನೆರೆದಿತ್ತು. ಪಕ್ಷದ ಪಾಲಿಟ್‌ಬ್ಯೂರೋ ಮತ್ತು ಕೇಂದ್ರ ಸಮಿತಿ ಸಭೆ ನಡೆದವು. ದೇಶದ ರಾಜಕೀಯ ಪರಿಸ್ಥಿತಿ, ಅಂತರಾಷ್ಟ್ರೀಯ ವಿದ್ಯಾಮಾನಗಳ ಸಮಾಲೋಚನೆಗಳನ್ನು ಈ ಸಭೆಗಳಲ್ಲಿ ನಡೆಸಲಾಯಿತು.

ಪಕ್ಷದ ಹಿರಿಯ ನಾಯಕ ಕಾಮ್ರೇಡ್ ಜ್ಯೋತಿ ಬಸು ಕೇಂದ್ರ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಳೆದ ಸಭೆಯ ನಂತರದ ಕರಡು ತಿಂಗಳ ಅವಧಿಯಲ್ಲಿ ಅಗಲಿದ ಪಕ್ಷದ ಮುಖಂಡರಾದ ಆಂಧ್ರಪ್ರದೇಶದ ಮಹಿಳಾ ಚಳುವಳಿಯ ನಾಯಕಿ ಮೋಟೂರು ಉದಯಂ, ತಮಿಳುನಾಡಿನ ಟ್ರೇಡ್ ಯೂನಿಯನ್ ಮುಖಂಡ ಡಿ.ಜಾನಕಿರಾಮನ್, ತಮಿಳುನಾಡಿನ ರೈತ ಆಂದೋಲನದ ಹಿರಿಯ ಧುರೀಣ ಭಾರತಿ ಮೋಹನ್ ಮತ್ತು ಹಿರಿಯ ಮಾರ್ಕ್ಸ್‌ವಾದಿ ವಿದ್ವಾಂಸರೂ ಆದ ಪಕ್ಷದ ಸದಸ್ಯ ಡಾ.ಮಹಾದೇವ ಸಹಾ ಇವರುಗಳಿಗೆ ಸಭೆ ಶ್ರದ್ಧಾಂಜಲಿ ಅರ್ಪಿಸಿತು.

ಪ್ರಖ್ಯಾತ ಕವಿ ಹಾಗೂ ಪ್ರಗತಿಪರ ಸಾಹಿತ್ಯ ಚಳುವಳಿಯ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದ ಕೈಫಿ ಅಜ್ಮಿ ನಿಧನಕ್ಕೂ ಸಭೆ ಸಂತಾಪ ವ್ಯಕ್ತಪಡಿಸಿತು.

ಸರಿಸುಮಾರು ಮೂರು ತಿಂಗಳಿಂದ ಗುಜರಾತಿನಲ್ಲಿ ಅಲ್ಪಸಂಖ್ಯಾತರ ಹತ್ಯಾಕಾಂಡ ಮತ್ತು ಕೋಮುಗಲಭೆಗಳು ನಡೆಯುತ್ತಿರುವ ಬಗ್ಗೆ ಕೇಂದ್ರ ಸಮಿತಿ ಅತೀವ ಕಳವಳ ವ್ಯಕ್ತಪಡಿಸಿತು. ಗುಜರಾತ್ ರಾಜ್ಯ ಮತ್ತು ಕೇಂದ್ರ ಸರಕಾರಗಳು ಈ ವಿಚಾರವಾಗಿ ತಳೆದಿರುವ ಅಮಾನವೀಯ ಧೋರಣೆಯನ್ನು ಖಂಡಿಸಿದ ಸಭೆ ನರೇಂದ್ರ ಮೋದಿ ಸರಕಾರ ಆಡಳಿತದಲ್ಲಿ ಇರುವವರೆಗೆ ಸಂತ್ರಸ್ತರಿಗೆ ನ್ಯಾಯ ದೊರಕಲಾರದು ಎಂದು ಅಭಿಪ್ರಾಯಪಟ್ಟಿತು. ಒಂದು ಲಕ್ಷಕ್ಕೂ ಹೆಚ್ಚು ಜನರು ನಿರಾಶ್ರಿತರ ಶಿಬಿರಗಳಲ್ಲಿ ಇದ್ದು ಅವರಿಗೆ ಸೂಕ್ತ ಸೌಲಭ್ಯಗಳನ್ನು ಸರಕಾರ ಒದಗಿಸದೇ ಇರುವುದಲ್ಲದೆ ಅವುಗಳನ್ನು ಮುಚ್ಚಲು ತರಾತುರಿ ಮಾಡುತ್ತಿರುವುದು ವಿಷಾದನೀಯ ಎಂದು ಸಭೆ ಅಭಿಪ್ರಾಯಪಟ್ಟಿತು.

ಗುಜರಾತ್‌ನಲ್ಲಿ ಪರಿಸ್ಥಿತಿ ದಿನೇ ದಿನೇ ಹದಗೆಡುತ್ತಿದೆ. ಮೋದಿ ವಜಾಕ್ಕೆ ವ್ಯಾಪಕ ಒತ್ತಾಯ ಒತ್ತಡ ಬಂದರೂ ಬಿಜೆಪಿ ಮತ್ತು ಪ್ರಧಾನಿ ವಾಜಪೇಯಿ ಅವರ ಬೆಂಬಲಕ್ಕೆ ನಿಂತಿರುವುದು ನಾಚಿಕೆಗೇಡಿನ ಸಂಗತಿ. ಸಂವಿಧಾನ ಹಾಗೂ ಜಾತ್ಯಾತೀತ ಮೌಲ್ಯಗಳನ್ನೆಲ್ಲಾ ಗಾಳಿಗೆ ತೂರಿರುವ ಮೋದಿ ಸರಕಾರವನ್ನು ವಜಾಮಾಡುವುದಷ್ಟೇ ಅಲ್ಲ ಗುಜರಾತ್‌ನಲ್ಲಿ ರಾಷ್ಟ್ರಪತಿ ಆಡಳಿತವನ್ನು ಜಾರಿ ಮಾಡುವುದು ಈಗಿನ ಸನ್ನಿವೇಶದಲ್ಲಿ ಅತ್ಯಂತ ಸೂಕ್ತ ಕ್ರಮ ಎಂದು ಕೇಂದ್ರ ಸಮಿತಿ ಅಭಿಪ್ರಾಯಪಟ್ಟಿತು.

ಚುನಾಯಿತ ಸರಕಾರಗಳನ್ನು ವಜಾ ಮಾಡಲು ಸಂವಿಧಾನದ 356ನೇ ವಿಧಿಯನ್ನು ಬಳಸುವುದಕ್ಕೆ ಸಿಪಿಐ(ಎಂ) ಯಾವತ್ತೂ ವಿರೋಧವಿದೆ. ಆದರೆ, ಗುಜರಾತ್ ಸರಕಾರ ಸಂವಿಧಾನಕ್ಕೇ ವಿರೋಧವಾಗಿ ನಡೆದುಕೊಳ್ಳುತ್ತಿದೆ. ಅಷ್ಟು ಮಾತ್ರವೇ ಅಲ್ಲದೆ, ಸ್ವಾತಂತ್ರ್ಯ ಬಂದಾಗಿನಿಂದ ಯಾವುದೇ ಒಂದು ರಾಜ್ಯ ಅಲ್ಪಸಂಖ್ಯಾತರ ವಿರುದ್ಧವಾಗಿ ಈ ರೀತಿಯಾಗಿ ನಡೆದುಕೊಂಡಿಲ್ಲ ಎಂದಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಸಭೆ, ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಹೇರುವಂತೆ ಒತ್ತಾಯಿಸಿದೆ.

ಕೋಮು ಸೌಹಾರ್ದ ಆಂದೋಲನ

ಗುಜರಾತ್ ವಿದ್ಯಾಮಾನಗಳಿಂದಾಗಿ ದೇಶದ



...ದ ಸ್ವಾಗತ



17 ಜನ ಪೊಲಿಟ್‌ಬ್ಯೂರೊ ಸದಸ್ಯರನ್ನು ಒಳಗೊಂಡಂತೆ ಪಕ್ಷದ ಕೇಂದ್ರ ಸಮಿತಿಯಲ್ಲಿ ಇರುವ ಒಟ್ಟೂ 78 ಜನ ಸಂಗಾತಿ ಗಳೂ ದೇಶದ ವಿವಿಧ ಭಾಗಗಳಲ್ಲಿ ಪಕ್ಷದ ಕ್ರಾಂತಿಕಾರಿ ಆಂದೋಲನಕ್ಕೆ ನೇತೃತ್ವ ನೀಡುತ್ತಿರುವವರಾಗಿದ್ದಾರೆ. ಅಪ್ರತಿಮ ಮಹಿಳಾ ಹೋರಾಟ ಗಾರರು ಆಗಿರುವ ಕಾಮ್ರೇಡ್ ಅಹಲ್ಯಾ ರಂಗ್ನೇಕರ್, ಬೃಂದಾ ಕಾರಟ್, ಪಿ.ಕೆ.ಶ್ರೀಮತಿ, ಸುಭಾಶಿಣಿ ಅಲಿ, ಜೋಸೆಫಿನ್, ಪಾಪಾ ಉಮಾನಾಥ್ ಮತ್ತು ಮಲ್ಲು ಸ್ವರಾಜ್ಯಂ ಪಕ್ಷದ ಕೇಂದ್ರ ಸಮಿತಿಯ ಸದಸ್ಯರಾಗಿರುತ್ತಾರೆ. ಕೇಂದ್ರ ಸಮಿತಿ ಸದಸ್ಯರಲ್ಲಿ ಇಬ್ಬರು ಮಾಜಿ ಮುಖ್ಯಮಂತ್ರಿಗಳು, ಇಬ್ಬರು ಹಾಲಿ ಮುಖ್ಯಮಂತ್ರಿಗಳು, 6 ಜನ ಸಂಸತ್ ಸದಸ್ಯರು, 6 ಜನ ಮಂತ್ರಿಗಳು ಇದ್ದಾರೆ. ಲೋಕಸಭೆಯಲ್ಲಿ ಪಕ್ಷದ ನಾಯಕರಾಗಿರುವ ಕಾಮ್ರೇಡ್ ಸೋಮನಾಥ್ ಚಟರ್ಜಿ ಅವರು ಕೇಂದ್ರ ಸಮಿತಿಯ ಸದಸ್ಯರಲ್ಲಿ ಒಬ್ಬರಾಗಿದ್ದು ಬೆಂಗಳೂರಿಗೆ ಆಗಮಿಸಿದ್ದಾರೆ. ಕ್ರಾಂತಿಕಾರಿ ಕಮ್ಯುನಿಸ್ಟ್ ಆಂದೋಲನದ ಕೆನೆಯಂತಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಿಗೆ ಕರ್ನಾಟಕದ ದುಡಿಯುವ ಜನತೆ ಸಂಭ್ರಮದ ಸ್ವಾಗತವನ್ನು ಕೋರುತ್ತಿದೆ.

ರಾಜ್ಯದ ಕಾಂಗ್ರೆಸ್ ಸರ್ಕಾರವು ಕೇಂದ್ರದ ಬಿ.ಜೆ.ಪಿ ನೇತೃತ್ವದ ಸರ್ಕಾರವನ್ನು ರಾಜಕೀಯವಾಗಿ ವಿರೋಧಿಸುತ್ತಿದ್ದರೂ ಆರ್ಥಿಕ ರಂಗದಲ್ಲಿ ಕೇಂದ್ರ ಸರ್ಕಾರದ ಧೋರಣೆಗಳನ್ನೇ ಅನುಸರಿಸುತ್ತಿದೆ. ಸುಧಾರಣೆಗಳ ಹೆಸರಿನಲ್ಲಿ ರಾಜ್ಯದಲ್ಲಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ದಿವಾಳಿಕೋರ ಉದಾರೀಕರಣ ಜಾಗತೀಕರಣದ ನೀತಿಗಳನ್ನೇ ಜಾರಿಗೆ ತರುತ್ತಿದೆ. ವಾಜಪೇಯಿ ಸರ್ಕಾರ ಬಯಸಿದಂತೆ ರಾಜ್ಯದಲ್ಲಿ ಜನತೆಯ ಮೇಲೆ ದುಬಾರಿ ವಿದ್ಯುತ್ ದರಗಳನ್ನು ಹೇರಲು ಹಾಗೂ ವಿದ್ಯುತ್ ಕ್ಷೇತ್ರದ ಖಾಸಗೀಕರಣ ಮಾಡಲು ಹೊರಟಿದೆ. ಸರ್ಕಾರದ ಈ ಜನವಿರೋಧಿ ನೀತಿಯಿಂದಾಗಿ ರಾಜ್ಯದ ಜನತೆಯಲ್ಲಿ ಅತೃಪ್ತಿ ಆಳವಾಗುತ್ತಿದ್ದು ಸಕಾರಾತ್ಮಕವಾಗಿ ರಾಜಕೀಯ ಆಂದೋಲನವಾಗಿ ಗೆಲುವು ಪ್ರಾಪ್ತವಾಗಿಸುವಲ್ಲಿ ಸಿಪಿಐ(ಎಂ) ಮಹತ್ವದ ಪಾತ್ರವನ್ನು ನಿರ್ವಹಿಸಬೇಕಾಗಿದೆ. ಬಿ.ಜೆ.ಪಿ ಹಾಗೂ ಕಾಂಗ್ರೆಸ್ಸಿಗೆ ಭಿನ್ನವಾದ ಜನಪರ ಪರ್ಯಾಯ ನೀತಿಗಳನ್ನು ರಾಜ್ಯದ ಜನತೆಯ ಮುಂದಿಟ್ಟು ಅವುಗಳಿಗಾಗಿ ಹೋರಾಡಲು ಜನತೆಯನ್ನು ವಿಶಾಲವಾಗಿ ಅಣಿನೆರೆಸುವುದು ಸಿಪಿಐ(ಎಂ) ಮುಂದಿರುವ ದೊಡ್ಡ ಸವಾಲು. ಈ ಸವಾಲನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಾಗುವಂತೆ ಪಕ್ಷವನ್ನು ಬಲಪಡಿಸುವಲ್ಲಿ ಮೇ 24ರಿಂದ 26ರವರೆಗೆ ಬೆಂಗಳೂರಿನಲ್ಲಿ ನಡೆಯುವ ಕೇಂದ್ರ ಸಮಿತಿಯ ಸಭೆ ಹಾಗೂ ಕೊನೆಯ ದಿನದ ರ್‍ಯಾಲಿ ಒಂದು ಮಹತ್ವದ ಘಟನೆಯಾಗಲಿದೆ.

- ನಿತ್ಯಾನಂದಸ್ವಾಮಿ

ಪ್ರೀತಿ ವಿಶ್ವಾಸದ ಅಪ್ಪುಗೆ!

ಕ್ರಾಂತಿಕಾರಿ ಪಕ್ಷದ ಧುರೀಣರು ಉದ್ಯಾನ ನಗರಿಗೆ ಬರುತ್ತಾರೆಂಬ ಸುದ್ದಿ ಪ್ರಚುರಗೊಂಡಿದ್ದೇ ತಡ ಬೇಸಗೆಯ ಬಿರು ಬಿಸಲಿನ ಧಗೆ ಮರೆತೇ ಬಿಟ್ಟ ಹಲವಾರು ವಿಭಾಗಗಳ ಚಳುವಳಿಗಳ ಮುಖಂಡರು ಚುರುಕುಗೊಂಡರು. ಹಿರಿಯ ನೇತಾರರ ಅನುಭವ ಹಲವು ಜನ ವಿಭಾಗಗಳಿಗೆ ತಲುಪುವಂತೆ ಮಾಡಲು ಯೋಚಿಸಿದರು, ಹಲಕೆಲವು ಕಾರ್ಯಕ್ರಮಗಳನ್ನು ಯೋಜಿಸಿದರು.

ಹಾಗೆ ನೋಡಿದರೆ, ಪ್ರಜಾಸತ್ತಾತ್ಮಕ ಚಳುವಳಿಯ ವಲಯ ಮಾತ್ರವೇ ಅಲ್ಲದೇ ಆಂದೋಲನದೊಂದಿಗೆ ಯಾವುದೇ ಸಂಪರ್ಕವೂ ಇಲ್ಲದ ಕೆಲವು ವಿಭಾಗಗಳಲ್ಲಿ ಕೂಡ ಪುಳಕದ ಅಲೆ ಎದ್ದಿದ್ದು ವಾಸ್ತವ. ವಿಶೇಷವಾಗಿ ಅಲ್ಪಸಂಖ್ಯಾತ ಸಮುದಾಯದವರ ಪ್ರತಿಕ್ರಿಯೆ ಗಮನಾರ್ಹ. ಎಡಪಂಥೀಯರು - ಮಾರ್ಕ್ಸ್‌ವಾದಿಗಳು ಮಾತ್ರವೇ ಅಲ್ಪಸಂಖ್ಯಾತರ ನಿಜವಾದ ಮಿತ್ರರು ಎಂಬುದಕ್ಕೆ ಇದು ಸಾಕ್ಷಿಯಾಯಿತು.

ಸಿಪಿಐ(ಎಂ) ನಾಯಕರು ಪಾಲಿಟ್‌ಬ್ಯೂರೋ ಹಾಗೂ ಕೇಂದ್ರ ಸಮಿತಿ ಸಭೆಗಳ ಬಿರುಸಿನ ಚಟುವಟಿಕೆಗಳ ನಡುವೆಯೂ ಅನೇಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ಸಂಕ್ಷಿಪ್ತ ನೋಟ ಇಲ್ಲಿದೆ.

● ಮೇ 23 ರಂದು ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯದ ಪ್ರಮುಖರು ಕಾಮ್ರೇಡ್ ಜ್ಯೋತಿಬಸುರವರನ್ನು ಭೇಟಿ ಮಾಡಲು ನಿರ್ಧರಿಸಿದರು. ಕೊನೆಗೂ ಅದು ಏರ್ಪಟ್ಟಿತು. ಅವರ ಜೊತೆ ನಡೆದ ಸಂವಾದದಲ್ಲಿ ಕಾಂ. ಜ್ಯೋತಿಬಸು, ಕಾಂ. ಬೃಂದಾಕಾರಟ್ ಮತ್ತು ಕಾಂ. ಸುಭಾಷಿಣಿ ಅಲಿ ಪಾಲ್ಗೊಂಡಿದ್ದರು.

● ಪತ್ರಿಕೆಗಳ ಸಂಪಾದಕರ ಜತೆ ಹಿರಿಯ ಧುರೀಣರು ಚಹಾ ಕೂಟ ನಡೆಸಿದ್ದು ಒಂದು ವಿಶೇಷ. ಪಿ.ಬಿ-ಸಿ.ಸಿ. ಸಭೆಯ ತಾಣದಲ್ಲೇ ನಡೆದ ಈ ಕಾರ್ಯಕ್ರಮದಲ್ಲಿ ಕಾಂ. ಸುರ್ಜಿತ್, ಕಾಂ.ಯೆಚೂರಿ ಮತ್ತು ಕಾಂ. ಕಾರಟ್ ಭಾಗವಹಿಸಿ ಮಾಧ್ಯಮದ ಪ್ರಮುಖರ ಜೊತೆ ಸಂವಾದ ನಡೆಸಿದರು.

● ಬೆಂಗಳೂರಿನಲ್ಲಿ ನೆಲೆಸಿರುವ ಬಂಗಾಳಿಗಳು ರಚಿಸಿಕೊಂಡಿರುವ 'ಬೆಂಗಾಲಿ ಎಸೋಸಿಯೇಷನ್ ಸಂಸ್ಥೆ' ಜ್ಯೋತಿಬಸು ಹಾಗೂ ಬುದ್ಧದೇವ ಭಟ್ಟಾಚಾರ್ಯ ಮತ್ತು ಮಾಣಿಕ್ ಸರ್ಕಾರ್ ಅವರನ್ನು ಕರೆಸಿಕೊಂಡು ಔತಣಕೂಟ ಏರ್ಪಡಿಸಿ ಸಂಭ್ರಮಿಸಿತು. ಈ ಕಾರ್ಯಕ್ರಮ ನಡೆದದ್ದು ಮೇ 24 ರಂದು ಸಂಜೆ.

● ಕರ್ನಾಟಕದ ವಿಧಾನಸಭೆಯ ಮಾಜಿ ಸ್ಪೀಕರ್ ಎಸ್.ರಮೇಶ್‌ಕುಮಾರ್, ಜನತಾದಳದ ಮುಖಂಡರಾದ ಎಂ.ಸಿ.ನಾಣಯ್ಯ ಮತ್ತು ಜಯಪ್ರಕಾಶ್ ಹೆಗ್ಡೆ, ಸಿಪಿಐ(ಎಂ)ನ ಹಿರಿಯ ನಾಯಕರನ್ನು ಸೌಹಾರ್ದಯುತವಾಗಿ ಭೇಟಿಯಾದರು. ಹಾಗೂ 24 ರಂದು ಭೋಜನಕೂಟ ಏರ್ಪಡಿಸಲಾಗಿತ್ತು.

● ವಿಮಾ ನೌಕರರ ಸಂಘ ಮೇ 25 ರಂದು ಎಲ್‌ಐಸಿ ಕಛೇರಿಯಲ್ಲಿ ವ್ಯವಸ್ಥೆಗೊಳಿಸಿದ್ದ 'ಇಂದಿನ ಭಾರತ' ಎಂಬ ವಿಚಾರಗೋಷ್ಠಿಯಲ್ಲಿ ಕಾಂ.ಸೀತಾರಾಂ ಯೆಚೂರಿ ಮತ್ತು ಕಾಂ. ಬೃಂದಾ ಕಾರಟ್ ಉಪನ್ಯಾಸ ನೀಡಿದರು.

● ಹಿರಿಯ ಸಂಸದೀಯ ಪಟು, ಲೋಕಸಭೆಯಲ್ಲಿ ಸಿಪಿಐ(ಎಂ) ಗುಂಪಿನ ನಾಯಕ ಕಾಂ.ಸೋಮನಾಥ ಚಟರ್ಜಿ ಮೇ 25 ರಂದು ನಗರದ ವಕೀಲರನ್ನುದ್ದೇಶಿಸಿ ಮಾತನಾಡಿದರು. ಹಾಗೆಯೇ ಅಂದು ಮಧ್ಯಾಹ್ನ ಸೆಂಟ್ ಜೋಸೆಫ್ ಕಾಲೇಜಿನಲ್ಲಿಯೂ ಕೋಮುವಾದದ ಕುರಿತು ಉಪನ್ಯಾಸ ನೀಡಿದರು.

● ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಸಿಪಿಐ(ಎಂ) ನಾಯಕರನ್ನು ಆತ್ಮೀಯವಾಗಿ ಬರ ಮಾಡಿಕೊಂಡು ಭೋಜನಕೂಟ ಏರ್ಪಡಿಸಿದ್ದರು.

● ಸುಭಾಷಿಣಿ ಅಲಿಯನ್ನು ಅರೇಬಿಕ್ ಶಾಲೆಯೊಂದರ ಮುಖ್ಯ ಅತಿಥಿಗಳಾಗಿ ಆಹ್ವಾನಿಸಿ ಆತ್ಮೀಯತೆ ತೋರಿತು.

● ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘವು ಬುದ್ಧದೇವ್‌ರೊಂದಿಗೆ 'ಮೀಟ್ ದಿ ಪ್ರೆಸ್' ಅತ್ಯಂತ ಯಶಸ್ವಿಯಾಗಿ ಸಂಘಟಿಸಿತು. ಬುದ್ಧದೇವ್‌ರ ಸರಳತೆ, ಪ್ರಖರ ವೈಚಾರಿಕತೆ ಎಲ್ಲರ ಹೃದಯ ಹೊಕ್ಕಿತು. ಒಬ್ಬ ಭಿನ್ನವಾದ ಮುಖ್ಯಮಂತ್ರಿಯನ್ನು ಕಂಡರು. ಆದರೆ ಬಿಜೆಪಿ ಶಾಸಕ ಸುರೇಶ್‌ಕುಮಾರ್ ಒಂದು ಪತ್ರಿಕೆಯಲ್ಲಿ ನರೇಂದ್ರ ಮೋದಿ ಕ್ಯಾಂಪಿನ ಕೊಳಚೆ ಗುಂಡಿಯಿಂದ ಕಿರಿಚಿದ್ದು ವರದಿಯಾದುದು ಒಂದು ಹಾಸ್ಯಾಸ್ಪದ ಸಂಗತಿ.

...) ಒತ್ತಾಯ

ಏಕತೆ ಮತ್ತು ಕೋಮು ಸೌಹಾರ್ದಕ್ಕೆ ಒದಗಿರುವ ಅಪಾಯದ ವಿರುದ್ಧ ಜನಜಾಗೃತಿ ಮೂಡಿಸಲು ವ್ಯಾಪಕ ಆಂದೋಲನ ನಡೆಸಲು ಕೇಂದ್ರ ಸಮಿತಿ ಸಭೆ ನಿರ್ಧರಿಸಿತು. ಗುಜರಾತ್ ಘಟನೆಗಳಿಂದಾಗಿ ಜಾತ್ಯಾತೀತ ತತ್ವಗಳು ಮತ್ತು ಪ್ರಜಾಪ್ರಭುತ್ವಕ್ಕೆ ಎದುರಾಗಿರುವ ಅಪಾಯವನ್ನು ಪರಿಣಾಮಕಾರಿಯಾಗಿ ಎದುರಿಸಲಿಕ್ಕಾಗಿ ಎಲ್ಲ ಜನವಿಭಾಗಗಳ ಪ್ರಬಲ ಚಳವಳಿಯನ್ನು ಕಟ್ಟಿಬೆಳೆಸುವುದು ಅಗತ್ಯ ಎಂದು ಸಭೆ ಪ್ರತಿಪಾದಿಸಿತು.

ಇಂಥ ಒಂದು ವಿಶಾಲ ತಳಹದಿಯ ಆಂದೋಲನವನ್ನು ಕಟ್ಟುವ ದಿಶೆಯಲ್ಲಿ ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳುವ ಅಧಿಕಾರವನ್ನು ಕೇಂದ್ರಸಮಿತಿ ಸಭೆ ಪಾಲಿಟ್‌ಬ್ಯೂರೋಗೆ ವಹಿಸಿತು.

ಏಕಸ್ವಾಮ್ಯ ಸ್ಥಾಪನೆಗೆ ಅಮೇರಿಕ ಮತ್ತೆ ಯತ್ನ

ಜಗತ್ತಿನ ಮೇಲೆ ಸೇನಾ ಏಕಸ್ವಾಮ್ಯವನ್ನು ಹೇರಲು ಅಮೇರಿಕ ಸತತವಾಗಿ ಪ್ರಯತ್ನ ನಡೆಸುತ್ತಿರುವುದಕ್ಕೆ ಸಿಪಿಐ(ಎಂ) ಕೇಂದ್ರ ಸಮಿತಿ ಸಭೆ ಗಂಭೀರ ಕಳವಳ ವ್ಯಕ್ತಪಡಿಸಿತು. ಇರಾನ್, ಇರಾಕ್, ಲಿಬ್ಯಾ, ಸುಡಾನ್ ಮತ್ತು ಉತ್ತರ ಕೋರಿಯಾಗಳು 'ದುಷ್ಟಕೂಟ' ಎಂದು ಅಮೇರಿಕ ಅಧ್ಯಕ್ಷ ಜಾರ್ಜ್ ಬುಷ್ ವ್ಯಾಖ್ಯಾನಿಸಿದ್ದರು. ದೇಶಗಳ ಈ ಪಟ್ಟಿಯನ್ನು ಈಗ ವಿಸ್ತರಿಸಲಾಗುತ್ತಿದೆ. ಸಮಾಜವಾದಿ ಕ್ಯೂಬಾವನ್ನು ಅದಕ್ಕೆ ಸೇರಿಸಲಾಗಿದೆ. ಕ್ಯೂಬಾಕ್ಕೆ ಇತ್ತೀಚೆಗೆ ಭೇಟಿ ನೀಡಿದ ಅಮೇರಿಕದ ಮಾಜಿ ಅಧ್ಯಕ್ಷ ಜಿಮ್ಮಿ ಕಾರ್ಟರ್, ಕ್ಯೂಬಾ ವಿರುದ್ಧದ ಆರ್ಥಿಕ ದಿಗ್ಬಂಧನವನ್ನು ರದ್ದುಪಡಿಸುವಂತೆ ಕೋರಿದ್ದರು. ಇದಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸಿರುವ ಬುಷ್ ಕ್ಯೂಬಾಕ್ಕೆ ಬೆದರಿಕೆ ಹಾಕಿದ್ದಾರೆ ಹಾಗೂ ದಿಗ್ಬಂಧನ ಮುಂದುವರಿಯುತ್ತದೆ ಎಂದಿದ್ದಾರೆ.

ಇನ್ನಷ್ಟು ಆಕ್ರಮಣಕಾರಿ ಹೆಜ್ಜೆಗಳು

ಶಸ್ತ್ರಾಸ್ತ್ರ ಪೈಪೋಟಿಯನ್ನು ತೀವ್ರಗೊಳಿಸಲು ಹಾಗೂ ಹೊಸ ಅಸ್ತ್ರಗಳನ್ನು ಅಭಿವೃದ್ಧಿಪಡಿಸಲು ಬುಷ್ ಆಡಳಿತ ಪಣ ತೊಟ್ಟಿರುವಂತಿದೆ. ಎ.ಬಿ.ಎಂ. ಒಡಂಬಡಿಕೆಯಿಂದ ಹಿಂದೆ ಸರಿದಿರುವುದು ಹಾಗೂ ಜೈವಿಕ ಅಸ್ತ್ರಗಳ ಒಪ್ಪಂದವನ್ನು ಸ್ಥಿರೀಕರಿಸಲು ಅದು ನಿರಾಕರಿಸಿರುವುದು ಈ ಧೋರಣೆಯ ಅಂಗವಾಗಿದೆ.

ಇನ್ನಷ್ಟು ಆಕ್ರಮಣಕಾರಿ ಶಸ್ತ್ರಾಸ್ತ್ರ ಅಣ್ವಸ್ತ್ರ ನೀತಿಯನ್ನು ಅನುಸರಿಸುವುದಾಗಿ ಅಮೇರಿಕ ತಿಳಿಸಿದೆ. ತನ್ನ ಇತ್ತೀಚಿನ 'ಅಣ್ವಸ್ತ್ರ ನೀತಿ ಮರುಪರಿಶೀಲನೆ' ಎಂಬ ಮರುಪರಿಶೀಲನೆಯಲ್ಲಿ ಅದು ತನ್ನ ನಿರ್ಧಾರವನ್ನು ತಿಳಿಸಿದೆ. ರಷ್ಯಾ ಮತ್ತು ಚೀನಾದಂಥ ಅಣ್ವಸ್ತ್ರ ಹೊಂದಿದ ದೇಶಗಳನ್ನು ಪ್ರಧಾನ ಗುರಿಯಾಗಿರಿಸಿರುವ 'ಏಕಪಕ್ಷೀಯ ನಿಶ್ಚಿತ ವಿನಾಶ' ನೀತಿಗಾಗಿ ಈ ಮರುಪರಿಶೀಲನೆ ನೀತಿ ಕರೆ ನೀಡಿದೆ. ತನಗೆ ಬೆದರಿಕೆಯಿದೆ ಎಂದು ಭಾವಿಸಿದಾಗ ಅಣ್ವಸ್ತ್ರಗಳನ್ನು ಹೊಂದಿರದ ದೇಶಗಳ ಮೇಲೆ ಅಣ್ವಸ್ತ್ರ ದಾಳಿ ಮಾಡುವ ಕುಟಿಲ ಚಿಂತನೆಯನ್ನು ಅಮೇರಿಕ ಹೊರಗೆಡವಿದೆ.

ಈ ರೀತಿಯಾಗಿ ಅಮೇರಿಕ ಹೊಸ ಅಣ್ವಸ್ತ್ರಗಳನ್ನು ನಿರ್ಮಿಸುವ, ಅಣ್ವಸ್ತ್ರ ಹೊಂದಿದ ದೇಶಗಳ ಮೇಲೆಯೂ ಅಣ್ವಸ್ತ್ರ ದಾಳಿ ನಡೆಸುವ ಹಾಗೂ ತನ್ಮೂಲಕ ದೀರ್ಘಕಾಲೀನ ಅಣ್ವಸ್ತ್ರ ಪೈಪೋಟಿಯನ್ನು ಹುಟ್ಟು ಹಾಕುವುದಕ್ಕೆ ಸಿದ್ಧತೆ ನಡೆಸಿದೆ.

ಬುಷ್-ಪುಟಿನ್ ಇತ್ತೀಚಿನ ಒಪ್ಪಂದವನ್ನು ಗಮನಿಸಿದರೆ, ಅಣ್ವಸ್ತ್ರ ವಿಚಾರದಲ್ಲಿ ರಷ್ಯಾ ರಾಜಿ ಮಾಡಿಕೊಂಡು ಅಮೇರಿಕ ಮೇಲುಗೈ ಪಡೆಯುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದು ಸ್ಪಷ್ಟವಾಗುತ್ತದೆ.

ಈ ವಿಶ್ವಮಾನಗಳನ್ನು ಗಮನದಲ್ಲಿರಿಸಿಕೊಂಡು, ಅಮೇರಿಕ ಸಾಮ್ರಾಜ್ಯಶಾಹಿ ವಿರುದ್ಧ ಪ್ರಚಾರಾಂದೋಲನವನ್ನು ತೀವ್ರಗೊಳಿಸಲು ಹಾಗೂ ಜಗತ್ತು ಮತ್ತು ಭಾರತಕ್ಕೆ ಎದುರಾಗಿರುವ ಅಪಾಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಸಾಮೂಹಿಕ ಚಳವಳಿಗಳನ್ನು ನಡೆಸಲು ಕೇಂದ್ರ ಸಮಿತಿ ನಿರ್ಧರಿಸಿದೆ.

ವಾಜಪೇಯಿ ಸರಕಾರದ ಶರಣಾಗತಿ

ಜಗತ್ತಿನ ಮೇಲೆ ಏಕಸ್ವಾಮ್ಯ ಸಾಧಿಸುವ ಅಮೇರಿಕ ಈ ಎಲ್ಲ ಪ್ರಯತ್ನಗಳನ್ನು ನಡೆಸುತ್ತಿದ್ದರೂ ವಾಜಪೇಯಿ ಸರಕಾರ ಯಾವುದೇ ಎಗ್ಗಿಲ್ಲದೆ ಪೂರ್ಣವಾಗಿ ಅಮೇರಿಕ ಪರವಾದ ಶರಣಾಗತಿ ನೀತಿಯನ್ನು ಅನುಸರಿಸುತ್ತಿರುವುದನ್ನು ಕೇಂದ್ರ ಸಮಿತಿ ಗಮನಿಸಿದೆ. ಭಾರತ-ಪಾಕ್ ನಡುವಿನ ಸದ್ಯದ ಉದ್ವಿಗ್ನತೆಯನ್ನು ಪರಿಗಣಿಸಿದಾಗ, ಅಮೇರಿಕಕ್ಕೆ ಭಾರತ ಶರಣಾಗುವುದರಿಂದ, ವಿಶೇಷವಾಗಿ ಸೇನಾ ಕ್ಷೇತ್ರದಲ್ಲಿ ಗಂಭೀರ ದುಷ್ಪರಿಣಾಮ ಉಂಟಾಗಿದೆ. ರಕ್ಷಣೆ ಮತ್ತು ಭದ್ರತೆ ವಿಚಾರದಲ್ಲಿ ಭಾರತದ ಸಾರ್ವಭೌಮತ್ವಕ್ಕೆ ಧಕ್ಕೆ ಒದಗಲಿದೆ.

ಬೇಜವಾಬ್ದಾರಿ ಖಾಸಗೀಕರಣ

ವಾಜಪೇಯಿ ಸರಕಾರ ಜಪಾನಿನ ಬಹುರಾಷ್ಟ್ರೀಯ ಸುಜುಕಿ ಕಂಪನಿಗೆ ಮಾರುತಿ ಉದ್ಯೋಗ ಸಂಸ್ಥೆಯನ್ನು ವಸ್ತುಶಃ ಹಸ್ತಾಂತರಿಸಿರುವುದನ್ನು ಕೇಂದ್ರ ಸಮಿತಿ ಖಂಡಿಸಿದೆ. ಸಾರ್ವಜನಿಕ ಕ್ಷೇತ್ರದ ಬೃಹತ್ ಪೆಟ್ರೋಲಿಯಂ ಸಂಸ್ಥೆಯಾದ ಐಪಿಸಿಎಲ್‌ಅನ್ನು ಲಯನ್ಸ್ ಕಂಪನಿ ಖರೀದಿಸುವುದರಿಂದ ಪೆಟ್ರೋಲಿಯಂ ಕ್ಷೇತ್ರದಲ್ಲಿ ಬೃಹತ್ ಪ್ರಮಾಣದಲ್ಲಿ ಏಕಸ್ವಾಮ್ಯತೆ ಉಂಟಾಗುತ್ತದೆ.ವಾಸ್ತವವಾಗಿ ಇದು ಅತೀ ಮಹತ್ವದ ನಿರ್ಣಾಯಕ ಕ್ಷೇತ್ರಗಳ ಮೇಲೆ ಇರುವ ಏಕಸ್ವಾಮ್ಯವನ್ನು ತೆಗೆದುಹಾಕುವ ವಾಜಪೇಯಿ ಸರಕಾರದ ಘೋಷಿತ ನೀತಿಗೇ ವಿರುದ್ಧವಾದುದ್ದಾಗಿದೆ.

ಕಾಂಗ್ರೆಸ್‌ನ ಸಕ್ರಿಯ ಬೆಂಬಲದೊಂದಿಗೆ ಸಂಸತ್ತು ಅಂಗೀಕರಿಸಿದ ಪೇಟೆಂಟ್ ಕಾಯಿದೆಯ ತಿದ್ದುಪಡಿಯನ್ನು ಕೇಂದ್ರ ಸಮಿತಿ ವಿರೋಧಿಸಿದೆ. ಅಮೇರಿಕ ತನ್ನ ಕ್ಷೇತ್ರಕ್ಕೆ ಸಬ್ಸಿಡಿಗಳನ್ನು ಹೆಚ್ಚಿಸಿರುವ ಅವಧಿಯಲ್ಲೇ ಭಾರತ ಈ ರೀತಿಯಾಗಿ ಡಬ್ಲ್ಯುಟಿಓ ಒತ್ತಡಗಳಿಗೆ ಬಲಿ ಬಿದ್ದಿದೆ.

ಹೋರಾಟಗಳನ್ನು ತೀಕ್ಷ್ಣಗೊಳಿಸಲು ಕರೆ

ಏಪ್ರಿಲ್ 16ರ ಸಾರ್ವಜನಿಕ ರಂಗದ ಮುಷ್ಕರದ ಯಶಸ್ಸನ್ನು ಗಣನೆಗೆ ತೆಗೆದುಕೊಂಡ

ಪುಟ 12 ಕ್ಕೆ

ಗುಜರಾತ್ ಹತ್ಯಾಕಾಂಡ ಇನ್ನೂ ನಿಂತಿಲ್ಲ. ಅದನ್ನು ಬಿಜೆಪಿ - ಆರ್‌ಎಸ್‌ಎಸ್ ಹಲವು ಪ್ರಯತ್ನ ನಡೆಸಿವೆ. ಗಮನವನ್ನು ಭಾರತ ಪಾಕ್‌ನತ್ತ ಘರ್ಷಣೆಯತ್ತ ಬಳಸಲು ಮುಂದಾಗಿವೆ. ವಿಶ್ವಹಿಂದೂಪರಿಷತ್, ಬಜರಂಗದಳ ನಡೆಸಿದ ಅವ್ಯಾಹತ ನರಮೇಧದಲ್ಲಿ ಬಲಿಯಾದ, ಆಘಾತಕಾರಿ ಧಾಳಿ ಅನುಭವಿಸಿದವರ ಸ್ಥಿತಿ ಊಹಿಸಲೂ ಅಸಾಧ್ಯ. ಬದುಕುಳಿದ ಮಕ್ಕಳ, ಹೆಂಗಸರು ಅನುಭವಿಸಿದ ಧಾರುಣ ವಿವರಗಳಲ್ಲಿ ಕೆಲವನ್ನು ಇಲ್ಲಿ ಆಯ್ಕೆ ಮಾಡಲಾಗಿದೆ.

ಕಡಿಯಲಾಗಿದೆ. ಓಗೆ ಹಲವು ಕುಟುಂಬಗ... ಕಣ್ಣೀರು ಸುರಿಸುತ್ತಿವೆ ಸುಟ್ಟು ಕರಕಲಾದ... ಮನೆಗಳು ಕಥೆ ಹೇಳುತ್ತವೆ, ಮೌನ ಸಾಕ್ಷಿಗಳಾಗಿ... ಈ ಎಲ್ಲವೂ ನಡೆದಿದ್ದು ಮಾರ್ಚ್ 5ರಂದು... (ನರೇಂದ್ರ ಮೋದಿ ಹೇಳಿಕೊಂಡಿದ್ದು ಮ... ಅಡ್ವಾನಿಯವರಿಂದ ಶಹಬ್ಬಾಸ್‌ಗಿರಿ ಪಡೆದಿದ್ದು... ಕೇವಲ 72 ಘಂಟೆಗಳಲ್ಲಿ ದಂಗೆಯನ್ನು ನಿಯಂತ್ರಿಸಲಾಗಿದೆ)

ಗುಜರಾತ್ ಹತ್ಯಾಕಾಂಡ

ತಲ್ಲಣಕಾರಿ ಅನುಭವ

ಗುಜರಾತ್ ಸುತ್ತಮುತ್ತ ಘಾಸಿಗೊಳಗಾದ ಮಕ್ಕಳ ಮನಸ್ಸುಗಳು ತನ್ನ ಎಳೆತನವನ್ನು ಮತ್ತೆಂದೂ ಮರಳಿ ಪಡೆಯಲಾರವು -

ಡಾ/ ಶ್ರೀನಿವಾಸಮೂರ್ತಿ

ಮನಃ ಶಾಸ್ತ್ರಜ್ಞರು - ನಿಮ್ಹಾನ್ಸ್

●●●

ನನ್ನ ಮನಸ್ಸು ಸತ್ತು ಹೋಗಿದೆ ಎನಿಸುತ್ತಿದೆ

ಜಾವೇದ್ -14ವರ್ಷ

●●●

ನನಗೆ ಕಣ್ಣು ಮುಚ್ಚಲೂ ಭಯವಾಗ್ತಿದೆ. ನಾನವನ್ನೆಲ್ಲ ನೋಡಿ ಗುರುತಿಸಿದ್ದೇನೆಂದು ಅವರಿಗೆ ಗೊತ್ತು. ಅವರು ಬಂದು ನನ್ನನ್ನು ಮುಗಿಸುತ್ತಾರೆ

ಮಹ್ಮದ್ ಯಾಸೀಮ್-8ವರ್ಷ

●●●


ನಾನಿನ್ನು ಹಿಂದೂಗಳ ಜೊತೆ ಬದುಕಲಾರೆ. ಅವರು ನಮ್ಮನ್ನು ಬದುಕಲು ಬಿಡುವುದಿಲ್ಲ. ನಮ್ಮ ಶಿಬಿರದ ಮೇಲೆ ಹಲವು ಸಾರಿ ದಾಳಿ ಮಾಡಿದ್ದಾರೆ. ಶಿಬಿರದ ಪಕ್ಕದಲ್ಲಿಯೇ ಪ್ರತಿದಿನ ಬಂದೂಕಿನಿಂದ ಗುಂಡುಗಳು ಹಾರುತ್ತವೆ. ಅವರಿಗೆ ಮುಸ್ಲಿಮರು ಹಿಂದೂ ಸ್ಥಾನದಲ್ಲಿರುವುದು ಬೇಡ.

- ಯಾಸಿನ್ -12 ವರ್ಷ

ಈ ಮೇಲಿನ ಮಾತುಗಳು ಯಾವುದೇ ನಾಟಕದ ಡೈಲಾಗ್‌ಗಳಲ್ಲ. ಕೇಂದ್ರ ಸರ್ಕಾರ ಕೃಪಾ ಪೋಷಿತ ಮೋದಿ ಸೂತ್ರಾಧಾರಿತ 'ನರಹತ್ಯೆ ಯಜ್ಞದಲ್ಲಿ' ಬೆಂದು -ನೊಂದ ಮಕ್ಕಳಲ್ಲಿ ಕೆಲವರ ನುಡಿಗಳಿವು.

ಗುಜರಾತಿನಲ್ಲಿ ಇಂದಿಗೂ ನಡೆಯುತ್ತಿರುವ ಹಿಂಸಾಚಾರದ ಕುರಿತು ಆಡುವ ಯಾವ ಮಾತುಗಳೂ ಅದರ ಭೀಭತ್ಸತೆಯನ್ನು ತೆರೆದಿಡಲಾರವು. ಭೇಟಿ ನೀಡಿ ಬಂದವರು ಹಂಚಿಕೊಳ್ಳುವ ಆಘಾತಕಾರಿ ಅನುಭವಗಳು ಎಂತಹವರನ್ನೂ ತಲ್ಲಣಗೊಳಿಸುತ್ತದೆ. ಶಿಬಿರಗಳಲ್ಲಿಯ ಮಕ್ಕಳ ಸಂಖ್ಯೆಯೇ 42000 ವನ್ನು ಮೀರಿದೆ. ಅಹ್ಮದಾಬಾದ್ ಒಂದರಲ್ಲೇ 30,000ಕ್ಕೂ ಹೆಚ್ಚು ಮಕ್ಕಳಿದ್ದಾರೆ ಎನ್ನಲಾಗಿದೆ. ಅವರ ಮನಸ್ಸುಗಳ ಮೇಲೆ ಆದ ಘೋರ ಪರಿಣಾಮದಿಂದ ಅವರೆಂದೂ ಹೊರಬರಲಾರರೆಂಬುದು ಅಲ್ಲಿಯ ನೊಂದವರ ಶಿಬಿರ ನಡೆಸುತ್ತಿರುವ ಸಿಟಿಜನ್ಸ್ ಇನಿಷಿಯೇಟಿವ್ ಸಂಸ್ಥೆ (NGO)ಯ ಮುಖ್ಯಸ್ಥ ಫಾದರ್-ವಿಕ್ಟರ್ ಮೋಸಸ್‌ರವರ ಅಭಿಪ್ರಾಯ.

ಇದು ನೂರಕ್ಕೆ ನೂರು ಸತ್ಯ. ಮತಾಂಧತೆಯ ಅಮಲು ತಲೆಗೇರಿದ ನರರಾಕ್ಷಸರು ನಡೆಸಿದ ಗಲಭೆ ಎಷ್ಟು ಭೀಕರವೆಂದರೆ ತಮ್ಮ ಅಕ್ಕ-ತಂಗಿ, ತಾಯಂದಿರ ಮೇಲೆ ಅತ್ಯಾಚಾರ ನಡೆಯುತ್ತಿರುವುದನ್ನು ಕಣ್ಣಾರೆ ನೋಡಿ, ಆ ಕ್ರಿಯೆಯ ಅರ್ಥವೇ ತಿಳಿಯದ ಮಕ್ಕಳು ಅದನ್ನು ವಿವರಿಸುತ್ತಿದ್ದ ರೀತಿ ನನ್ನ ಪಕ್ಕದ ಮನೆಯ 16 ವರ್ಷದ ಹುಡುಗಿಯನ್ನು ಹಿಡಿದೆಳೆದೊಯ್ದರು. ಅವಳ ಬಟ್ಟೆಯನ್ನು ಬಿಚ್ಚಿ 10 ಜನ ಒಬ್ಬರ ನಂತರ ಒಬ್ಬರು ಅವಳ ಮೇಲೆ ಹಾರಿ ಬೀಳುತ್ತಿದ್ದರು. ನಂತರ ನೆಲದ ಮೇಲೆ ಬಿದ್ದಿದ್ದ ಆಕೆಯ ಹೊಟ್ಟೆಗೆ ತಿವಿದು ಸಾಯಿಸಿ ಅವರು ಹೋದರು. ಭಯದಿಂದ ತಲ್ಲಣಿಸಿದ್ದ ನಮಗೆ ಅವರನ್ನು ತಡೆಯಲು



ಸಾಧ್ಯವಾಗಲಿಲ್ಲ. (ರೇಷನ್ ಬಾನು -11 ವರ್ಷ)

ಕೋಮು ದ್ವೇಷದ - ಉರಿ ಮಕ್ಕಳು ಹೀಗೆ ಅನುಭವಿಸಿದರೆ ಇನ್ನು ಮಹಿಳೆಯರ ಸ್ಥಿತಿಯಂತೂ ಹೇಳುವುದೇ ಕಷ್ಟ.

ರಾಧಿಕಾಪುರ ಹಳ್ಳಿಯ -


(ದಾಹೋಬ್ ಜಿಲ್ಲೆ) ಬಿ.ಯ ಕಥೆ

21 ವರ್ಷದ 5 ತಿಂಗಳ ಗರ್ಭಿಣಿ ಗುಜರಾತ್‌ಗೆ ಭೇಟಿ ನೀಡಿದ - ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಮತ್ತು ಸಿ.ಪಿ.ಐ(ಎಂ) ಪಕ್ಷದ ನಿಯೋಗಕ್ಕೆ - ಶೂನ್ಯದತ್ತ ದೃಷ್ಟಿ ನೆಟ್ಟು - ಆಡಿದ ಮಾತುಗಳು. ನನ್ನ ಹಳ್ಳಿಯ ಎಲ್ಲ ಮುಸ್ಲಿಂ ಮನೆಗಳು ನಮ್ಮದೇ ಊರಿನ ಮೇಲ್ಜಾತಿಯ ಜನರಿಂದ ಮಾರ್ಚ್ 1ರಂದು ದಾಳಿಗೆ ಒಳಗಾದವು. ಅವಳೂ ಮತ್ತವಳ ಕುಟುಂಬ ಹಳ್ಳಿ ಬಿಟ್ಟು ಓಡತೊಡಗಿದರು. ಇಡೀ ಕುಟುಂಬವೇ ಜೀವ ರಕ್ಷಣೆಗಾಗಿ ಓಡುವಾಗ ಜೊತೆಗೆ - ದಿನ ತುಂಬಿದ ಗರ್ಭಿಣಿ ಶಮೀಮ್ ಕೂಡ ಜೊತೆಗೆ ಇದ್ದಳು. 5-6 ಕಿ.ಮೀ ದೂರದಲ್ಲಿರುವ ಚುಂಡಗೀ ಹಳ್ಳಿಯನ್ನು ತಲುಪಿ ಸ್ಥಳೀಯ ಶಾಸಕ - 'ಬಿಜಲ್ ದಾಮೋರ್' ಮನೆಯಲ್ಲಿ ಆಶ್ರಯ ಪಡೆದರು. ಅದೂ ಸುರಕ್ಷಿತ ಅಲ್ಲವೆಂಬ ಕಾರಣಕ್ಕೆ ಅಲ್ಲಿಂದ ಹೊರಡಬೇಕಾಯಿತು. ಮುಂದಿನ ಹಳ್ಳಿಯ ಮಸೀದಿಯಲ್ಲಿ ಸ್ವಲ್ಪ ಹೊತ್ತು ಇದ್ದರು. ಅಲ್ಲಿ ಶಮೀಮ್ ಹೆರಿಗೆಯಾಯ್ತು (ಸ್ಥಳೀಯ ದಾದಿಯ ಸಹಾಯದಿಂದ) ಆದರೆ ಮಸೀದಿಗಳು ದಂಗೆಯ ನೇರ ಗುರಿಗಳೆಂಬ ಕಾರಣಕ್ಕೆ ಅಲ್ಲಿಂದಲೂ ಹೊರಡ ಬೇಕಾಯಿತು. ಅಲ್ಲಿ ಶಮೀಮ್ ಹೆರಿಗೆಯಾಯ್ತು. ಆಗ ತಾನೇ ಹೆರಿಗೆಯಾದ ಶಮೀಮ್. ಹೆಜ್ಜೆ ಕೀಳಲಾರದೇ ನಡೆಯ ಬೇಕಾಯಿತು. ಪ್ರಪಂಚಕ್ಕೆ ಕಣ್ಣೇ ಬಿಡದ ಎಳೆ ಕೂಸು ಆಕೆಯ ಸೋದರಿಯ ಕೈಯಲ್ಲಿ ; ಶಮೀಮ್‌ಳ ಬಟ್ಟೆ, ಬರೆಗಳೆಲ್ಲ ತೊಯ್ದಿದ್ದವು. ಅವಳ ಈ ಸ್ಥಿತಿಗೆ ಮರುಗಿ - ತಾವೇ ಸ್ವತಃ ಬಡವರಾದರೂ ನೆರವಿಗೆ ಬಂದವರು - 'ಕುದ್ರಾ' ಎಂಬ ಹಳ್ಳಿಯ ಬಡ ಆದಿವಾಸಿಗಳು. ತಮ್ಮಲ್ಲಿದ್ದುದರಲ್ಲಿಯೇ ಸ್ವಚ್ಛ ಬಟ್ಟೆಯನ್ನು ಕೊಟ್ಟು ಕೆಲಕಾಲ ವಿಶ್ರಾಂತಿ ಪಡೆಯಲು ಹೇಳಿದರಾದರೂ ಅಲ್ಲಿಯೂ ತೊಂದರೆಯನ್ನು ನಿರೀಕ್ಷಿಸಿ ಹೊರಡಬೇಕಾಯಿತು. ಅಲ್ಲಿಂದ ತಲುಪಿದ್ದು ಚಪ್ಪಡ್‌ವಾಡಕ್ಕೆ ಅಲ್ಲಿಂದ ಮುಂದೆ ಪನಿವೇಟ್ ಹಳ್ಳಿಗೆ ನಡೆಯುತ್ತಿದ್ದಾಗ, ಟ್ರಕ್ ಒಂದರಲ್ಲಿ ಜನ ತುಂಬಿ ಬಂದರು. ಅದರಲ್ಲಿ ನಮ್ಮೂರಿನವರಲ್ಲದೇ ಹೊರಗಿನವರೂ ಇದ್ದರು. ಆದರೆ ಅವರು ಬಂದಿದ್ದು ನಮ್ಮನ್ನು ರಕ್ಷಿಸಲೆಂದಲ್ಲ. ನಮ್ಮನ್ನು ತಡೆದ ಅವರು ನಡೆಸಿದ್ದು.... ನನ್ನ ಕೈಯಿಂದ ನನ್ನ ಕೂಸನ್ನು ಎಳೆದು ದೂರಕ್ಕ ಬಿಸಾಡಿದರು. ಎಲ್ಲ ಮಹಿಳೆಯರ ಮೇಲೆ ಅತ್ಯಾಚಾರ ಮಾಡಿದರು. 3 ಜನ ನನ್ನ ಮೇಲೆ ಅತ್ಯಾಚಾರ ಎಸಗಿದರು. ನನ್ನ ಕೂಗು ಅವರನ್ನೇನೂ ವಿಚಲಿತಗೊಳಿಸಲಿಲ್ಲ. ನಂತರ ಹೊಡೆದು, ಬಡಿದು ಸತ್ತೆನೆಂದು ತಿಳಿದು ಬಿಟ್ಟು ಹೋದರು. ನಾನು ಕಣ್ಣು ಬಿಟ್ಟಾಗ - ಸುತ್ತೆಲ್ಲ ನನ್ನವರ (ಶಮೀಮ್‌ಳ ಹಸುಗೂಸು) ಸೇರಿದಂತೆ ಹೆಣಗಳು ಬಿದ್ದಿದ್ದವು. ಅವರ ಮೈಮೇಲೆಲ್ಲ ಕಲ್ಲುಗಳು ಬಿದ್ದಿದ್ದವು. ಇಡೀ ರಾತ್ರಿಯನ್ನು ಅದೇ ಸ್ಥಿತಿಯಲ್ಲಿ ಕಳೆದ 'ಬಿ' ಮಾರನೇ ದಿನ ಲಿಮ್ ಖೇಡಾ ಪೋಲೀಸ್ ಸ್ಟೇಷನ್‌ನಿಂದ ಬಂದ ಪೋಲೀಸರ ಸಹಾಯದಿಂದ ಆಸ್ಪತ್ರೆಗೆ ಸೇರಿಸಲ್ಪಟ್ಟಳು. ಅಲ್ಲಿಂದ ನಿರಾಶ್ರಿತರ ಶಿಬಿರಕ್ಕೆ (ತಂಡ ಭೇಟಿ ನೀಡಿದ ಆಸ್ಪತ್ರೆಯ ವೈದ್ಯಾಧಿಕಾರಿಗಳು ಅವಳ ಮೇಲೆ ಅತ್ಯಾಚಾರ ನಡೆದುದ್ದನ್ನು ದೃಢಪಡಿಸಿದರು) ತನ್ನ ಮೇಲೆ ಅತ್ಯಾಚಾರ ನಡೆಸಿದವರನ್ನು, ಎಲ್ಲರನ್ನೂ ಕೊಂದವರನ್ನು ಆಕೆ ಹೆಸರಿಸುತ್ತಾಳೆ.

ಕೆ.ಎಸ್.ವಿಮಲಾ

ಮಕ್‌ಸೂದಾ ಬೀಬಿ : ಈಕೆಯನ್ನು ಮತ್ತು ಅವಳ ಮಕ್ಕಳನ್ನೂ ಊರಿನ ಇತರ ನಾಲ್ಕು ಸ್ತ್ರೀಯರನ್ನು ಊರಿನ ಸರ ಪಂಚರಾದ ಜೈಸಿಂಗ್ ದೋನಾಘೋರಿ ಯುವರ ಬಾವಿಗೆ ಎಸೆಯಲಾಗಿತ್ತು. ಮಾರನೇ ದಿನ ಪೋಲೀಸರು ಅವಳನ್ನು ರಕ್ಷಿಸಿದರು. ಉಳಿದವರೆಲ್ಲಾ ಸತ್ತಿದ್ದರು. ನಾನೂ ಸಾಯಬೇಕಿತ್ತು........ ಎನ್ನುತ್ತಾಳೆ ಮಕ್‌ಸೂದಾ

ಫಾತೀಮಾ ಬೀಬಿ ಶೇಕ್ ಮತ್ತು ಫಾತಿಮಾ ಬೀಬಿ - ಅವರೆದುರೇ ಇಡೀ ಕುಟುಂಬದವರನ್ನು ಬಡಿದು ಸಾಯಿಸುತ್ತಿದ್ದಾಗ - ತಡೆಯಲು ಹೋದಾಗ ಆಕೆಯ ಕೈಯನ್ನು ಕತ್ತಿಯಿಂದ



ವೋರಾ ಹಳ್ಳಿಗರು ಹೇಳುವಂತೆ ದಂಗೆಕೋರರು ಅವರ ಮನೆಗಳನ್ನು ನಾಶಮಾಡ... ಸ್ಫೋಟಕಗಳನ್ನು ಬಳಸಿದ್ದರು. ಬಹ... ಸಂದರ್ಭಗಳಲ್ಲಿ ಪೋಲೀಸರು ಅವರಿ... ಸಹಾಯಕರಾಗಿದ್ದರು.

ಪಂಡರವ ಹಳ್ಳಿಯ ಕಥೆಯಂತೂ ಅತ್ಯಂ... ಘೋರ. ಒಂದೇ ಹಳ್ಳಿಯಲ್ಲಿ ನೂರಕ್ಕೂ ಹೆ... ಜನರನ್ನು ಸಾಯಿಸಿದ್ದಾರೆ. ಸರ್ಕಾ... ಅಂಕೆ-ಸಂಖ್ಯೆ-21 ಮಾತ್ರ. ಊರಿನ ಸರಪಂ... ನೇತೃತ್ವದಲ್ಲಿ ಟ್ರಕ್ ತುಂಬ ಆದಿವಾಸಿಗಳ... ತುಂಬಿಸಿ ತಂದು ಮುಸ್ಲಿಂ ಮನೆಗಳನ್ನು ಸುತ್ತುವರಿ... ದಾಳಿ ಮಾಡಲಾಯಿತು. ಮನೆಗಳ... ಸುಡಲಾಯಿತು 65 ವರ್ಷದ ಸಖಿಯಾ ಬೀ... ಸಯೀದ್ ಈ ಘಟನೆಗಳಿಗೆ ಪ್ರತ್ಯಕ್ಷ ಸಾಕ್ಷಿ. ಆಕೆ... ಮೇಲೆ ಕ್ರೂರ ದಾಳಿ ನಡೆಸಿ ಕತ್ತಿಗಳಿಂದ ಆಕೆ... ಎದೆ, ಕತ್ತು, ಕೈಗಳಿಗೆ ಘಾಸಿಗೊಳಿಸಲಾಗಿದೆ. (ಆ... ಆಸ್ಪತ್ರೆಯಲ್ಲಿ ಈ ಎಲ್ಲವನ್ನೂ ಮಹಿಳಾ ಸಂಘಟ... ಮತ್ತು ಸಿಪಿಐ(ಎಂ) ನಿಯೋಗಕ್ಕೆ ತಿಳಿಸಿ... ವಿಷಯಗಳಿವು.)


ಗುಲ್ಬರ್ಗಾ ಸೊಸೈಟಿಯಲ್ಲಿನ ಕಥೆ ಇನ್ನೂ ದಾರುಣ.

ಎಳೆಯ ಬಾಲಕ - 14 ವರ್ಷದ ಜಾವೇ... ಹುಸೈನ್‌ನ ಮಾತುಗಳಲ್ಲಿಯೇ ಹೇಳುವುದಾದ... (ಫೆಬ್ರುವರಿ 28 - 2002) ನಾವು ಆಗ ತಾ... ನಮ್ಮ ಬೆಳಗಿನ ಟೀ ಮುಗಿಸಿ ಕುಳಿತಿದ್ದೆವು. ಬೆ... (9.30) ಹೊರಗಡೆ ಗುಂಪೊಂದರ ಗಲಾ... ಕೇಳಿಸಿತು. ಅವರು ಕಲ್ಲು ಎಸೆಯುತ್ತಿದ್ದರು. ಶ್ರೀರಾಮ್ ಎಂದು ಕೂಗುತ್ತ ಕತ್ತಿಗಳ... ಝಳಪಿಸುತ್ತಿದ್ದರು. ಮುಸ್ಲೀಮರನ್ನು ನಾ... ಮಾಡುತ್ತೇವೆಂದು ಕೂಗುತ್ತಿದ್ದರು. ನಾ... ತಪ್ಪಿಸಿಕೊಂಡು ಓಡಿ ಹೋಗ... ಪ್ರಯತ್ನಿಸುವಾಗಲೇ ಅವರು ನಮ್ಮ... ಸುತ್ತುವರೆದರು. ಅವ... ಮನೆಗಳಿಗೆ ಬೆಂಕಿ ಹಾಕಿದ... ನಾನು ದಿನ ತುಂಬಿ... ಗರ್ಭಿಣಿಯಾದ ಕಸಿನ್(ಸೋದರ ಸಂಬಂ... ಕೌಸರ್ ಬೀಬಿಯ ಜೊತೆ ನಿಂತಿದ್ದೆ. ಅ... ಎಳೆದುಕೊಂಡು ಹೋದ ಅವರು ಚಾಕುವಿನಿ... ಅವಳ ಹೊಟ್ಟೆಯನ್ನು ಬಗೆದರು. ಒಳಗಿ... ಮಗುವನ್ನು ಉರಿಯುತ್ತಿರುವ ಬೆಂಕಿಯ... ಎಸೆದರು. ನಂತರ ಒಬ್ಬರ ನಂತರ ಒಬ್ಬರ... ಕುಟುಂಬದ ಎಲ್ಲರನ್ನೂ ಬೆಂಕಿಗೆ ಎಸೆಯಲಾಯಿ... ನನ್ನ ತಲೆಯ ಮೇಲೆ ಯಾರೋ ಹೊಡೆದರು...

ನನಗೆ ಎಚ್ಚರವಾದಾಗ ನನ್ನ ಸ... ಸಿಪಾಯಿಗಳಿದ್ದರು. ಅಲ್ಲಿಂದ ನಡೆದು 10 ಕಿ.ಮೀ... ದೂರದ ನನ್ನ ಯಜಮಾನರ (4ನೇ ತರಗ... ಶಾಲೆ ಬಿಟ್ಟ ಜಾವೇದ್ ಬದುಕಿಗಾಗಿ ಕೈಪ... ಹೊಲಿಯುವ ಕೆಲಸ ಮಾಡುತ್ತಿದ್ದಾನೆ) ಮ... ತಲುಪಿದೆ. ದಾರಿಯುದ್ದಕ್ಕೂ ಯಾರೋ ಬ... ನನ್ನನ್ನು ಹೊಡೆದು ಕೊಲ್ಲುವರೆಂಬ ಭ... ಕಾಡುತ್ತಲೇ ಇತ್ತು. ನನ್ನನ್ನು ಯಜಮಾನ... ಆಸ್ಪತ್ರೆಗೆ ಒಯ್ದರು. ನನ್ನ ಮನಸ್ಸು ಸತ್ತು ಹೋಗಿ... ನನಗೆ ನನ್ನ ತಾಯಿಯ ನೆನಪಾಗುತ್ತದೆ. ಅ... ನನಗೆ ಯಾವಾಗಲೂ ಹೇಳುತ್ತಿದ್ದ ಮಾತು... ನೆನಪಾಗುತ್ತವೆ. ನಮಗೆ ಹೀಗೆ ಮಾಡಿದ ಜನಗ... ನನ್ನದೊಂದು ಪ್ರಶ್ನೆ. ನಾವು ಮಾಡಿದ ಯಾವ ತ... ನಮಗೆ ಹೀಗೆ ಮಾಡಿದರು. ಹಿಂದೂಗಳ... ಕೆಟ್ಟವರಲ್ಲ. ನನಗೆ 4-5 ಜನ ಹಿಂದೂ ಗೆಳೆ...

ದ್ದಾರೆ. ಅವರೆಲ್ಲಾ ಒಳ್ಳೆಯವರು. ಹೊರಗಿನಿಂದ ಬಂದವರ್ಯಾರೋ ಹೀಗೆ ಮಾಡಿದ್ದಾರೆ. **ವಾಜಪೇಯಿ ಬಂದಾಗ ನನ್ನನ್ನು ಮಾತನಾಡಿಸಿದರು. ನನ್ನ ಸಮಸ್ಯೆಗಳನ್ನು ಕೇಳಿದರು. ನನಗೆ ಒಂದೇ ಉತ್ತರ ಬೇಕು ಯಾಕೆ, ಇನ್ನೂ ಕೊಲೆ, ದಂಗೆಗಳು ನಿಂತಿಲ್ಲ. ಎಂದಿಗೆ ಇದಕ್ಕೆಲ್ಲ ಕೊನೆ? ಇವೆಲ್ಲ ಒಂದು ರೀತಿಯ ಕಥೆಗಳಾದರೆ ಇನ್ನು ಸರ್ಕಾರೀ ಯಂತ್ರ ಈ ಸಂದರ್ಭದಲ್ಲಿ ಏನು ಮಾಡುತ್ತಿತ್ತು. ಎಂಬ ಪ್ರಶ್ನೆಗೆ ನಮಗೆ ಸಿಗುವ ಉತ್ತರಗಳು.....**

ನರೋಡಾದ ಜವಹರ್ ನಗರದ ಪುಟ್ಟ ಬಾಲಕ - ಮಹಮ್ಮದ್ ಯಾಸೀಮ್ - 8 ವರ್ಷ. ಉರಿಯುವ ಬೆಂಕಿಯಿಂದ ತಂದೆ, ತಾಯಿ ಮತ್ತು ಇತರ 6 ಸದಸ್ಯರು ದಹಿಸಿ ಹೋಗಿದ್ದನ್ನು ಕಣ್ಣಾರೆ ಕಂಡು, ಸುಟ್ಟ ಗಾಯಗಳೊಂದಿಗೆ ತಪ್ಪಿಸಿಕೊಂಡು ಈಗ ಸೂರತ್ ನಗರದಲ್ಲಿರುವ ತನ್ನ ಸೋದರಿಯೊಂದಿಗೆ ಬದುಕುತ್ತಿದ್ದಾನೆ. ಅವನ ಅನುಭವ: ನನ್ನ ತಂದೆ ಮಾಳಿಗೆಯಲ್ಲಿ ನಿಂತು ನೋಡುತ್ತಿದ್ದರು. ದೊಡ್ಡದೊಂದು ಗುಂಪು ಬರುತ್ತಿದೆಯೆಂದು ಅವರು ತಿಳಿಸಿದರು. ಭಯಭೀತರಾಗಿ ಒಬ್ಬರ ಕೈ ಒಬ್ಬರು ಹಿಡಿದುಕೊಂಡು ಹಾಸಿಗೆಯ ಮೇಲೆ ಕುಳಿತಿದ್ದೆವು. ಅವರನ್ನು ಕೊಲ್ಲಿರಿ ಕೊಚ್ಚಿರಿ ಎಂಬ ಕೂಗು ಕೇಳುತ್ತಿತ್ತು. ಅವರ ಜೊತೆ ಪೋಲೀಸರಿದ್ದರು. ನಾವು ನಮ್ಮ ಹಿಂದೂ ಸ್ನೇಹಿತರ ಮನೆಗೆ ಹೋಗಿ- ಆಶ್ರಯ ಪಡೆಯುವುದೆಂದು ಯೋಚಿಸಿದೆವು. ಪ್ರತಿದಿನ ನಾವು ಗಂಗೋತ್ರಿ ನಗರದಲ್ಲಿರುವ ಅವರ ಮನೆಯಲ್ಲಿ ಟಿ.ವಿ ನೋಡುತ್ತಿದ್ದೆವು. ಮಕ್ಕಳೊಂದಿಗೆ ಆಡುತ್ತಿದ್ದೆವು. ಆದರೆ ಅಲ್ಲಿ ಹೋದಾಗ ನಾವು ಕಂಡಿದ್ದೇನು. ದಂಗೆಕೋರ ಗುಂಪುಗಳಲ್ಲಿ ಆ ಮನೆಯ ಜನರೂ ಸೇರಿದ್ದರು. ನಾವು ಒಟ್ಟಿಗೇ ಓಡತೊಡಗಿದೆವಾದರೂ - ಗುಂಪಿನಲ್ಲಿ ಬೇರ್ಪಡಿಸಲ್ಪಟ್ಟೆವು. ನನ್ನ ತಾಯಿಯನ್ನು ಎಳೆದೊಯ್ದು ಬೆಂಕಿಯಲ್ಲಿ ಹಾಕಿದ್ದನ್ನು ನಾನು ಕಣ್ಣಾರೆ ಕಂಡೆ. ನನಗೂ ಅವರು ಬೆಂಕಿ ಹಾಕಿದರು. ನಾನು ಓಡಿ ಹತ್ತಿರವಿದ್ದ ನೀರಿನ ಟ್ಯಾಂಕಿಗೆ ಹಾರಿದೆ. ನನ್ನ ಹಾಗೆ ಇನ್ನೂ ಮೂರು ಮಕ್ಕಳು ಅಲ್ಲಿದ್ದರು. ಗುಂಪು ಚದುರಿದ ಮೇಲೆ ನಾವು ಮೇಲೆ ಬಂದು ಒಂದು ಮನೆಯಲ್ಲಿ ಅಡಗಿದೆವು. ಹೊರಗಡೆಯಿಂದ ಯಾರೋ ಅಗಳಿ ಹಾಕಿದ ಶಬ್ದ ಬೆಂಕಿ ಹಾಕುತ್ತಿರುವ ಶಬ್ದ ಕೇಳುತ್ತಿತ್ತು. ನಾವು ಉರಿದು ಹೋಗುತ್ತೇವೆಂದುಕೊಂಡೆವು. ನನ್ನ ತಂದೆ ನನ್ನನ್ನು ಕೂಗುತ್ತಿದ್ದರು. ಅವರೇ ಬಾಗಿಲು ತೆಗೆದು ನಮ್ಮನ್ನು ಹೊರಗೆ ಬಿಡಿಸಿದರು. ನಾನು



ನಿದ್ದೆ ಮಾಡಲಾರೆ - ತಿನ್ನಲಾರೆ. ನನ್ನ ಅಮ್ಮ ಅಕ್ಕಂದಿರು ನೆನಪಾಗುತ್ತಾರೆ. ನಾನು ಕಣ್ಣು ಮುಚ್ಚಿದರೆ - ಆ ಮನೆಯ ಜನ ಬಂದು ನನ್ನನ್ನು ಸಾಯಿಸುತ್ತಾರೆ. ನಾನು ಅವರನ್ನು ನೋಡಿದ್ದೇನೆಂದು ಅವರಿಗೆ ಗೊತ್ತು. ನಾನು ಹಿಂತಿರುಗಿ ಹೋಗಿ ಅವರನ್ನು ಸುಟ್ಟು ಹಾಕಬೇಕು. ಕಡಿದು ಹಾಕಬೇಕು. ನಾನು ಗಟ್ಟಿಯಾಗಿ ಬೆಳೆದು ಅವರ ಮೇಲೆ ಸೇಡು ತೀರಿಸಿಕೊಳ್ಳಬೇಕು. ನಾನಿನ್ನು ಹಿಂದೂಗಳ ಜೊತೆ ಬದುಕಲಾರೆ.

ಈ ಸೇಡಿನ ಬೀಜ ಬಿತ್ತಿದ್ದು ಯಾರು?

ಮಹಮ್ಮದ್ ಆಸೀಫ್-14 ವರ್ಷ : ನಾನು ಮಧ್ಯಾಹ್ನ 2.00 ರ ಸುಮಾರಿಗೆ ಮಸೀದಿಯಲ್ಲಿ ಕುರಾನ್ ಓದುತ್ತಿದ್ದೆ. ಗುಂಪು ಮಸೀದಿಯ ಮೇಲೆ ಪೆಟ್ರೋಲ್ ಬಾಂಬನ್ನು ಎಸೆಯಿತು. ಮಹಾಕಾಳಿ ಮಂದಿರದ ಬಳಿ ದೊಡ್ಡ ಗುಂಪೊಂದು ಜಮಾಯಿಸಿತ್ತು. ಆ ಗುಂಪನ್ನು ಚದುರಿಸುವ ಬದಲು ಪೋಲೀಸರು ನಮ್ಮತ್ತ ಗುಂಡು ಹಾರಿಸುತಿದರು. ಮಸೀದಿ ಮತ್ತು ಕುರಾನ್ ಶರೀಫ್ ಈ ಎರಡನ್ನು ಸುಟ್ಟರು ನಾನು ರಕ್ಷಣೆಗಾಗಿ ನನ್ನ ಮನೆಯತ್ತ ಓಡಿದೆ. ಆದರೆ ಅದಾಗಲೇ ಸುಟ್ಟು ಬೂದಿಯಾಗಿತ್ತು. ರಾಜ್ಯದ ಮಂತ್ರಿ ಭರತ್ ಬಾರೋದ್- ಇದಕ್ಕೆಲ್ಲಾ ನೇತೃತ್ವ ಕೊಟ್ಟರೆಂದು ನಾನು ಭಾವಿಸುತ್ತೇನೆ. ಪ್ರತಿರಾತ್ರಿ ಅವರ ಮನೆಯಲ್ಲಿ ಈ ಜನಗಳ ಸಭೆ ನಡೆಯುತ್ತಿತ್ತು. ಅವರು ಪಟ್ರೋಲ್ ಮತ್ತು ಆಯುಧಗಳನ್ನು ಆ ಸಭೆಗಳಲ್ಲಿ ಹಿಂದೂಗಳಿಗೆ ವಿತರಿಸುತ್ತಿದ್ದರು.

ನಾವಿರುವ ಶಿಬಿರ ಕೂಡ ಸುರಕ್ಷಿತವಲ್ಲ. ಇಲ್ಲಿಯೂ ನಮ್ಮ ಮೇಲೆ ದಾಳಿಗಳಾಗುತ್ತಿವೆ. ಪೋಲೀಸರು ಬಂದು ಅಶ್ರುವಾಯು ಶೆಲ್ ಸಿಡಿಸುತ್ತಾರೆ. ಗುಂಡು ಹಾರಿಸುತ್ತಾರೆ. ನಿನ್ನೆ ಒಬ್ಬ ಮಹಿಳೆ ಶಿಬಿರದ ಬಳಿ ಹಾರಿದ ಗುಂಡಿನ ಶಬ್ದಕ್ಕೆ ಹೆದರಿ ಸತ್ತಳು. ನನ್ನ ಪ್ರಶ್ನೆ ಗೋಧ್ರಾ- ಅಪರಾಧಿ ಗಳು ನಾವೇ? ನಮ್ಮ ಮೇಲೇಕೆ ಈ ರೀತಿಯ ದೌರ್ಜನ್ಯ?

ಶಾಹೀದ್ ಖಾನ್-14 ವರ್ಷ

ಗುಲ್ಬರ್ಗಾ ಸೊಸೈಟಿ

ಕಾಂಗ್ರೆಸ್- ಸಂಸತ್ ಸದಸ್ಯ ಉಹ್ಸಾನ್- ಜೆಫ್ರಿಯವರ ಕಗ್ಗೊಲೆಯನ್ನು ಕಣ್ಣಾರೆ ಕಂಡ ಬಾಲಕ

ನಾವು ನಮ್ಮ ಮನೆಯ ಮುಂದೆ ಹಿಂದೂ ಸ್ನೇಹಿತರ ಜೊತೆ ಕ್ರಿಕೆಟ್ ಆಡುತ್ತಿದ್ದೆವು. ಪೋಲೀಸರು ಬಂದು ಹಿಂದೂ ಬಾಲಕರನ್ನು ಮನೆಗೆ ಹೋಗಲು ಹೇಳಿದರು. ಇಲ್ಲಿ ದುರ್ಘಟನೆ ನಡೆಯಲಿದೆ ಎಂದು ಅವರಿಗೆ ಎಚ್ಚರಿಕೆಯ ಮಾತು ಹೇಳುತ್ತಿದ್ದರು. ಬೆಳಗಿನ 9ರ ಹೊತ್ತಿಗೆ 15-20,000 ಜನ ಬಂದು ಕಟ್ಟಡ ಸುತ್ತುವರೆದರು ಕಲ್ಲು ತೂರತೊಡಗಿದರು. ಬೆಂಕಿ ಹಾಕತೊಡಗಿದರು. ಜನ ದಿಕ್ಕಾಪಾಲಾಗಿ ಓಡತೊಡಗಿದರು. ನಾನು ಮಾಳಿಗೆಯ ಮೇಲೆ ಹೋಗಿ ಅಡಗಿ ನೋಡುತ್ತಿದ್ದೆ. ಜೆಫ್ರಿಯವರು ದಂಗೆಕೋರರೊಂದಿಗೆ ಕೈ ಜೋಡಿಸಿ ಹೇಳುತ್ತಿದ್ದರು. ನನ್ನನ್ನು ಬೇಕಾದರೆ ಕೊಲ್ಲಿ ಆದರೆ ಈ ಜನರನ್ನು ಬಿಟ್ಟು ಬಿಡಿ. ಆ ಗುಂಪು ಅವರನ್ನು ಜೈ ಶ್ರೀರಾಂ ಹೇಳಲು ಒತ್ತಾಯಿಸುತ್ತಿತ್ತು. ಕೊನೆಗೆ ಅವರ ಕತ್ತಿಗೆ ಉರಿಯುತ್ತಿರುವ ಟೈರ್ ನೇತುಹಾಕಿದರು. ಕತ್ತಿಯಿಂದ ಹೊಟ್ಟೆಗೆ ತಿವಿದರು. ನಾನದನ್ನು ನೋಡಿದೆ. ಆದರೆ ನಾನದನ್ನು ತಡೆಯಲಾರದಾದ. ನಾನು ಹಿಂದೂಗಳನ್ನು ದ್ವೇಷಿಸುತ್ತೇನೆ. ಅವರಲ್ಲಿ ನನ್ನ ಅಕ್ಕಪಕ್ಕದ ಮನೆಯವರಿದ್ದರು. ನಾನವರನ್ನು ಸಾಯಿಸಬೇಕು. **(ಈ ಮಗು ಮುಂದೆನಾಗಬಹುದು - ಯಾರು ಜವಾಬ್ದಾರರು?)**

ಇಮ್ರಾನ್ ಖಾನ್- 11 ವರ್ಷ: ನಮ್ಮ ಮೇಲೆ ಧಾಳಿ ನಡೆದಾಗ ನಾನು ಊಟ ಮಾಡುತ್ತಿದ್ದೆ. ಕಲ್ಲು, ಕತ್ತಿ, ಗುರಾಣಿ, ಚಾಕು, ಚೂರಿ ಹಿಡಿದ ಗುಂಪು ನುಗ್ಗಿತು. ನಾವು ಪೈಲ್ವಾನ್ ಇಷರಫ್ ಮನೆ ಸುರಕ್ಷಿತವೆಂದು ಭಾವಿಸಿ ಅಲ್ಲಿಗೆ ಓಡಿದೆವು. ಆದರೆ ನೀಲಿ ಸಮವಸ್ತ್ರಧಾರಿ ರ್‍ಯಾಪಿಡ್ ಆಕ್ಷನ್ ಫೋರ್ಸ್'ನ ಜನ ಬಂದೂಕು, ದೊಣ್ಣೆ ಹಿಡಿದು ಒಳನುಗ್ಗಿ ಬಂದರು. ನನ್ನ ತಂದೆ ತಾಯಿಯರನ್ನು ಹಿಡಿದು ಬಡಿದರು. ನಾನವರನ್ನು ನಮ್ಮನ್ನೇಕೆ ಹೊಡೆಯುತ್ತಿದ್ದೀರೆಂದು ಕೇಳಿದೆ. ಆರ್.ಎ.ಎಫ್ ಜನ ನನ್ನ ಎದೆಯ ಮೇಲೆ ಗುದ್ದಿದರು. ನಮ್ಮ ಪ್ರದೇಶದಲ್ಲಿ ಹಿಂದೂಗಳು ಬಹಳ ಇದ್ದರು. ನಾವು ಒಟ್ಟಿಗೆ ಬದುಕುತ್ತಿದ್ದೆವು. ಕ್ರಿಕೆಟ್ ಆಡುತ್ತಿದ್ದೆವು. ಈಗ ಅವರಾರೂ ನನ್ನ ಸ್ನೇಹಿತರಾಗಿ ಉಳಿದಿಲ್ಲ.

ಇವು ಒಟ್ಟು ಗುಜರಾತ್ ಘಟನೆಗಳ ಕೆಲವು ತುಣುಕುಗಳಷ್ಟೇ. ಆದರೆ ಇದ್ದಕ್ಕೆಲ್ಲ ಯಾರನ್ನು ಹೊಣೆ ಮಾಡುವುದು. ನತದೃಷ್ಟ ಸಾಬರಮತಿ ಎಕ್ಸ್‌ಪ್ರೆಸ್‌ನ ಎಸ್-6 ಬೋಗಿ - ಅದಕ್ಕೆ ಬೆಂಕಿ ಹಾಕಿದ್ದು ಯಾರು? ಸರ್ಕಾರಕ್ಕೆ ನಿಜವಾಗಿ ತನಿಖೆಯಾಗುವುದು ಬೇಕೆ? ಹಾಗಾದರೆ- ಸುಟ್ಟ ಬೋಗಿಯ ಒಳಗೆ ಇದ್ದ- ತನಿಖೆಗೆ ಉತ್ತಮ ಸಾಕ್ಷಿಯಾಗಬಹುದಾಗಿದ್ದ ಅಡುಗೆ ಮತ್ತು ಸೀಮೆ ಎಣ್ಣೆ ಕ್ಯಾನ್‌ಗಳು, ದವಸ ತುಂಬಿದ್ದ ಚೀಲಗಳು ಇವನ್ನೆಲ್ಲ ಸಂರಕ್ಷಿಸಲು ಯಾಕೆ ಮುತುವರ್ಜಿ ವಹಿಸಿಲ್ಲ. ಈ ಪ್ರಶ್ನೆಗಳನ್ನು ಕೇಳುವಾಗ ಪ್ರತ್ಯಕ್ಷದರ್ಶಿಗಳೆದುರು ಕಥೆಯ ಇನ್ನೊಂದು ಮಗ್ಗುಲು ಬಿಚಿಕೊಳುತದೆ.



ಇನ್ನೆಲ್ಲಿ ಮಾನವೀಯತೆ?

ನರೇಂದ್ರ ಮೋದಿ ಹೇಳಿದಂತೆ ಗೋಧ್ರಾ ಘಟನೆಗೆ ಪ್ರತೀಕಾರವಾಗಿ ಈ ಎಲ್ಲ ಘಟನೆ ನಡೆದಿದೆ - ಆದರೆ ಗೋಧ್ರಾಗೆ ಮುಂಚೆ ನಡೆದ ಘಟನೆಗಳು ಅದ್ವಾನಿಯವರ ರಥಯಾತ್ರೆ - 92 ಬಾಬ್ರಿ ಮಸೀದಿ ಧ್ವಂಸ, 93ರಲ್ಲಿ ದೇಶದಾದ್ಯಂತ ನಡೆಸಿದ ಕೋಮು ಗಲಭೆಗಳು. ಕಳೆದ ವರ್ಷದ ಕುಂಭ ಮೇಳದ ಸಂದರ್ಭದಲ್ಲಿ ಸಂಘ ಪರಿವಾರ-2002 ಮಾರ್ಚ್ 11ನ್ನು ರಾಮ ದೇವಾಲಯ ನಿರ್ಮಿಸುವ ಶಪಥ ತೊಟ್ಟಿದ್ದು ನಂತರ ಅಯೋಧ್ಯೆಯ ವಿವಾದಿತ ಪ್ರದೇಶದಲ್ಲಿ ಸುಪ್ರಿಂ ಕೋರ್ಟ್ ಆದೇಶ ಧಿಕ್ಕರಿಸಿ ವಿ.ಎಚ್.ಪಿ ಕಾರ್ಯಕರ್ತರು ಕಾನೂನು ಬಾಹಿರವಾಗಿ ಪ್ರವೇಶಿಸಿದ್ದು ಅವಕಾಶ ಸಿಕ್ಕಾಗಲೆಲ್ಲ ಉಮಾಭಾರತಿ, ಅಶೋಕ ಸಿಂಘಾಲ್‌ರಂತವರು ಜನರನ್ನು ಉದ್ರೇಕಿಸುವ ಮಾತುಗಳನ್ನೇ ಆಡುತ್ತ ಬಂದಿದ್ದು ಕಾರಣಗಳಾಗಲಾರವೇ?

ಇನ್ನು ಫೆ.27-2002 ರಂದು ನಡೆದ ಘಟನೆಗೆ ಸ್ವಲ್ಪ ಮುಂಚೆ ನಡೆದ ಘಟನೆಗಳು ಬಿಚ್ಚಿಡುವ ಸುರುಳಿಗಳೇ ಬೇರೆ.

ಘಟನೆ ನಡೆದ ಕೆಲವೇ ದಿನಗಳಲ್ಲಿಯೇ ಅಲ್ಲಿಗೆ ಭೇಟಿ ನೀಡಿದ ಸದಸ್ಯರಿಗೆ ಅಲ್ಲಿನ ಅಧಿಕಾರಿಗಳೇ ತಿಳಿಸಿದ ಪ್ರಕಾರ - ರೈಲ್ವೆ ನಿಲ್ದಾಣದಲ್ಲಿದ್ದ ಮುಸ್ಲಿಂ ಅಂಗಡಿಯೊಂದರಲ್ಲಿ - "ಕರಸೇವಕ" ರೆನಿಸಿಕೊಂಡ ಸಂಘಪರಿವಾರದ ಜನ ನಡೆಸಿದ ದಾಂಧಲೆ, (ಹುಡುಗಿಯೊಬ್ಬಳನ್ನು ಹೊತ್ತೊಯ್ದರೆಂದು ವರದಿಯಾಗಿರುವ ಘಟನೆಗಳು) ಎಂದು ಹೇಳಲಾಗುತ್ತಿದೆಯಾದರೂ - ಅಲ್ಲಿನ ಅಧಿಕಾರಿಗಳೇ ಹೇಳುವಂತೆ ಆ ರೈಲಿನಲ್ಲಿ ಕರಸೇವಕರು ಪ್ರಯಾಣಿಸುತ್ತಿದ್ದರೆಂಬ ಸುದ್ದಿ ಇದ್ದ ಕಾರಣದಿಂದ ಸ್ವತಃ ತಾನೇ ಮುಂದಿನ ಜಂಕ್ಷನ್‌ವರೆಗೆ ರೈಲಿನಲ್ಲಿ ಹೋಗಿ ಬಂದದ್ದಾಗಿ ತಿಳಿಸಿದ್ದಾರೆ. ಅವರ ಪ್ರಕಾರ ಸಾಮಾನ್ಯವಾಗಿ ಇಂತಹ ರ್‍ಯಾಲಿಗಳಲ್ಲಿ ಬರುವ ಜನ ಸ್ಟೇಷನ್‌ಗಳಲ್ಲಿ ಟೀ ಕುಡಿದು ಹಣ ಸಂದಾಯ ಮಾಡದೇ ಮುಂತಾಗಿ ಕಿಡಿಗೇಡಿತನ ಮಾಡುವ ಸಂಭವಗಳಿರುವುದರಿಂದ ಆರ್.ಪಿ.ಎಫ್‌ಗಳನ್ನು ಸಾಮಾನ್ಯವಾಗಿ ಸೇವೆಗೆ ಹಚ್ಚಲಾಗುತ್ತದೆ. ಆದರೆ ಈ ಸಂದರ್ಭದಲ್ಲಿ ಅಂತಹ ವರದಿಗಳಿಲ್ಲ ಇದೊಂದು - ನಿಜವಾದ ಅಚ್ಚರಿ, ಗೊಂದಲಕಾರಿ - ಅಷ್ಟು ಬೇಗ ಸಾವಿರಾರು ಮಂದಿ ಬಂದಿದ್ದೆಲ್ಲಿಂದ, ರೈಲ್ವೇ ಅಧಿಕಾರಿಗಳೇ ದಿಗ್ಭ್ರಮೆ ವ್ಯಕ್ತಪಡಿಸುವಂತೆ ಅಷ್ಟು ಬೇಗ ಇಡೀ ಬೋಗಿ ಹತ್ತಿ ಉರಿದದ್ದು ಹೇಗೆ? ಇದೆಲ್ಲದರಿಂದ ಸಿಗುವ ಉತ್ತರ ಒಂದೇ - ಇದು ಸಂಘ ಪರಿವಾರ ಕೇಂದ್ರ ಮತ್ತು ರಾಜ್ಯದಲ್ಲಿರುವ ತಮ್ಮ ಸರ್ಕಾರಗಳ ನೆರವಿನಿಂದ ನಡೆಸ ಹೊರಟಿರುವ ಅಲ್ಪಸಂಖ್ಯಾತ ವಿರೋಧಿ ಕೋಮುದಂಗೆ ಮತ್ತಿತರ ಪ್ರಮುಖ ರೂವಾರಿ ನರೇಂದ್ರ ಮೋದಿ. ಇದಕ್ಕೆ ಸಿಗುವ ಪುರಾವೆಗಳೆಂದರೆ - ಇದುವರೆಗೂ ಸರ್ಕಾರ ತಾನಾಗಿಯೇ ಯಾವುದೇ ನಿರಾಶ್ರಿತ ಶಿಬಿರಗಳನ್ನು ನಡೆಸದಿರುವುದು, ಮತ್ತು ನರೇಂದ್ರ ಮೋದಿ ತನ್ನ ಸಂಪುಟದ ಸಚಿವರಿಗೆ - ಶಿಬಿರಗಳನ್ನು ಮುಚ್ಚಲು ಒಂದು ಶೀಘ್ರ ಉಪಾಯ ಹುಡುಕಲು ಆದೇಶ ನೀಡಿದ್ದಾರೆ. (ಸಂಪೂರ್ಣ ಶಾಂತಿ ನೆಲೆಸುವವರೆಗೆ ಶಿಬಿರವಿರುತ್ತದೆಂಬ ಪ್ರಧಾನಿಯವರ ಹೇಳಿಕೆಗೆ ವಿರುದ್ಧವಾಗಿ) ಮುಸ್ಲಿಂ ಸಮುದಾಯದ ಜನ ಅವರ ಪ್ರದೇಶಗಳಿಗೆ ವಾಪಸಾಗಲಾರದಂತಹ ಸ್ಥಿತಿ ಈಗಲೂ ಮುಂದುವರೆಯುತ್ತಿರುವಾಗ, ಮತ್ತು ಅಪ್ಪಿತಪ್ಪಿ ಆಚೆ ಬಂದು ತಮ್ಮ ಹಳ್ಳಿಗಳ, ಮನೆಯ ಕಡೆ ಹೋಗುವ ಧೈರ್ಯ ತೋರಿದವರ ಮೇಲೆ ಈಗಲೂ ಧಾಳಿ ನಡೆಯುತ್ತಿದೆ, ಕೊಲೆಯಾಗುತ್ತಿದೆ. ಇದನ್ನು ಕುರಿತು ಪೋಲೀಸ್ ಅಧಿಕಾರಿಗಳು ವ್ಯಕ್ತಪಡಿಸುವ ಅಭಿಪ್ರಾಯಗಳು - ಈಗ ವೈಷಮ್ಯ ಕಹಿ - ಎಷ್ಟು ಬೆಳೆದಿದೆಯೆಂದರೆ, ಒಂದು ಕೋಮಿನ ಜನರನ್ನು ನೋಡಲೂ ಮತ್ತೊಂದು ಕೋಮಿನ ಜನ ಬಯಸುವುದಿಲ್ಲ - ಬಹಳ ದಿನಗಳಿಂದ ಅದುಮಿಟ್ಟಿದ್ದ ದ್ವೇಷಗಳೆಲ್ಲ ಈಗ ಹೊರಗೆ ಬರುತ್ತಿವೆ, ಒಂದು ಕೋಮಿನ ಜನರ ಪ್ರಾಬಲ್ಯವಿರುವ ಕಡೆ ಇನ್ನೊಂದು ಕೋಮಿನ ಜನ ಕಾಲಿಡಲೂ ಬಯಸದ ಸ್ಥಿತಿ ಬಂದಿದೆ ಎನ್ನುತ್ತಾರೆ. ಇವೆಲ್ಲವೂ ಸಂಘ ಪರಿವಾರದ ಪರಿಭಾಷೆಗಳು. ಹೀಗೆ ಒಂದು ಕೋಮನ್ನು ಸಂಪೂರ್ಣ ಭಯಗ್ರಸ್ತರನ್ನಾಗಿಸಿ, ಅವರ ಆಸ್ತಿ, ಪಾಸ್ತಿಗಳನ್ನು ಕಸಿದುಕೊಂಡು ಅದರ ಮೇಲೆ ಸ್ವಾಮಿತ್ವ ಸ್ಥಾಪಿಸುವ " ಭೂಮಿ ಕಳ್ಳರ" ದಂಧೆಯೂ ಪ್ರಾರಂಭವಾಗಿದೆ.

ಇಡೀ ಹತ್ಯಾಕಾಂಡದ ಅತ್ಯಾಚಾರಗಳ ಸೂತ್ರಧಾರವಾಗಿ ಆರ್.ಎಸ್.ಎಸ್, ಕೆಲಸ ನಿರ್ವಹಿಸಿದ ನಂತರ ಈಗ ಅವು ತನ್ನ ಸಂಘದ ಮೌಲ್ಯಗಳಿಗೆ ವಿರುದ್ಧವಾದದ್ದೆನ್ನುತ್ತಿದೆ. ಗೋಧ್ರಾದಲ್ಲಿನ ರೈಲಿನ ಬಣ್ಣದ ಚಿತ್ರಗಳನ್ನು ಇಡೀ ದೇಶದಾದ್ಯಂತ ಹಂಚುತ್ತಿದ್ದು ಈ ಗಲಭೆಯುಕ್ತ ಪರಿಸ್ಥಿತಿ ಮುಂದುವರೆಯುತ್ತಲೇ ಇರುವ ಎಲ್ಲ ಅವಕಾಶಗಳನ್ನೂ ಸೃಷ್ಟಿಸುತ್ತಿದೆ. ಮತ್ತು ಇದು ಸಂಘಪರಿವಾರವಲ್ಲ. ಬದಲಿಗೆ ದೇಶದ ಜನ ಹೀಗೆ ಬಯಸುತ್ತಾರೆಂಬುದನ್ನು ನಿರೂಪಿಸ ಹೊರಟಿದ್ದಾರೆ.

ಈ ಇಡೀ ಹತ್ಯಾಕಾಂಡದ ವಿವಿಧ ಪದರುಗಳನ್ನು ಬಹಳ ಸ್ಪಷ್ಟವಾಗಿ ಜನತೆಯ ಮುಂದೆ ಮಾಧ್ಯಮ ಬಿಚ್ಚಿಡಲಾಗಿದೆಯಾದರೂ ಯಾರಿಗೂ ಪೂರ್ಣ ತಿಳಿಯದ ಹಲವು ಮಗ್ಗುಲುಗಳು ಇನ್ನೂ ಹೊರಬರಬೇಕಿದೆ.

ಈಗ ಮತ್ತೆ ಗಡಿ/ ಕಾಶ್ಮೀರದಲ್ಲಿ ಭಯೋತ್ಪಾದಕರ ಧಾಳಿಯ ಹಿನ್ನೆಲೆಯಲ್ಲಿ ಯುದ್ಧದ ಪ್ರಸ್ತಾಪ ಮತ್ತೆ ಆಗುತ್ತಿದೆ. ಭಯೋತ್ಪಾದಕರ ಧಾಳಿಯನ್ನು ಉಗ್ರವಾಗಿ ಖಂಡಿಸುತ್ತಲೇ ಒಂದು ಮತಾಂಧತೆ ಮತ್ತೊಂದು ಮತಾಂಧತೆಗೆ ಪೂರಕವಾಗಿಯೇ ಕೆಲಸ ನಿರ್ವಹಿಸುವುದಕ್ಕೆ ಇದೊಂದು ನಿದರ್ಶನವೆನ್ನಬಹುದು.

ಉತ್ತರ ಪ್ರದೇಶ : ಬಿಎಸ್‌ಪಿ-ಬಿಜೆಪಿ ಮೈತ್ರಿ ಒಂದು ಸಂದರ್ಭ ಸಾಧಕ ಕಸರತ್ತು

ಬಿಜೆಪಿಯನ್ನು ಮನುವಾದಿ ಎಂದು ಟೀಕಿಸುತ್ತಿದ್ದ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರನ್ನು ಒಟ್ಟಿಗೆ ಸೇರಿಸಿ ಅಧಿಕಾರ ಹಿಡಿಯುವ ಸೂತ್ರ ಪ್ರಚಾರಿಸುತ್ತಿದ್ದ ಬಹುಜನ ಸಮಾಜ ಪಕ್ಷವು ಎರಡನೇ ಬಾರಿಗೆ ಸಂಬಂಧ ಒಮ್ಮೆ ಮುರಿದುಕೊಂಡಿದ್ದ ಈ ಚುನಾವಣೆಯಲ್ಲಿ ಜನರಿಂದ ತಿರಸ್ಕೃತವಾದ, ಗುಜರಾತ್‌ನಲ್ಲಿ ಅಲ್ಪಸಂಖ್ಯಾತರ ಹತ್ಯಾಕಾಂಡದ ಬಿಜೆಪಿಯ ಜೊತೆಗೆ ಮತ್ತೊಮ್ಮೆ ಕೈಜೋಡಿಸಿದೆ. ಈ ಸಂದರ್ಭಸಾಧಕ ಅಪಾಯಕಾರಿ ಬೆಳವಣಿಗೆಯತ್ತ ಬೆಳಕು ಚೆಲ್ಲುವ ಲೇಖನವಿಲ್ಲಿ.

— ಕಶ್ಯಪ್

ಉತ್ತರ ಪ್ರದೇಶದಲ್ಲಿ ಬಿ.ಎಸ್.ಪಿ - ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದಿದೆ. ಮಾಯಾವತಿ ಯವರು ಮುಖ್ಯಮಂತ್ರಿಯಾಗಿ ಪ್ರತಿಜ್ಞೆ ಸ್ವೀಕರಿಸಿದ್ದಾರೆ. ಇದು ರಾಜ್ಯದಲ್ಲಿ ಅಧಿಕಾರ ವಹಿಸಿಕೊಳ್ಳುತ್ತಿರುವುದು ಈ ಎರಡು ಪಕ್ಷಗಳು ಮೂರನೇ ಬಾರಿಗೆ. ಹಿಂದೆಯೂ, ಇಂದೂ ಕೂಡಾ ಈ ಮೈತ್ರಿ ಯಾವುದೇ ನೀತಿ ಅಥವಾ ಕಾರ್ಯಕ್ರಮವನ್ನು ಆಧರಿಸಿಲ್ಲ. ಈ ಬಾರಿ ಒಂದು ಕನಿಷ್ಠ ಕಾರ್ಯಕ್ರಮದ ಆಧಾರದಲ್ಲಿ ಸರಕಾರ ರಚನೆಯಾಗುತ್ತದೆಂಬ ಊಹಾಪೋಹವಿತ್ತು. ಆದರೆ ಅಂತದ್ದೇನೂ ಆಗಿಲ್ಲ. ಈ ಎರಡೂ ಪಕ್ಷಗಳಿಗೂ ಸಮಾಜವಾದಿ ಪಕ್ಷವನ್ನು ಅಧಿಕಾರದಿಂದ ಹೊರಹಾಕಬೇಕಾಗಿತ್ತು ಮತ್ತು ತಾವು ಅಧಿಕಾರದ ಫಲವುಣ್ಣಬೇಕಾಗಿತ್ತು. ಅದಕ್ಕಾಗಿ ಕೊಡು ಕೊಳ್ಳುವ ವ್ಯವಹಾರ ನಡೆಸಿದವು.

ತಂತ್ರ-ಕುತಂತ್ರ

ಚುನಾವಣೆಗೆ ಹೋಗುವ ಮೊದಲು ಬಿಜೆಪಿ ಅಧಿಕಾರದಲ್ಲಿತ್ತು. ರಾಜನಾಥ್‌ಸಿಂಗ್ ಆ ಪಕ್ಷದ ಕೊನೆಯ ಮುಖ್ಯಮಂತ್ರಿಯಾಗಿದ್ದರು. ಏನೇ ಮಾಡಿದರೂ ಬಿಜೆಪಿಗೆ ಈ ಚುನಾವಣೆಗಳಲ್ಲಿ ಬಹುಮತ ಪಡೆದು ತನ್ನದೇ ಸರಕಾರ ರಚಿಸಲು ಸಾಧ್ಯವಿಲ್ಲ ಎಂಬ ಪೂರ್ಣ ಅರಿವು ಆತನಿಗಿತ್ತು. ಆದರೂ ಇತರ ಪಕ್ಷಗಳನ್ನು ಮುರಿದು ರಾಜಕೀಯ ಕಸರತ್ತನ್ನು ಚೆನ್ನಾಗಿ ಮಾಡಬಲ್ಲೆ ಎಂಬ ಆತ್ಮವಿಶ್ವಾಸ ಇದ್ದ ಆತ ಇತರ ಪಕ್ಷಗಳನ್ನು ಒಡೆದು ಮತ್ತೆ ಅಧಿಕಾರಕ್ಕೆ ಮರಳಲು ಸಾಲುವಷ್ಟಾದರೂ ಸ್ಥಾನಗಳನ್ನು ಪಡೆಯುವ ಗುರಿಯಿಟ್ಟುಕೊಂಡಿದ್ದರು.

ಅಧಿಕಾರ ಗಳಿಸುವಲ್ಲಿ ಇನ್ನೊಂದು ಪ್ರಮುಖ ಪ್ರತಿಸ್ಪರ್ಧಿಯಾದ ಸಮಾಜವಾದಿ ಪಕ್ಷ ತನ್ನ ಮಿತಿಮೀರಿದ ಆತ್ಮವಿಶ್ವಾಸಕ್ಕೆ ತಾನೇ ಬಲಿಯಾಯಿತು. ಚುನಾವಣೆಗಳಲ್ಲಿ ಭಾರೀ ಗೆಲವು ಪಡೆದೇ ಪಡೆಯುತ್ತೇವೆ, ಅಧಿಕಾರ ಖಂಡಿತಾ ಗಳಿಸುತ್ತೇವೆ ಎಂದು ಅವರು ಭಾವಿಸಿದ್ದರು. ಇದರಿಂದಾಗಿ ತಪ್ಪು ಚುನಾವಣೆ ತಂತ್ರವನ್ನು ಅನುಸರಿಸಿ, ಅದರ ಫಲಿತಾಂಶವಾಗಿ ಬಹುಮತಕ್ಕೆ 57 ಸೀಟು ಕಡಿಮೆ ಬಿತ್ತು.

ಅಧಿಕಾರಕ್ಕಾಗಿ ಮೂರನೇ ಪ್ರಮುಖ ಪ್ರತಿಸ್ಪರ್ಧಿಯಾಗಿದ್ದದ್ದು ಬಿ.ಎಸ್.ಪಿ. ಸಂಪೂರ್ಣ ಬಹುಮತ ದೊರೆಯುವುದಿಲ್ಲ ಎಂಬ ಅರಿವು ಬಿ.ಎಸ್.ಪಿ. ಮುಖಂಡರಾಗಿತ್ತು. ಅತಂತ್ರ ವಿಧಾನಸಭೆ ಬಂದಿದೆ. ಯಾರೂ ತಮ್ಮ ಬೆಂಬಲವಿಲ್ಲದೆ ಸರಕಾರ ರಚಿಸಲಾರದ ಸ್ಥಿತಿಯಲ್ಲಿ ತಮ್ಮ ಮುಖಂಡತ್ವ ಒಪ್ಪಿಕೊಳ್ಳಿ, ಇಲ್ಲವೆ ಹೊಸ ಚುನಾವಣೆಗಳನ್ನು ಎದುರಿಸಿ ಎಂದು ತನ್ನ ಜೊತೆಗೆ ಮೈತ್ರಿಗೆ ಬರುವವರಿಗೆ ಹೇಳಲು ಸಾಧ್ಯವಾಗುತ್ತದೆಂಬ ನಿರೀಕ್ಷೆಯೂ ಅವರಿಗಿತ್ತು. ಆದ್ದರಿಂದ ವಿಧಾನಸಭೆಯಲ್ಲಿ ತನ್ನ ಬಲವನ್ನು ಆದಷ್ಟೂ ಹೆಚ್ಚಿಸಿಕೊಳ್ಳಬೇಕೆಂಬ ಕಾರ್ಯತಂತ್ರ ಅನುಸರಿಸಿ 'ಬಹುಜನ' ದ ಬದಲು 'ಸರ್ವಜನ'ದ ಘೋಷಣೆ ನೀಡಿತು. ಅದು ಫಲಕೊಟ್ಟಿತು. ಏಕೆಂದರೆ ಅದಕ್ಕೆ 98 ಸ್ಥಾನಗಳು ದೊರೆತವು.

ಅಸಹಾಯಕತೆಗೆ ನೈತಿಕತೆಯ ವೇಷ

ವಿಧಾನಸಭಾ ಚುನಾವಣೆಗಳ ಅಂತಿಮ ಫಲಿತಾಂಶ ತನ್ನದೇ ಸರಕಾರ ರಚಿಸುವ ಬಿಜೆಪಿಯ ನಿರೀಕ್ಷೆಗಳನ್ನೆಲ್ಲಾ ಮಣ್ಣುಗೂಡಿಸಿತು. ಆದ್ದರಿಂದ ತನ್ನ ಅಸಹಾಯಕತೆಗೆ ನೈತಿಕತೆಯ ಬಣ್ಣಕೊಟ್ಟು ತಾನು ಪ್ರತಿಪಕ್ಷವಾಗಿ ಕೂರುವುದಾಗಿ ಘೋಷಿಸಿತು. ಆದರೂ ಮನದ ಮೂಲೆಯಲ್ಲೆಲ್ಲೋ ಇನ್ನೂ ಅಧಿಕಾರದ ಅಲ್ಪ ನಿರೀಕ್ಷೆಯಂತೂ ಇತ್ತು.

ಭಾರೀ ಹಣ ಸುರಿದು ಚುನಾಯಿತರಾದ ಬಿ.ಎಸ್.ಪಿ ಶಾಸಕರಿಗೆ ತಕ್ಷಣ ಹೊಸ ಚುನಾವಣೆಗಳು ಬೇಕಿರಲಿಲ್ಲ. ಅಲ್ಲದೆ ಸರಕಾರ ರಚಿಸಲು ಸಾಧ್ಯವಾಗದಿದ್ದರೆ ಬಿಎಸ್.ಪಿಯ ಒಂದು ವಿಭಾಗ ಸಮಾಜವಾದಿ ಪಕ್ಷವನ್ನು ಸೇರಿಕೊಳ್ಳುವ ಒಂದು ಬಲವಾದ ಸಾಧ್ಯತೆಯಿತ್ತು. ಮಾಯಾವತಿಗೆ ಉತ್ತರಪ್ರದೇಶದಲ್ಲಿ ಸಮಾಜವಾದಿ ಪಕ್ಷದ ಸರಕಾರದ ರಚನೆ ಅರಗಿಸಿಕೊಳ್ಳಲಾದ ವಿಷಯವಾದ್ದರಿಂದ ಹಾಗಾಗದಂತೆ ತಪ್ಪಿಸಲು ಆಕೆ ದೃಢನಿರ್ಧಾರ ಮಾಡಿದ್ದರು. ಈ ಸನ್ನಿವೇಶದಲ್ಲಿ ಉತ್ತರ ಪ್ರದೇಶದಲ್ಲಿ ಬಿಜೆಪಿ ನೇತೃತ್ವದ ಸರಕಾರವನ್ನು ಒಪ್ಪಿಕೊಳ್ಳಬೇಕಾಗಿ ಬಂತು. ಇದರಲ್ಲಾಗುವ ನಷ್ಟವನ್ನು ಕೇಂದ್ರದಲ್ಲಿ ಮಂತ್ರಿ ಸ್ಥಾನಗಳು ಹಾಗೂ ಕಾಂಶೀರಾಮ್‌ಗೆ ರಾಷ್ಟ್ರಪತಿ ಸ್ಥಾನದ ಮೂಲಕ ತುಂಬಿಕೊಳ್ಳಬಹುದೆಂದು ಆಕೆ ನಿರ್ಧರಿಸಿದರು. ಆದರೆ ಹೀಗಾಗಲು ಮೊದಲ ಘಟನೆಗಳು ಬಿ.ಎಸ್.ಪಿಯ ಪರವಾದವು. ಮುಲಾಯಂ ಸಿಂಗ್ ಸರಕಾರ ರಚಿಸುವ ಹಕ್ಕು ಮಂಡಿಸಿದರು. ಯಾವ ಪಕ್ಷಕ್ಕೂ ಸ್ಪಷ್ಟ ಜನಾದೇಶವಿಲ್ಲದ್ದರಿಂದ ಈ ದಾವೆಯನ್ನು ನಿರಾಕರಿಸುವ ಅಧಿಕಾರ ತನಗೆ ಬಿಟ್ಟದ್ದು ಎಂದರು ರಾಜ್ಯಪಾಲರು.

ರಾಜ್ಯಪಾಲರ ಸಂಘಪರಿವಾರ - ಬದ್ಧತೆ

ರಾಜ್ಯಪಾಲ ವಿಷ್ಣುಕಾಂತ ಶಾಸ್ತ್ರಿಯವರೆದುರು ಎರಡು ಪರ್ಯಾಯಗಳಿದ್ದವು. ಮೊದಲನೆಯದು, ಸಂವಿಧಾನದ ಆಶಯ, ಬೊಮ್ಮಾಯಿ ಕೇಸಿನಲ್ಲಿ ಸುಪ್ರೀಂ ಕೋರ್ಟಿನ ತೀರ್ಪು ಹಾಗೂ ಸರ್ಕಾರಿಯಾ ಆಯೋಗದ ಶಿಫಾರಸುಗಳ ಪ್ರಕಾರ ಸಮಾಜವಾದಿ ಪಕ್ಷವನ್ನು ಸರಕಾರ ರಚಿಸಲು ಆಹ್ವಾನಿಸುವುದು. ಈ ಹೀಗೆ ಮಾಡುವುದರ ಮೂಲಕ ಅವರು ಪ್ರಜಾಪ್ರಭುತ್ವ ಪರಂಪರೆಗಳನ್ನು ಬಲಗೊಳಿಸಬಹುದಿತ್ತು. ತನ್ನ ಸ್ಥಾನದ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಬಹುದಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಅವರು ಇನ್ನೊಂದು ಪರ್ಯಾಯವನ್ನು ಆರಿಸಿಕೊಂಡರು. ತನ್ನ ಬದ್ಧತೆಯ ಸಂವಿಧಾನ ಮತ್ತು ಪ್ರಜಾಪ್ರಭುತ್ವ ಪರಂಪರೆಗಳಿಗಿಂತ ಹೆಚ್ಚಿಗೆ ಬಿಜೆಪಿ ಮತ್ತು ಸಂಘ ಪರಿವಾರಕ್ಕೆ ಎಂಬುದನ್ನು ತೋರಿಸಿಕೊಟ್ಟರು. ಬಹುಮತ ಸಾಬೀತಾಗಬೇಕಾದ್ದು ವಿಧಾನಸಭೆಯಲ್ಲಿ, ರಾಜಭವನದಲ್ಲಿ ಅಲ್ಲ ಎಂಬ ಸುಪ್ರೀಂ ಕೋರ್ಟ್ ತೀರ್ಪನ್ನು ಪರಿಗಣಿಸದೆ ಅವರು ಸಮಾಜವಾದಿ ಪಕ್ಷ ತನ್ನ ಬಹುಮತ ಸಿದ್ಧಪಡಿಸಲು ಸಾಕಷ್ಟು ಶಾಸಕರಪಟ್ಟಿ ಸಲ್ಲಿಸಿಲ್ಲವೆಂದರು. ಬೇರೆ ಯಾವ ಪಕ್ಷವೂ ಸರಕಾರ ರಚಿಸುವ ದಾವೆ ಮಂಡಿಸದ್ದರಿಂದ ರಾಜ್ಯಪಾಲರು ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆಯ ಶಿಫಾರಸು ಮಾಡಿದರು. ಈ ಆಳ್ವಿಕೆ ಎರಡು ತಿಂಗಳುಗಳಿಗಿಂತ ಹೆಚ್ಚು ಕಾಲ ಇರಲು ಸಾಧ್ಯವಿಲ್ಲ ಎಂಬುದು ಕೇಂದ್ರ ಸರ್ಕಾರಕ್ಕೂ, ರಾಜ್ಯಪಾಲರಿಗೂ ತಿಳಿದಿತ್ತು. ಏಕೆಂದರೆ ರಾಜ್ಯಸಭೆ ಇದನ್ನು ಅನುಮೋದಿಸುತ್ತಿರಲಿಲ್ಲ. ಆದರೆ ಬಿಜೆಪಿ, ಬಿಎಸ್‌ಪಿಗೆ ಒಪ್ಪಂದಕ್ಕೆ ಬರಲು ಇನ್ನಷ್ಟುಸಮಯ ಬೇಕಿತ್ತು.

ಕಾಂಗ್ರೆಸ್ಸಿನ ದೂರದೃಷ್ಟಿಹೀನ ರಾಜಕೀಯ

ಕಾಂಗ್ರೆಸ್ ಇಲ್ಲಿ ದೂರದೃಷ್ಟಿ ಹೀನ ರಾಜಕಾರಣ ನಡೆಸಿತು. ಅದು ಸಮಾಜವಾದಿ ಪಕ್ಷಕ್ಕೆ ಬೆಂಬಲವನ್ನು ಅಧಿಕೃತವಾಗಿ ಘೋಷಿಸಬಹುದಿತ್ತು. ಆದರೆ ಅದು ಮೊದಲು ಸಮಾಜವಾದಿ ಪಕ್ಷ ಸಾಕಷ್ಟು ಸಂಖ್ಯೆಯನ್ನು ಒಟ್ಟು ಹಾಕಲಿ ಎಂದಿತು. ಕಾಂಗ್ರೆಸ್‌ನ ಒಳಗಿನ ಒಂದುವಿಭಾಗ ಈ ನಿಲುವನ್ನು ಒಪ್ಪದಿದ್ದರೂ, ಧರ್ಮನಿರಪೇಕ್ಷ ಸರಕಾರದ ರಚನೆಯಲ್ಲಿ ಅಡ್ಡಿ ಪಡಿಸಬಾರದು ಎಂದರೂ, ಕಾಂಗ್ರೆಸ್ ಮುಖಂಡತ್ವ ಅದಕ್ಕೆ ಗಮನಕೊಡಲಿಲ್ಲ. ಕೋಮುವಾದಿ ಶಕ್ತಿಗಳನ್ನು ಅಧಿಕಾರದಿಂದ ಹೊರಗಿಡಬೇಕೆಂಬ ರಾಷ್ಟ್ರೀಯ ಹಿತಾಸಕ್ತಿಯನ್ನು ಕೂಡಾ ಅದನು ನಿರ್ಲಕ್ಷಿಸಿರುವುದು ಸ್ಪಷ್ಟ. ಅದರ ಬದಲು ಸಮಾಜವಾದಿ ಪಕ್ಷದ ಮುಯ್ಯಿ ತೀರಿಸುವುದು ಅದಕ್ಕೆ ಮುಖ್ಯವಾಯಿತು. ಕಾಂಗ್ರೆಸ್ ಬೆಂಬಲ ಘೋಷಿಸಿದ್ದರೆ ತನ್ನ ಮೇಲೆ ಅಪಾರ ನೈತಿಕ ಒತ್ತಡ ಬರುತ್ತಿತ್ತು ಎಂದು ಸ್ವತಃ ರಾಜ್ಯಪಾಲರೇ ಒಪ್ಪಿಕೊಂಡಿದ್ದಾರಂತೆ. ಆದರೂ ಸಂಘ ಪರಿವಾರಕ್ಕೆ ಬದ್ಧತೆಯಿಂದಾಗಿ ಇದಕ್ಕೂ ಅವರು ಬಗ್ಗುತ್ತಿರಲಿಲ್ಲ ಎಂಬುದು ಬೇರೆ ಮಾತು.

ಬಿಜೆಪಿ-ಬಿಎಸ್‌ಪಿ ವ್ಯವಹಾರಕ್ಕೆ ಅವಕಾಶ

ಸಮಾಜವಾದಿ ಪಕ್ಷದ ದಾವೆಯನ್ನು ತಿರಸ್ಕರಿಸಿ, ರಾಷ್ಟ್ರಪತಿ ಆಳ್ವಿಕೆಯ ಶಿಫಾರಸ್ಸು ಮಾಡಿ ರಾಜ್ಯಪಾಲರು ಬಿಜೆಪಿ ಮತ್ತು ಬಿಎಸ್‌ಪಿಗೆ ಒಪ್ಪಂದಕ್ಕೆ ಬರಲು ಸಾಕಷ್ಟು ಸಮಯ ಒದಗಿಸಿದರು. ಈ ಬಗ್ಗೆ ಮಾತುಕತೆಗಳು ಕ್ಲಿಷ್ಟವಾಗಿದ್ದವು, ಹಲವು ಏಳು-ಬೀಳುಗಳನ್ನು ಕಂಡವು.

ಕಲ್ರಾಜ್ ಮಿಶ್ರಾ ಮತ್ತು ರಾಜನಾಥ್ ಸಿಂಗ್ ಬಿಎಸ್‌ಪಿ ಯೊಂದಿಗೆ ಸಖ್ಯದ ಪರವಾಗಿದ್ದರಿಂದ ಆರಂಭದಲ್ಲಿ ಕೇಂದ್ರದ ಮುಖಂಡತ್ವವೂ ಆಸಕ್ತಿ ತೋರಿಸಲಿಲ್ಲ. ಆದರೆ ಬಿಎಸ್‌ಪಿ ಒಂದು ಒಪ್ಪಂದಕ್ಕೆ ಬರಲು ಹತಾಶ ಪ್ರಯತ್ನ ನಡೆಸಿತು. ಬಿಜೆಪಿಯನ್ನು ಸಂತುಷ್ಟಗೊಳಿಸಲು ಪೋಟಾ(POTA)ದಿಂದ ಗುಜರಾತಿನವರೆಗೂ ಅದು ಕೇಂದ್ರ ಸರಕಾರವನ್ನು ಬೆಂಬಲಿಸಿತು. ಇದರಿಂದಲೂ ಫಲ ದೊರಕದಾದಾಗ ಅದುನೇರವಾಗಿ ವಾಜಪೇಯಿಯವರನ್ನೇ ಸಂಪರ್ಕಿಸಿತು. ಪತ್ರಿಕೆ-ಮಾಧ್ಯಮಗಳಲ್ಲಿನ ಸುದ್ದಿಗಳನ್ನು ನಂಬುವುದಾದರೆ ಬಿಎಸ್‌ಪಿ ಮುಖಂಡತ್ವ ಎಷ್ಟೊಂದು ಹತಾಶವಾಗಿತ್ತೆಂದರೆ ವಾಜಪೇಯಿಯವರು ತಮ್ಮ ಪರವಾಗಿ ಮಧ್ಯಪ್ರವೇಶಿಸಬೇಕು ಎಂದು ಅದು ಬಯಸಿತು. ಬಿಜೆಪಿ ಮುಖ್ಯಮಂತ್ರಿಯನ್ನು ಸ್ವೀಕರಿಸಲೂ ಅದು ಆಗ ಸಿದ್ಧವಾಗಿತ್ತು. ಇನ್ನೊಂದೆಡೆ ಗುಜರಾತ್ ಮಾರಣಹೋಮದಿಂದಾಗಿ ಎಲ್ಲೆಡೆಗೆ ಟೀಕೆಗೊಳಗಾಗಿದ್ದ ಬಿಜೆಪಿ ಕೇಂದ್ರ ಮುಖಂಡತ್ವಕ್ಕೆ ಬಿಎಸ್‌ಪಿಯೊಂದಿಗೆ ಒಂದು ವ್ಯಾಪಕ ಮೈತ್ರಿ ಒಂದು ಲಾಭಕಾರೀ ವ್ಯವಹಾರ ಎಂದೆನಿಸಿತು. ಇದರಿಂದಾಗಿ ಈ ಎರಡು ಪಕ್ಷಗಳ ನಡುವಿನ ಮೈತ್ರಿಯ ಮಾತುಕತೆಗಳಿಗೆ ಚಾಲನೆ ಸಿಕ್ಕಿತು.

ಮೊದಲ ಸುತ್ತಿನಲ್ಲಿ ಬಿಜೆಪಿಯ ಕೈಮೇಲಾಗಿತ್ತು. ಮಾಯಾವತಿ ಮುಖ್ಯಮಂತ್ರಿಯಾಗಬೇಕು, ಆಕೆಯ ಮೇಲೆ ಹತೋಟಿಯಿಡಲು ಬಿಜೆಪಿಯಿಂದ ಉಪಮುಖ್ಯಮಂತ್ರಿ ಇರಬೇಕು ಎಂದಾಗಿತ್ತು. ಅಲ್ಲದೆ ಬಿಜೆಪಿಗೆ ವಿಧಾನಸಭಾಧ್ಯಕ್ಷ ಸ್ಥಾನ ಹಾಗೂ ಕೇಂದ್ರದ ಎನ್‌ಡಿಎ ಮಾದರಿಯಲ್ಲಿ ಸಮನ್ವಯ ಸಮಿತಿ ಹಾಗೂ ಒಂದು ಸಮಾನ ಕನಿಷ್ಠ ಕಾರ್ಯಕ್ರಮ ಇರಬೇಕು ಎಂದಾಗಿತ್ತು.

ಆದರೆ ಇದನ್ನು ಅಂತಿಮಗೊಳಿಸುವ ಮೊದಲು ಕೇಂದ್ರದಲ್ಲಿನ ರಾಜಕೀಯ ಒಂದು ಸೂಕ್ಷ್ಮ ತಿರುವು ಪಡೆಯಿತು. ತೆಲುಗುದೇಶಂ ಮತ್ತಿತರ ಮಿತ್ರರ ಸರಕಾರವಿರೋಧಿ ನಿಲುವಿನಿಂದಾಗಿ ಬಿಎಸ್‌ಪಿಯೊಂದಿಗೆ ಲಾಭಕಾರಿ ಮೈತ್ರಿ ಈಗ ಒಂದು ರಾಜಕೀಯ ಅವಶ್ಯಕತೆಯಾಯಿತು. ಬಿಎಸ್‌ಪಿ ತಕ್ಷಣ ಇದರ ಪ್ರಯೋಜನ ಪಡೆಯಲು ಮುಂದಾಯಿತು. ಉಪಮುಖ್ಯಮಂತ್ರಿ ಇರುವುದಿಲ್ಲ ಎಂದು ಒಂದು ಪತ್ರಿಕಾಸಮ್ಮೇಳನದಲ್ಲಿ ಘೋಷಿಸಿ ಕಾಶಿರಾಮ್ ಬಿಜೆಪಿಯ ಬೇರೆ ಬೇಡಿಕೆಗಳನ್ನು ತಳ್ಳಿಹಾಕಿದರು. ಬಿಜೆಪಿ ರಾಜ್ಯ ಮುಖಂಡತ್ವ ತೀಕ್ಷ್ಣವಾಗಿ ಪ್ರತಿಕ್ರಿಯಿಸಿತು. ಆದರೆ ಕೇಂದ್ರ ಮುಖಂಡತ್ವದ ಎದುರು ಅವರು ತಣ್ಣಗಾದರು.

ಕೊನೆಯ ಸುತ್ತಿನ ಮಾತುಕತೆಗಳ ನಂತರ ಉಂಟಾದ ಒಪ್ಪಂದವೆಂದರೆ i. ಮಾಯಾವತಿಯವರ ನೇತೃತ್ವದಲ್ಲಿ ಸಮ್ಮಿಶ್ರ ಸರಕಾರ, ಉಪಮುಖ್ಯಮಂತ್ರಿ ಇರುವುದಿಲ್ಲ, ii. ಮಂತ್ರಿಗಳಿರುವ ಸಣ್ಣ ಮಂತ್ರಿಮಂಡಳ, ಇದರಲ್ಲಿ ಎರಡೂ ಪಕ್ಷಗಳಿಗೆ ಅನುಪಾತಿಕ ಪ್ರಾತಿನಿಧ್ಯ iii. ಬಿಜೆಪಿಗೆ ವಿಧಾನಸಭಾಧ್ಯಕ್ಷ ಸ್ಥಾನ ಹಾಗೂ . ಧೋರಣೆಯ ಪ್ರಶ್ನೆಗಳನ್ನು ನಿರ್ಧರಿಸಲು ಸಮನ್ವಯ ಸಮಿತಿಯ ಬದಲು ಒಂದು ಸಂಪುಟ ಸಮಿತಿ.

ಬಿಜೆಪಿ ತನ್ನ ಮಿತ್ರರನ್ನು ತಾನೇ ನೋಡಿಕೊಳ್ಳಬೇಕು ಎಂಬುದು ಬಿಎಸ್‌ಪಿ ಸೃಷ್ಟಿಸಿತ್ತು. 14 ಆರ್‌ಎಲ್‌ಡಿ ಶಾಸಕರು ಸರಕಾರ ರಚನೆಯಲ್ಲಿ ನಿರ್ಣಾಯಕ ಪಾತ್ರ ವಹಿಸಬಹುದೆಂಬುದನ್ನು ಅದು ಪರಿಗಣನೆಗೆ ತಗೊಳ್ಳಲಿಲ್ಲ. ಇದರ ಅರಿವಿದ್ದ ಅಜಿತ್‌ಸಿಂಗ್ ಮಾಯಾವತಿ ನೇರವಾಗಿ ತನ್ನೆಡೆಗೆ ಮಾತಾಡಿ, ತನ್ನ ಬೆಂಬಲಕ್ಕೆ ಪ್ರತಿಫಲ ನೀಡುವವರೆಗೂ ಬೆಂಬಲದ ಪತ್ರ ನೀಡಲಿಲ್ಲ. ಆರ್‌ಎಲ್‌ಡಿ ಯ 5 ಮಂತ್ರಿಗಳು ಸಂಪುಟದಲ್ಲಿರುತ್ತಾರೆ ಹಾಗೂ ಸಮನ್ವಯ ಸಮಿತಿಯಲ್ಲಿ ಒಂದು ಸ್ಥಾನವಿರುತ್ತದೆ.

ಬಿಜೆಪಿ ಹೊಂಚು - ಲಾಭ ಯಾರಿಗೆ? ನಷ್ಟಯಾರಿಗೆ?

ಹೀಗೆ ಮಾಯಾವತಿ ದಲಿತ-ವಿರೋಧಿ, ಅಲ್ಪಸಂಖ್ಯಾತ-ವಿರೋಧಿ ಮನುವಾದಿ ಬಿಜೆಪಿ ಮತ್ತು ಅದರ ಪ್ರಧಾನಮಂತ್ರಿ ವಾಜಪೇಯಿಯ ಬೆಂಬಲದಿಂದ ಅಧಿಕಾರದ ಪ್ರತಿಜ್ಞೆ ಸ್ವೀಕರಿಸಿದರು. ಈಗಿರುವ ಮುಖ್ಯ ಪ್ರಶ್ನೆಯೆಂದರೆ ಇಲ್ಲಿ ಕಳಕೊಂಡವರರಾರು, ಗಳಿಸಿಕೊಂಡವರಾರು?

ಮೇಲ್ನೋಟಕ್ಕೆ ಬಿಜೆಪಿಗೆ ಲಾಭವಾದಂತೆ ಕಾಣುತ್ತದೆ. ಅದರ ಕೈಯಲ್ಲೀಗ ಅಧಿಕಾರದ ಸೂತ್ರಗಳಿವೆ. ಯಾವುದೇ ಒತ್ತಡಗಳನ್ನು ಬದಿಗೊತ್ತಲು ಅದಕ್ಕೆ ಸಾಧ್ಯವಾಗಿದೆ. ಆದರೆ ಇದಕ್ಕೆ ಅದು ಬೆಲೆ ತೆರಬೇಕಾಗುತ್ತದೆ. ಅಲ್ಪಸಂಖ್ಯಾತರ ನಡುವೆ ಅದರ ನೆಲೆ ತೀವ್ರವಾಗಿ ಕುಸಿಯುತ್ತಿದೆ. ಬಿಎಸ್‌ಪಿ ಶಾಸಕರು ಅಧಿಕಾರ ಮೋಹದಿಂದ ಪಕ್ಷಕ್ಕೆ ಅಂಟಿಕೊಂಡಿದ್ದಾರೆ. ಆದರೆ ಮತ ನೀಡಿದ ಅಲ್ಪಸಂಖ್ಯಾತರಲ್ಲಿ ತಾವು ಮೋಸ ಹೋದೆವೆಂಬಭಾವನೆ ಬಂದಿದೆ. ದಲಿತರು ಒಂದ ವಿಭಾಗವೂ, ತಾವು ಇದುವರೆಗೂ ಮನುವಾದಿ ಎಂದುಟೀಕಿಸುತ್ತಿದ್ದ ಪಕ್ಷದೊಂದಿಗೆ ಮೈತ್ರಿಯಿಂದ ಅಸುಂತುಷ್ಟರಾಗಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಮೇಲ್ಜಾತಿ-ದಲಿತ, ಜಾಟ್-ಜಾದವ ಸಂಘಟನೆಗಳು ತೀವ್ರವಾದಂತೆ ಮುಖಂಡತ್ವದ ವಿರುದ್ಧ ಅಸಂತೃಪ್ತಿ, ಹತಾಶೆ ತೀವ್ರಗೊಳ್ಳುವುದು ಖಂಡಿತ. ಸಂಘರ್ಷಗಳನ್ನು ಹತೋಟಿಯಲ್ಲಿಡಲು ಬಿಎಸ್‌ಪಿಗೆ ಯಾವ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುವುದಿಲ್ಲ.

ಇನ್ನು ಬಿಜೆಪಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಕಲ್ರಾಜ್ ಮಿಶ್ರಾ ಮತ್ತು ರಾಜನಾಥ್ ಸಿಂಗ್‌ರಂತಹ ಮುಖಂಡರು ಈ ಮೈತ್ರಿಯಿಂದ ಸಂತುಷ್ಟರಾಗಿಲ್ಲ. ಸರಕಾರದಲ್ಲಿ ಕಿರಿಯ ಪಾಲುದಾರರಾಗಿರುವುದಕ್ಕಿಂತ ಪ್ರತಿಪಕ್ಷವಾಗಿರುವುದು ಒಳ್ಳೆಯದು ಎಂಬುದು ಅವರ ಅಭಿಪ್ರಾಯ. ಬಿಜೆಪಿ ಇಂದು ಬಯಲಿಗೆ ಬಂದಿದೆ, ಅದರ ಪ್ರತಿಷ್ಠೆಗೆ ಧಕ್ಕೆ ಬಂದಿದೆ.

ಆದರೆ ಬಿಎಸ್‌ಪಿಯೊಂದಿಗೆ ಮೈತ್ರಿಯ ಲಾಭಗಳನ್ನು ನೋಡಿದರೆ ಈ ನಕಾರಾತ್ಮಕ ಪರಿಣಾಮ ಬಿಜೆಪಿಗೆ ಅರ್ಥಹೀನ. ಮೊದನೆಯದಾಗಿ ಗುಜರಾತ್ ಪ್ರಶ್ನೆ ಮೇಲಿನ ಸಂಸದೀಯ ಬಿಕ್ಕಟ್ಟಿನಿಂದ ಪಾರಾಗಲು ಬಿಜೆಪಿಗೆ ಬಿಎಸ್‌ಪಿ ನೆರವಾಯಿತು. ಎರಡನೆಯದಾಗಿ, ಮುಂಬರುವ ರಾಷ್ಟ್ರಪತಿ ಚುನಾವಣೆಗಳಲ್ಲಿ ಬಿಜೆಪಿಯ ಬಲ ಹೆಚ್ಚುವಂತಾಗಿದೆ. ಮೂರನೆಯದಾಗಿ, ಬಿಜೆಪಿ ತ್ವರಿತವಾಗಿ ತನ್ನ ಬೆಂಬಲ ನೆಲೆಯನ್ನು ಕಳೆದುಕೊಳ್ಳುತ್ತಿರುವಾಗ ಬಿಎಸ್‌ಪಿ ಜತೆಗೂಡಿ ಸ್ಪರ್ಧಿಸಿ ಅಭೂತಪೂರ್ವ ಲಾಭಗಳಿಸುವ ನಿರೀಕ್ಷೆ ಬಿಜೆಪಿಗಿದೆ. ಆದ್ದರಿಂದ ಆರ್‌ಎಸ್‌ಎಸ್ ಈ ಒಪ್ಪಂದವನ್ನು ಅನುಮೋದಿಸಿತು. ಇದೊಂದು ದೀರ್ಘಕಾಲದ ಒಪ್ಪಂದವಾಗಿರಬೇಕು ಎಂದು ರಾಜ್ಯ ಮುಖಂಡರಿಗೆ ನಿರ್ದೇಶನ ನೀಡಿತು.

ವಿದ್ಯುತ್ ದರ ಏರಿಕೆ ವಿರೋಧಿಸಿ ಪ್ರಚಾರಾಂದೋಲನ

ವಿದ್ಯುತ್ ಕ್ಷೇತ್ರದ ಖಾಸಗೀಕರಣ ಹಾಗೂ ದುಬಾರಿ ದರಗಳ ಹೇರಿಕೆಯನ್ನು ವಿರೋಧಿಸಿ ರಾಜ್ಯಾದ್ಯಂತ ಪ್ರಚಾರ ಹಾಗೂ ಚಳುವಳಿ ನಡೆಸಲು ಸಿಪಿಐ(ಎಂ)ನ ರಾಜ್ಯ ಸಮಿತಿಯು ಕರೆ ನೀಡಿತ್ತು. ಅಂಗವಾಗಿ ಏಪ್ರಿಲ್ 22ರಿಂದ ಮೇ 10ರ ತನಕ ಶಾಖೆಗಳಿಂದ ಹಿಡಿದು ರಾಜ್ಯಸಮಿತಿಯವರೆಗೆ ಪಕ್ಷದ ಸದಸ್ಯರು ಹಾಗೂ ಹಿತೈಷಿಗಳು ಮನೆ-ಮನೆ ಪ್ರಚಾರ ನಡೆಸಿದರು. ವಿದ್ಯುತ್ ಸುಧಾರಣೆಯ ಹೆಸರಿನಲ್ಲಿ ಬರುತ್ತಿರುವ ದಗಲುಬಾಜಿ ಒಪ್ಪಂದ ವ್ಯವಹಾರಗಳು -ದುಬಾರಿಯಾದ ಬೆಲೆ ಏರಿಕೆ ಖಾಸಗೀಕರಣ ಕಮಿಷನ್ ವ್ಯವಹಾರಗಳು ಮುಂತಾದವುಗಳ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಜನರ ಗಮನಕೆ ತಂದರು.

ರಾಜ್ಯದಾದ್ಯಂತ ನಡೆದ ಚಳುವಳಿಯ ಭಾಗವಾಗಿ ರಾಜಧಾನಿ ಜಿಲ್ಲೆಯಾದ ಬೆಂಗಳೂರಿನಲ್ಲೂ ಸಹ ಲಕ್ಷಾಂತರ ಕರಪತ್ರಗಳೊಂದಿಗೆ ಕಾರ್ಮಿಕರು, ನೌಕರರು,



ಮಳವಳ್ಳಿಯಲ್ಲಿ ರಸ್ತೆ ತಡೆ

ರೈತರು, ಮದ್ಯಮ ವರ್ಗದ ಕುಟುಂಬಗಳು , ಸಣ್ಣ-ಪುಟ್ಟ ಕೈಗಾರಿಕೆಗಳ ಮಾಲೀಕರು ಮುಂತಾದ ಜನವಿಭಾಗಗಳನ್ನು ಸಂಪರ್ಕಿಸಲಾಯಿತು. ಸುಮಾರು 25 ಸಾವಿರ ಮನೆ ಭೇಟಿ ಮಾಡುವ ಮೂಲಕ ಜನರ ಗಮನ ಸೆಳೆಯಲು ಸಾಧ್ಯವಾಯಿತು.

ಜನಸ್ಪಂದನ

ಬೆಂಗಳೂರಿನ ವಿವಿಧ ಭಾಗಗಳಲ್ಲಿ ಒಂದು ವಾರ್ಡ್ ಪ್ರಚಾರ ಸಪ್ತಾಹ ನಡೆದ ಬಳಿಕ ಮೇ 7,8, 9 ಕಾಲ್ನಡಿಗೆ ಜಾಥಾಗಳನ್ನು ಸಂಘಟಿಸಲಾಗಿತ್ತು. ಮೇ 10 ರಂದು ಕೆ.ಪಿ.ಟಿ.ಸಿ.ಎಲ್ ಪ್ರಧಾನ ಕಛೇರಿಯೆದುರು ಸಮಾವೇಶಗೊಂಡ ಜಾಥಾಗಳು ನೂರಾರು ಕಾರ್ಯಕರ್ತರೊಂದಿಗೆ ಪ್ರತಿಭಟನೆ ನಡೆಸುವಲ್ಲಿ ಯಶಸ್ವಿಯಾದವು.

ವರ್ತೂರು ಪ್ರದೇಶದಲ್ಲಿ 22 ರಿಂದ ಪ್ರಚಾರ ಆರಂಭಿಸಿದ ಪಕ್ಷದ ಸ್ಥಳೀಯ ಶಾಖೆಗಳು ಸುಮಾರು 5000 ಮನೆಗಳಿಗೆ ಕರಪತ್ರ ಹಂಚುವ ಜೊತೆಗೆ ಗ್ರಾಹಕರೊಂದಿಗೆ ಚರ್ಚೆ ನಡೆಸಿದವು. 1ಲಕ್ಷ ಕರಪತ್ರ ವಿತರಿಸಲಾಯಿತು. ಮೂರು ದಿವಸಗಳ ಕಾಲ ನಗರ ಪ್ರದೇಶವನ್ನೂ ಒಳಗೊಂಡಂತೆ ಹಳ್ಳಿಗಳಲ್ಲಿ ಜಾಥಾ ನಡೆಸಲಾಯಿತು. ಯಶವಂತಪುರ ಹಾಗೂ ಶ್ರೀರಾಮಪುರ ಪ್ರದೇಶಗಳಲ್ಲಿ ಕಾರ್ಖಾನೆ ಕೆಲಸ ಮುಗಿಸಿ ಬಂದ ಬಳಿಕ ಕಾರ್ಮಿಕರು ಒಟ್ಟಾಗಿ ಸೇರಿ ಮನೆಗಳಿಗೆ ಭೇಟಿ ನೀಡುತ್ತಿದ್ದರು. ಪ್ರತಿದಿನ ಸಂಜೆ 6 ರಿಂದ 9ರವರೆಗೆ ಪ್ರಚಾರ ನಡೆಸುತ್ತಿದ್ದ ಲಕ್ಷ್ಮೀನಾರಾಯಣಪುರ ಶಾಖೆಯ ಕಾರ್ಮಿಕ ಸಂಗಾತಿಗಳು ಸಾರ್ವಜನಿಕರಿಂದ ಸುಮಾರು 5000 ರೂಪಾಯಿಗಳನ್ನು ಹೋರಾಟ ನಿಧಿ ಸಂಗ್ರಹ ಮಾಡಿ ಜನತೆಯ ಪ್ರತಿಕ್ರಿಯೆಯನ್ನು ನಮೂದಿಸಿದರು. ತರಕಾರಿ ಮಾರುವ ತಳ್ಳುವ ಗಾಡಿಗೆ ವೈವಿದ್ಯಮಯ ಅಲಂಕಾರ ಮಾಡಿ ಬಾವುಟ, ಬ್ಯಾನರ್‌ಗಳನ್ನು, ಮೈಕ್ ಕಟ್ಟಿಕೊಂಡು ಕಾಲ್ನಡಿಗೆ ಜಾಥಾ ನಡೆಸಿದ್ದು ವಿಶೇಷವಾಗಿತ್ತು. ಸಾರ್ವಜನಿಕರನ್ನು ಆಕರ್ಷಿಸಿತು.

ಆನೇಕಲ್ ತಾಲ್ಲೂಕಿನಲ್ಲೂ ರೈತರು ಹಾಗೂ ಕಾರ್ಮಿಕ ಸಂಗಾತಿಗಳು ಒಟ್ಟಾಗಿ ಕಲೆತು ಪ್ರಚಾರ ನಡೆಸಿದರು. 3 ದಿವಸಗಳ ಕಾಲ ಹಳ್ಳಿಗಳಲ್ಲಿ ಸಂಚರಿಸಿದ ಜಾಥಾ ಗ್ರಾಮಗಳಲ್ಲಿ ಸಭೆಗಳನ್ನು ನಡೆಸಿ ಬರುತ್ತಿರುವ ಬದಲಾವಣೆಗಳ ಕುರಿತು ವಿವರಿಸುತ್ತಾ ಹೊಸ ಅಭಿಪ್ರಾಯಗಳನ್ನು ಕ್ರೂಢೀಕರಿಸುತ್ತಾ ಮೇ 10ರಂದು ಬೆಂಗಳೂರಿಗೆ ತಲುಪಿತ್ತು. ತಾಲ್ಲೂಕಿನ ಜನತೆಗೆ ಹೊಸದಾಗಿಯು ವಿಶೇಷವಾಗಿಯೂ ಕಂಡ ಪ್ರಚಾರ ಹಾಗೂ ಜಾಥಾಗಳು ಉತ್ತಮ ಪ್ರತಿಕ್ರಿಯೆ ಗಳಿಸುವಲ್ಲಿ ಯಶಸ್ವಿಗೊಂಡವು.

ದೊಡ್ಡಬಳ್ಳಾಪುರದ ಐದಾರು ಬಡಾವಣೆಗಳಲ್ಲಿ ಪ್ರತಿದಿನ ಪ್ರಚಾರ ನಡೆಸಿದ ಸಂಗಾತಿಗಳು ಹೆಚ್ಚಾಗಿ ಭೇಟಿಯಾದದ್ದು ನೇಕಾರರು ಹಾಗೂ ವಿದ್ಯುತ್ ಮಗ್ಗಗಳ ಮಾಲಿಕರನ್ನು. ವಿದ್ಯುತ್‌ಚಾಲಿತ ನೇಕಾರಿಕೆಯನ್ನೇ ಅವಲಂಬಿಸಿ ಬದುಕು ದೂಡುತ್ತಿರುವ ಪಟ್ಟಣದ ಜನತೆ ಹಾಗೂ ವಿದ್ಯುತ್ ಕ್ಷೇತ್ರದ ''ಸುಧಾರಣೆಗಳ ಬಗ್ಗೆ ತಿಳಿದುಕೊಳ್ಳುತ್ತಿದ್ದಂತೆಯೇ ವಿಚಲಿತರಾಗುತ್ತಿದ್ದುದು ಸರ್ವೇಸಾಮಾನ್ಯವಾಗಿತ್ತು. 10ರ ಪ್ರತಿಭಟನಾ ಕಾರ್ಯಕ್ರಮದ ಅಂಗವಾಗಿ ಒಂದು ದಿನ ಆಟೋ ಪ್ರಚಾರ ನಡೆಸಲಾಯಿತು. ಕೆ.ಪಿ.ಟಿ.ಸಿ.ಎಲ್ ಕಛೇರಿಗೆ ಬೆಂಕಿ ಹಾಕುವ ಆಕ್ರೋಶದ ನುಡಿಗಳು ರೈತರ ಜೊತೆ ಚರ್ಚೆ ನಡೆಸುವಾಗ ಮಾಮೂಲಾಗಿ ಬಿಟ್ಟಿದ್ದವು.

ಆನೇಕಲ್, ವರ್ತೂರು, ಕೆಂಗೇರಿ, ಶ್ರೀರಾಮಪುರ, ಯಶವಂತಪುರ ಹಾಗೂ ನಗರ ಕೇಂದ್ರದ ವ್ಯಾಪ್ತಿಯಲ್ಲಿ ನೂರಾರು ಸಂಗಾತಿಗಳು ಪ್ರತಿನಿತ್ಯ ಪ್ರಚಾರ ನಡೆಸುವುದರೊಂದಿಗೆ ಪ್ರದೇಶವಾರು ಜಾಥಾಗಳನ್ನು ಸಂಘಟಿಸಿ ಕಾಲ್ನಡಿಗೆಯಲ್ಲಿ ಕೆ.ಪಿ.ಟಿ.ಸಿ.ಎಲ್ ಕಛೇರಿಯನ್ನು ತಲುಪಿದ್ದು ಹೊಸ ಉತ್ಸಾಹವನ್ನು ಮೂಡಿಸಿತ್ತು. ಈ ಉತ್ಸಾಹಕ್ಕೆ ಜನರಿಂದ ದೊರೆತ ವ್ಯಾಪಕ ಬೆಂಬಲ ಕಾರಣವಾಗಿತ್ತು ಎನ್ನದೇ ಬೇರೆ ದಾರಿಯೇ ಇಲ್ಲ. ಹೇಳುವುದೊಂದು ಮಾಡುವುದೊಂದನ್ನು ಕರಗತ ಮಾಡಿಕೊಂಡಿರುವ ಸರ್ಕಾರಗಳ ನೀತಿಗಳ ಕುರಿತು - ಜನತೆಗಾಗುವ ಒಡಕು ಕೆಡಕುಗಳ ಕುರಿತು ನಿಜವಾದ ಮಾಹಿತಿಗಳಿಲ್ಲದೇ ಮುಗ್ದತೆಯಿಂದಲೇ ಬದುಕುತ್ತಿರುವ ಬಹುತೇಕ ಜನತೆ ವಂಚನೆಯ ಬಣ್ಣಗಳನ್ನು ಬಿಚ್ಚಿಡುತ್ತಿದ್ದಂತೆಯೆ ಸರ್ಕಾರಕ್ಕೆ ಹಿಡಿ ಶಾಪ ಹಾಕಿ ಕೋಪ ತೋರಿಸಿಕೊಳ್ಳುತ್ತಿದ್ದುದು, ಮನಸ್ಸನ್ನು ಹಗುರ ಮಾಡಿಕೊಳ್ಳುತ್ತಿದ್ದುದು ವಿಶೇಷವಾಗಿತ್ತು.

ಮೇ 10ರಂದು ಪ್ರತಿಭಟನೆ

ಜಾಥಾಗಳಲ್ಲಿ ಬಂದ ಕಾರ್ಯಕರ್ತರು ಹಲವಾರು ಪ್ರದೇಶಗಳಿಂದ ಪಾಲ್ಗೊಂಡಿದ್ದ ಬೆಂಬಲಿಗರು ಕೆ.ಪಿ.ಟಿ.ಸಿ.ಎಲ್ ಕಛೇರಿಯೆದುರು ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡು 'ಸುಧಾರಣೆಯ' ನೆಪದಲ್ಲಿ ಬರುತ್ತಿರುವ ಖಾಸಗೀಕರಣ ಹಾಗೂ ದುಬಾರಿ ದರಗಳ ವಿರುದ್ಧ ಪ್ರತಿಭಟಿಸಿದರು. ಕೆ.ಪಿ.ಟಿ.ಸಿ.ಎಲ್‌ನ ಪುಲಕೇಶಿ ಪಡೆ ಸ್ಕ್ವಾಡ್‌ಗಳ ಕಿರುಕುಳಗಳ ವಿರುದ್ಧ ಘೋಷಣೆಗಳನ್ನು ಕೂಗಿದರು. ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಬೇಕು. ಸಣ್ಣಪುಟ್ಟ ಕೈಗಾರಿಕೆಗಳಿಗೆ ರಿಯಾಯ್ತಿ ದರದಲ್ಲಿ ವಿದ್ಯುತ್ ಸರಬರಾಜಾಗಬೇಕು. ಭಾಗ್ಯಜ್ಯೋತಿ ದರ ಏರಿಸಬಾರದು. ವಿದ್ಯುತ್ ಕ್ಷೇತ್ರವನ್ನು ಖಾಸಗೀಯವರಿಗೆ ವಹಿಸುವ ತೀರ್ಮಾನ ಕೈಬಿಡಬೇಕು. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಪ್ರಸ್ತಾಪಗಳನ್ನು ಕೂಡಲೇ ಕೈಬಿಡಬೇಕು. ಸ್ಲ್ಯಾಬ್‌ಗಳ ಹೆಸರಿನಲ್ಲಿ ವಂಚನೆ ನಿಲ್ಲಿಸಬೇಕು. ವಿದ್ಯುತ್ ಸೋರಿಕೆ ತಡೆಗಟ್ಟಬೇಕು. ಕೈಗಾರಿಕೋದ್ಯಮಿಗಳ ಕೋಟ್ಯಾಂತರ ರೂಪಾಯಿಗಳ ಬಾಕಿ ವಸೂಲಿ ಮಾಡಬೇಕು ಮುಂತಾದ ಘೋಷಣೆಗಳು ರಣ ಬಿಸಿಲಿನಲ್ಲಿ ಮಾರ್ದನಿಸುತ್ತಿದ್ದವು.

ಪಕ್ಷದ ರಾಜ್ಯ ಕಾರ್ಯದರ್ಶಿ ಎಸ್.ಸೂರ್ಯನಾರಾಯಣರಾವ್ ಎಸ್.ವೈ.ಗುರುಶಾಂತ್, ಪಕ್ಷದ ಜಿಲ್ಲಾ ಕಾರ್ಯದರ್ಶಿ ಕೇ.ಪ್ರಕಾಶ್, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಹೆಚ್.ಎನ್.ಗೋಪಾಲಗೌಡ, ಎನ್.ಪ್ರಭಾ, ಗೋಪಾಲಕೃಷ್ಣ ಮುಂತಾದವರು ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಆರ್.ಶ್ರೀನಿವಾಸ್, ಇ.ಕೆ.ಎನ್ ರಾಜನ್, ಎಸ್ ಸುರೇಂದ್ರರಾವ್ ಜಿಲ್ಲಾ ಸಮಿತಿಯ ಸದಸ್ಯರುಗಳು, ವಿವಿಧ ಸಂಘಟನೆಗಳ ಜಿಲ್ಲಾ ಹಾಗೂ ರಾಜ್ಯ ಮುಖಂಡರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜೆ.ಸಿ.ಬಯ್ಯಾರೆಡ್ಡಿಯವರು ಹೋರಾಟ ಬೆಂಬಲಿಸಿ ಪಾಲ್ಗೊಂಡಿದ್ದರು.

ಪಕ್ಷ, ಪ್ರತಿಷ್ಠೆ ಮೀರಿ ಬೆಂಬಲ

ನಗರದ ಶಾಂತಿನಗರ ವಾರ್ಡಿನಲ್ಲಿ ಪ್ರಚಾರ ನಡೆಸಲಾಗುತ್ತಿತ್ತು. INTUC ಯಲ್ಲಿ ಮುಖಂಡರಾಗಿರುವ ಮಹಿಳೆಯೊಬ್ಬರು ಪ್ರಚಾರಕ್ಕೆ ಬೆಂಬಲ ನೀಡಿ ನಾನು ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಕಾರ್ಮಿಕ ನಾಯಕಿ ಆದರೆ ಪಕ್ಷ ಭೇಧ ಮರೆತು ಈ ಹೋರಾಟಕ್ಕೆ ಬೆಂಬಲ ನೀಡುತ್ತೇನೆ. ಇದು ನನ್ನ ಕಡೆಯಿಂದ ಸಹಾಯವೆಂದು 50 ರೂಪಾಯಿಗಳ ನೋಟನ್ನು ಕಾರ್ಯಕರ್ತರಿಗೆ ನೀಡಿ ಹೋರಾಟಕ್ಕೆ ತನ್ನ ಸಹಭಾಗಿತ್ವವನ್ನು ತೋರಿದರು.

ಪ್ರಚಾರ ನಡೆಸುವ ವೇಳೆ ಬಾಲ್ಯದಿಂದಲೂ ಆರ್.ಎಸ್.ಎಸ್ ಸಂಘಟಕರಾಗಿ ಕೆಲಸ ಮಾಡುತ್ತಿರುವ ವ್ಯಕ್ತಿಯೊಬ್ಬರು ಪ್ರಚಾರದ ವೇಳೆಯಲ್ಲಿ ಕಾರ್ಯಕರ್ತರನ್ನು ಮನೆಗೆ ಕರೆದು ವಿದ್ಯುತ್ ಹೋರಾಟಕ್ಕೆ ಬೆಂಬಲ ಸೂಚಿಸಿ 100 ರೂಪಾಯಿಗಳನ್ನು ನೀಡುವ ಜೊತೆಗೆ ಅತಿಥಿಗಳಂತೆ ಸತ್ಕರಿಸಿ ಹೋರಾಟ ಯಶಸ್ವಿಯಾಗಲಿ ಎಂದು ಹಾರೈಸಿ ಕಳಿಸಿದ ಘಟನೆ ದೊಡ್ಡಬಳ್ಳಾಪುರದಲ್ಲಿ ಜರುಗಿತು.

ಯಶವಂತಪುರ ಪ್ರದೇಶದಲ್ಲಿ ಪ್ರಚಾರ ಮತ್ತು ಮನೆ-ಮನೆ ಭೇಟಿಯಲ್ಲಿ ಪಾಲ್ಗೊಂಡಿದ್ದ ವೈದ್ಯರಾದ ಪ್ರಕಾಶ್.ಸಿ.ರಾವ್ ಜನರಿಂದ ದೊರೆತ ಪ್ರತಿಕ್ರಿಯೆಗೆ ಮಾರುಹೋಗಿ ನಿರಂತರ ಪ್ರಚಾರ ಹಾಗೂ ಚಳುವಳಿಗಳನ್ನು ಕಟ್ಟುವ ಸ್ಫೂರ್ತಿ ಪಡೆದಿದ್ದು ಜೊತೆಯಲ್ಲಿದ್ದವರನ್ನು ಹುರಿದುಂಬಿಸಿದ್ದು ಗಮನೀಯವಾಗಿತ್ತು.

ಉದಾರವಾಗಿ ಹಣ ನೀಡಿದ ಸಾರ್ವಜನಿಕರು

ವಿದ್ಯುತ್ ಹೋರಾಟವನ್ನು ವ್ಯಾಪಕಗೊಳಿಸುವ , ದೊಡ್ಡಮಟ್ಟದಲ್ಲಿ ಚಳುವಳಿ ಬೆಳೆಸಬೇಕಾದ ಅನಿವಾರ್ಯತೆ ಇರುವ ಹಿನ್ನೆಲೆಯಲ್ಲಿ ಪ್ರಚಾರ ಹಾಗೂ ಜಾಥಾಗಳ ವೇಳೆಯಲ್ಲಿ ಹೋರಾಟಕ್ಕೆ ಜನರಿಂದ ನಿಧಿ ಕೇಳಲಾಯಿತು. ನೂರಕ್ಕೆ 90ರಷ್ಟು ಜನ ಸಂತೋಷದಿಂದಲೇ ಹಣ ನೀಡಿದರು. 10, 20, 50, 100 ರೂ.ಗಳ ನೋಟುಗಳನ್ನು ಸಾಮರ್ಥ್ಯಕ್ಕನುಗುಣವಾಗಿ ನೀಡಿದರು. ವಿಶೇಷವೆಂದರೆ ಕೂಲಿ ಮಾಡುವವರು ಸಣ್ಣ ಪುಟ್ಟ ಕಾರ್ಮಿಕರು ಬಡಜನತೆ ಉದಾರವಾಗಿ ಹಣ ನೀಡಿದರು. "ನಮಗಾಗಿ ಹೋರಾಟ ಆದರೆ ನಮ್ಮ ಶಕ್ತಿ ಇಷ್ಟೇ ಎಂದು" ನೊಂದು ನುಡಿಯುತ್ತಲೇ ಜೇಬಿನಲ್ಲಿದ್ದಷ್ಟು ಹಣ ಕೊಟ್ಟವರಿಗೇನು ಕಮ್ಮಿ ಇಲ್ಲ. ಹೋರಾಟಕ್ಕೆ, ಜನಪರ ಕೆಲಸಗಳಿಗೆ ಜನರ ಬೆಂಬಲ ಇದ್ದೇ ಇದೆ ಎನ್ನುವುದಕ್ಕೆ ಈ ಸಂದರ್ಭದಲ್ಲಿ ಒಂದೇ ವಾರದಲ್ಲಿ ಸಣ್ಣ-ಪುಟ್ಟ ರೂಪದಲ್ಲಿ ಸಂಗ್ರಹವಾದ ಒಂದು ಲಕ್ಷ ರೂಪಾಯಿ ಹಣ ಹಾಗೂ ಪಕ್ಷಾತೀತ ಬೆಂಬಲವೇ ಸಾಕ್ಷಿಯಲ್ಲವೇ.

ವರದಿ: ಪ್ರಭಾ.ಎನ್

ಸಾಲೆಗಾಮೆ ರೈತರು ಪಂಪ್‌ಸೆಟ್‌ಗಳಿಗೆ ಆಳವಡಿಸಿದ ಮೀಟರ್‌ಗಳನ್ನು ಬಿಚ್ಚಿ ಕೆಪಿಟಿಸಿಎಲ್‌ಗೆ ವಾಪಸ್ಸು ಮಾಡುತ್ತಿರುವುದು



ಬೆಂಗಳೂರಿನಲ್ಲಿ ಸಿ.ಸಿ. ಸಭೆ



ಬಂಗಾಳ ಅಸೋಸಿಯೇಷನ್‌ನ ಆತ್ಮೀಯ ಕ್ಷಣಗಳು...



ಗುಜರಾತ್ ಹತ್ಯಾಕಾಂಡ ವಿವರಿಸುವ 'ನರಮೇಧ' ಪುಸ್ತಕ ಬಿಡುಗಡೆ ಸೂರಿಯವರಿಂದ



ಕಾರ್ಯನಿರತ ಪತ್ರಕರ್ತರ ಸಂಘ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಬುದ್ಧದೇವ್



ಜ್ಯೋತಿಬಸು ಅವರೊಂದಿಗೆ ಮುಸ್ಲಿಂ ಅಲ್ಪಸಂಖ್ಯಾತರ ಸಂವಾದ.



ಪತ್ರಿಕಾಗೋಷ್ಠಿಯಲ್ಲಿ...



ದೇವೇಗೌಡರು ನೀಡಿದ್ದ ಸ್ನೇಹದ ಔತಣಕೂಟದಲ್ಲಿ..

ಏಕಸ್ವಾಮ್ಯ ಸ್ಥಾಪನೆಗೆ ಅಮೇರಿಕ ಮತ್ತೆ ಯತ್ನ

ಪುಟ 7 ರಿಂದ

ಕೇಂದ್ರ ಸಮಿತಿ, ಅದರಲ್ಲಿ ಪಾಲ್ಗೊಂಡ 1.5 ಕೋಟಿಗೂ ಹೆಚ್ಚಿನ ಕಾರ್ಮಿಕರನ್ನು ಅಭಿನಂದಿಸಿದೆ. ಆರ್ಥಿಕ ನೀತಿಗಳ ವಿರುದ್ಧದ ಹೋರಾಟಗಳನ್ನು ತೀಕ್ಷ್ಣ ರೀತಿಯಲ್ಲಿ ಮುಂದುವರಿಸಲು ನಿರ್ಧರಿಸಿತು.

ನಾನಾ ಕೈಗಾರಿಕೆಗಳು, ಕೃಷಿಕ್ಷೇತ್ರ ಮತ್ತು ಬೇರೆ ಬೇರೆ ಜನ ವಿಭಾಗಗಳು ನಡೆಸುತ್ತಿರುವ ಹೋರಾಟಗಳನ್ನು ಸಮನ್ವಯಗೊಳಿಸುವ ಯತ್ನಗಳಿಗೆ ಗಮನವನ್ನು ಕೇಂದ್ರೀಕರಿಸಬೇಕಾಗಿದೆ. ಎಲ್ಲಾ ಸಾಮೂಹಿಕ ಸಂಘಟನೆಗಳು ಮತ್ತು ಜಾಗತೀಕರಣ, ಉದಾರೀಕರಣ ಹಾಗೂ. ಖಾಸಗೀಕರಣದ ವಿರುದ್ಧ ಸೆಣಸುತ್ತಿರುವ ಎಲ್ಲಾ ಶಕ್ತಿಗಳ ಸಹಕಾರದೊಂದಿಗೆ, ಇಂಥ ಹೋರಾಟಗಳನ್ನು ಜನತೆಯ ಆಂದೋಲನ 'ವನ್ನಾಗಿ ಪರಿವರ್ತಿಸುವ ಕಾರ್ಯವನ್ನು ಪಕ್ಷ ಕೈಗೆತ್ತಿಕೊಳ್ಳಬೇಕಾಗಿದೆ.

ಆಮದಿನ ಮೇಲೆ ನಿರ್ಬಂಧಗಳ ತೆರವಿನಿಂದಾಗಿ ಅನೇಕ ಸಾಮಗ್ರಿಗಳ ಬೆಲೆಗಳು ಕುಸಿದು ಗ್ರಾಮೀಣ ಜನರ ಜೀವನಮಟ್ಟ ತೀವ್ರವಾಗಿ ಹದಗೆಡುತ್ತಿರುವುದಕ್ಕೆ ಕೇಂದ್ರ ಸಮಿತಿ ಕಳವಳ ವ್ಯಕ್ತಪಡಿಸಿತು. ಈ ವಿಷಯದ ಮೇಲೆ ಕಿಸಾನ್ ಸಭಾ ಮತ್ತು ಕೃಷಿಕೂಲಿಕಾರರ ಸಂಘಟನೆಗಳು ಯೋಜಿಸಿರುವ ಹೋರಾಟಗಳಿಗೆ ಬೆಂಬಲ ನೀಡಲು ನಿರ್ಧರಿಸಿತು.

ಲಂಗುಲಗಾಮಿಲ್ಲದ ಹಗರಣಗಳು

ವಾಜಪೇಯಿ ಸರಕಾರದಲ್ಲಿ ಹಗರಣಗಳು ಮತ್ತು ಭಾರೀ ಭ್ರಷ್ಟಾಚಾರ ಪ್ರಕರಣಗಳು ನಿರಂತರವಾಗಿ ನಡೆಯುತ್ತಿರುವುದನ್ನು ಕೇಂದ್ರ ಸಮಿತಿ ಗಮನಿಸಿದೆ. ಹೋಂ ಟ್ರೇಡ್ ಕಂಪನಿಯ ಹಗರಣ ಇತ್ತೀಚಿನದು. ಸಹಕಾರಿ ಸಂಘಗಳ ಸಾವಿರಾರು ಕೋಟಿ ರೂಪಾಯಿಗಳನ್ನು ಈ ಕಂಪನಿಯಲ್ಲಿ ತೊಡಗಿಸಲಾಗಿತ್ತು. ಈ ಕಂಪನಿಯೇ ಈಗ ಕುಸಿದಿದೆ. ಈ ಕಂಪನಿಯಲ್ಲಿ ಹಣ ತೊಡಗಿಸಿದ್ದ ನಾಗಪುರ ಸಹಕಾರಿ ಅಭಿವೃದ್ಧಿ ಬ್ಯಾಂಕ್ ಮತ್ತಿತರ ಅನೇಕ ಸಹಕಾರಿ ಬ್ಯಾಂಕ್‌ಗಳು ನೂರಾರು ಕೋಟಿ ರೂಪಾಯಿಗಳನ್ನು ಕಳೆದುಕೊಂಡಿದೆ. ಅಂದರೆ ಸಾವಿರಾರು ಜನರು ಕಷ್ಟದಿಂದ ಉಳಿತಾಯ ಮಾಡಿದ ಹಣ ಕೊಚ್ಚಿ ಹೋದಂತಾಗಿದೆ. ಸೀಮನ್ಸ್ ಪ್ರಾವಿಡೆಂಟ್ ಫಂಡ್‌ನ 93 ಕೋಟಿ ರೂಪಾಯಿಗಳನ್ನು ನುಂಗಿ ಹಾಕಿರುವುದು ಇಡೀ ಹಗರಣಕ್ಕೆ ಸಂಬಂಧಪಟ್ಟಂತೆ ಬೆಳಕಿಗೆ ಬಂದಿರುವ ಇನ್ನೊಂದು ಆಘಾತಕಾರಿ ಪ್ರಕರಣವಾಗಿದೆ.

ಉದಾರೀಕರಣ ಮತ್ತು ಹಣಕಾಸು ಸಂಸ್ಥೆಗಳ ಮೇಲಿನ ನಿಯಂತ್ರಣವನ್ನು ತೆಗೆದುಹಾಕುವುದರಿಂದ ಆಗುವ ಅನಾಹುತಗಳಿಗೆ ಈ ಪ್ರಕರಣ ಒಂದು ಉದಾಹರಣೆಯಾಗಿದ್ದು ಗಂಭೀರ ಎಚ್ಚರಿಕೆಯಾಗಿದೆ. ಭವಿಷ್ಯನಿಧಿ ಹಣವನ್ನು ಬಂಡವಾಳ ಮತ್ತು ಷೇರು ಮಾರುಕಟ್ಟೆಯಲ್ಲಿ ತೊಡಗಿಸುವುದರಿಂದ ಇಂಥ ಹಗರಣಗಳು ಉಂಟಾಗುತ್ತವೆ ಎನ್ನುವುದನ್ನು ಸೀಮನ್ಸ್ ಪ್ರಾವಿಡೆಂಟ್ ಫಂಡ್ ಪ್ರಕರಣ ತೋರಿಸಿಕೊಟ್ಟಿದೆ.

ಈ ಪ್ರಕರಣದ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷಿಸುವಂತೆ ಕೇಂದ್ರ ಸಮಿತಿ ಒತ್ತಾಯಿಸಿದೆ.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH